
ಗೌರಿ ಲಂಕೇಶರ

ಲಂಕೇಶ್

ಡಿಸೆಂಬರ್ 13, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಪ್ರಜಾತಂತ್ರದ ಅಣಕ

ಉಚಿತ ಕಲರ್ ಟಿ.ವಿ!

3,000 ಮೊಬೈಲ್!


1.5 ಕೋಟಿ ಚಿನ್ನದ ಉಂಗುರ!

ಪುಢಾರಿಗಳಿಗೆ ಮೋಟಾರ್‌ಬೈಕ್!

ಕೇಡಿ ಕುಟುಂಬ!



ಶಿವಮೊಗ್ಗ ನಾಗನ ತಲೆದಂಡ



ಕ್ರಿಮಿ ಸುಖಾನಂದ ಶೆಟ್ಟಿ ಕೊಲೆ


ಚಿತ್ರದುರ್ಗ


ತಿಂದು ತೇಗುತ್ತಿರುವ ಬಾಲಕೃಷ್ಣ



ಹೈಸ್ಕೂಲ್ ಶಿಕ್ಷಕರೇ ಕಾಪಿ ಹೊಡೆದರು!

ಚಾಮುಂಡೇಶ್ವರಿಯಲ್ಲಿ ಸೋಲುವವರು ಯಾರು?





ಚಾಮುಂಡೇಶ್ವರಿಯಲ್ಲಿ ಚುನಾವಣೆಯ ಬಿಸಿ ತಾರಕಕ್ಕೇರಿ ಈ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ಚುನಾವಣೆ ಮುಗಿದಿರುತ್ತದೆ. ಮುಂದಿನ ಸಂಚಿಕೆಯಲ್ಲಿ ಯಾರು ಗೆದ್ದರು? ಹೇಗೆ ಗೆದ್ದರು? ಎಂಬ ವಿಶ್ಲೇಷಣಾ ವರದಿಯು ನಿಮ್ಮ ಕೈ ಸೇರುತ್ತದೆ.

ಆದರೆ ಇಲ್ಲಿ ಕೇಳಬೇಕಾದ ಮತ್ತೊಂದು ಪ್ರಶ್ನೆ ಇದೆ. ಚಾಮುಂಡೇಶ್ವರಿಯಲ್ಲಿ ಜೆಡಿ(ಎಸ್)-ಕಾಂಗ್ರೆಸ್‌ನಲ್ಲಿ ಒಬ್ಬರು ಗೆಲ್ಲುತ್ತಾರೆ. ಯಾರು ಗೆಲ್ಲುತ್ತಾರೋ ಅವರು "ಇದು ತಮ್ಮ ನಿಸ್ವಾರ್ಥ ಸೇವೆಗೆ-ಅಕಳಂಕಿತ ರಾಜಕಾರಣಕ್ಕೆ ಸಿಕ್ಕ ಜನಬೆಂಬಲ" ಎಂದು ಬಣ್ಣಿಸುತ್ತಾರೆ. ಯಾರು ಗೆಲ್ಲುವುದಿಲ್ಲವೋ ಅವರು ಈಗಿನಿಂದಲೇ ಮುಂದಿನ ಚುನಾವಣೆಯ ಸಿದ್ಧತೆಯಲ್ಲಿ ತೊಡಗುತ್ತಾರೆ. ಆದರೆ ಮುಂದಿನ ಬಾರಿ ಈಗ ಗೆಲ್ಲದ ಕ್ಯಾಂಡಿಡೇಟೇ ಗೆಲ್ಲಬಹುದು. ಹಾಗೆ ನೋಡಿದರೆ ಚಾಮುಂಡೇಶ್ವರಿಯಲ್ಲಿ ಗೆಲ್ಲುವವರು ಯಾರು? ಎಂಬುದು ಕುದುರೆ ರೇಸಿನಲ್ಲಿ ಹಣ ಹಾಕದವರಲ್ಲಿ ಯಾವ ಕುದುರೆ ಗೆಲ್ಲುತ್ತದೆ ಎಂಬ ಬಗ್ಗೆ ಎಷ್ಟು ಆಸಕ್ತಿ ಇರುತ್ತದೋ ಅದಕ್ಕಿಂತ ಜಾಸ್ತಿ ಆಸಕ್ತಿಯೇನೂ ಇರುವುದಿಲ್ಲ. ಆಯಾ ಪಕ್ಷಗಳ ಕಾರ್ಯಕರ್ತರನ್ನು ಹೊರತುಪಡಿಸಿ...!



ಆದ್ದರಿಂದ ಈ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ನಡುವೆ ಗೆದ್ದವರು-ಮತ್ತು ಈ ಚುನಾವಣೆಯಲ್ಲಿ ಗೆಲ್ಲಲಾಗದೇ ಹೋದವರು ಎಂಬ ಎರಡೇ ವಿಭಾಗವಿರುತ್ತದೆ. ಹಾಗಾದರೆ ಈ ಚುನಾವಣೆಯಲ್ಲಿ ಸೋತವರು ಯಾರು? ಇದು ಕೇಳಬೇಕಾದ ಮುಖ್ಯ ಪ್ರಶ್ನೆ.

☛ ಈ ಚುನಾವಣೆಯಲ್ಲಿ ಎರಡೂ ಪಕ್ಷಗಳೂ ಹಣವನ್ನು ನೀರಿನಂತೆ ಹರಿಸಿ ಜನರ ನಿಯತ್ತನ್ನು ಕೊಂಡುಕೊಳ್ಳುವ ಪ್ರಯತ್ನ ನಡೆಸಿವೆ.

☛ ಜಾತಿ-ಮತಗಳ ಸಂಘಗಳನ್ನು ಮತ್ತಷ್ಟು ಗಟ್ಟಿಗೊಳಿಸಿ, ಅವುಗಳನ್ನು ತಮ್ಮ ಅನುಕೂಲಕ್ಕೆ ಬಳಸಿ ಜನರನ್ನು ಒಡೆಯುತ್ತಿರುವ ಜಾತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಾವೆ.

☛ ಜನರ ಬದುಕಿನ ಸಮಸ್ಯೆಗಳನ್ನು ಸಾರ್ವಜನಿಕ ಚರ್ಚೆಗೆ ತರದೇ ಇಡೀ ಚುನಾವಣೆಯನ್ನು ಇಬ್ಬರು ವ್ಯಕ್ತಿಗಳ ಪ್ರತಿಷ್ಠೆಗೆ ಇಳಿಸಿದ್ದಾರೆ. ಆ ಮೂಲಕ ಜನತೆಗೆ ಬರಬೇಕಿದ್ದ ಎಚ್ಚರವನ್ನು ಭ್ರಷ್ಟಗೊಳಿಸಿದ್ದಾರೆ.

ಒಂದು ಕಡೆ ಕಾಂಗ್ರೆಸ್ ಮತ್ತೊಂದು ಕಡೆ ಜೆಡಿ(ಎಸ್) ಇಬ್ಬರೂ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಂತ್ರಾಂಗವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಒಂದು ನಿಜವಾದ ಪ್ರಜಾತಂತ್ರದಲ್ಲಿ ಚುನಾವಣೆಯೆಂಬುದು ಜನತೆಯ ಸಾರ್ವಭೌಮತ್ವವನ್ನು ಮತ್ತೆ ದೃಢೀಕರಿಸಬೇಕು. ಆದರೆ ಎಲ್ಲಾ ಚುನಾವಣೆ ಯಂತೆ ಈ ಚುನಾವಣೆಯು ಜನತೆಯನ್ನು ಜಾಗೃತರನ್ನಾಗಿಸುವ ಬದಲು, ಸಕ್ರಿಯ ಸರ್ವಾಭೌಮರನ್ನಾಗಿಸುವ ಬದಲು ಭ್ರಷ್ಟರನ್ನಾಗಿಸಿದೆ, ದೀನರನ್ನಾಗಿಸಿದೆ. ಪ್ರಜಾತಂತ್ರದ ಬದಲು ಪ್ರಭು-ಪ್ರಜೆ ಸಂಬಂಧವನ್ನೇ ಗಟ್ಟಿಗೊಳಿಸಿದೆ.

ಹಾಗಿದ್ದಲ್ಲಿ ಜನತೆ, ಪ್ರಜಾಪ್ರಭುತ್ವ, ಇತ್ಯಾದಿಗಳ ದೃಷ್ಟಿಯಿಂದ ನೋಡುವುದಾದರೆ ಈ ಚುನಾವಣೆಯಲ್ಲಿ ಸಿದ್ಧರಾಮಯ್ಯನವರೇ ಗೆದ್ದರೂ, ಶಿವಬಸಪ್ಪನವರೇ ಗೆದ್ದರೂ ಸೋತಿದ್ದು ಮಾತ್ರ ಸಾಮಾನ್ಯ ಜನತೆ ಹಾಗೂ ಪ್ರಜಾತಂತ್ರವೇ ಅಲ್ಲವೇ?

ಎಮರ್ಜೆನ್ಸಿ ಸಂದರ್ಭದಲ್ಲಿ ಒಬ್ಬ ತಮಿಳು ಕವಿ ಈ ದೇಶದ ಪ್ರಜಾತಂತ್ರದ ಬಗ್ಗೆ ಹೀಗೆ ಲೇವಡಿ ಮಾಡಿದ್ದ:

ಬಿರ್ಲಾನಿಗೂ ಒಂದೇ ಓಟು
ಬೋರೇಗೌಡನಿಗೂ ಒಂದೇ ಓಟು
ಆಹಾ ಎಂತ ಪ್ರಜಾತಂತ್ರ....!
ಆದರೆ ಪ್ರತಿಬಾರಿ
ಬಿರ್ಲಾ ಗೆಲ್ಲುತ್ತಾನೆ
ಬೋರೇಗೌಡ ಸೋಲುತ್ತಾನೆ....!!

ಚಾರ್ವಾಕ

- ಶಿವಸುಂದರ್-

2002 ರಲ್ಲಿ ಗುಜರಾತಿನ ಹತ್ಯಾಕಾಂಡದಲ್ಲಿ ಒಂದು ನಾಗರಿಕ ಸಮಾಜ, ಒಬ್ಬ ಸ್ವಸ್ಥ ಹಾಗೂ ಹೃದಯವಂತ ಮನುಷ್ಯ ಊಹಿಸಿಕೊಳ್ಳಲೂ ಆಗದ ಮಟ್ಟಿಗೆ ಸಂಘ ಪರಿವಾರದ ಮೋದಿಗಳು ಮುಸ್ಲಿಮರ ಮೇಲೆ ನಡೆಸಿದ ಭೀಭತ್ಸವನ್ನು ಹಲವಾರು ಪತ್ರಿಕೆಗಳು ವರದಿ ಮಾಡಿದ್ದವು. ಅವೀಗ ನಮ್ಮ ದೇಶದ ರಕ್ತಸಿಕ್ತ ಇತಿಹಾಸದ ಭಾಗವೇ ಆಗಿಬಿಟ್ಟಿವೆ. ಆರು ವರ್ಷದ ಹಸುಳೆಯ ಬಾಯಿಗೆ ಪೆಟ್ರೋಲ್ ಸುರಿದು ಬಾಯಿಗೆ ಬೆಂಕಿ ಕೊಟ್ಟು ಜೀವಂತ ದಹಿಸುವುದು, ಹತ್ತಾರು ಜನರನ್ನು ಒಂದು ರೂಮಿನಲ್ಲಿ ಕೂಡಿ ಹಾಕಿ ರೂಮೊಳಗೆ ಗ್ಯಾಸ್ ಸಿಲಿಂಡರ್ ಸ್ಫೋಟಗೊಳಿಸುವುದು ಅಥವಾ ಇಡೀ ರೂಮಿಗೆ ಬೆಂಕಿ ಹಚ್ಚಿ ಸಾಯಿಸುವುದು, ಗರ್ಭಿಣಿಯ ಹೊಟ್ಟೆ ಸೀಳಿ-ಭ್ರೂಣವನ್ನು ತ್ರಿಶೂಲದ ಮೊನೆಗೆ ಚುಚ್ಚಿ ಮೆರವಣಿಗೆ ನಡೆಸುವುದು.... ನೆನಸಿಕೊಂಡಷ್ಟು ಕಂಗೆಡಿಸುವ ಬೆಚ್ಚಿ ಬೀಳಿಸುವ ಆದರೆ ನೈಜ ಕ್ರೌರ್ಯಗಳು.

ದಲಿತರನ್ನು ಸುಟ್ಟ ಬೆಂಕಿ-ದೇಶವನ್ನು ಸುಡುತ್ತದೆ



ಇದರ ಬಗ್ಗೆ ಅತ್ಯಂತ ಕಾಳಜಿಯಿಂದ ಚಿಂತಿಸುತ್ತಾ ಯಾವ ಪಂಥಕ್ಕೂ ಸೇರದ ಲೇಖಕರೊಬ್ಬರು, ಒಂದು ಸಮಾಜ ಇಷ್ಟೊಂದು ಭೀಭತ್ಸವನ್ನು ಮತ್ತೊಬ್ಬ ಮನುಷ್ಯ ಜೀವಿಯ ಮೇಲೆ ನಡೆಸುವುದನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯವಾಯಿತು ಎಂದು ಒಂದು ವಿಶ್ಲೇಷಣೆ ನೀಡಿದ್ದಾರೆ. ಏಕೆಂದರೆ ಇಷ್ಟೆಲ್ಲಾ ಭೀಭತ್ಸಕ್ಕೆ ಕಾರಣನಾದ ಮೋದಿಯನ್ನು ಮತ್ತೆ ಮುಖ್ಯಮಂತ್ರಿಯಾಗಿ ಬಿಂಬಿಸಿದ್ದಾರಲ್ಲಾ? ಇಷ್ಟೆಲ್ಲಾ ಆದಮೇಲೂ ಬಿಜೆಪಿ ಅಧಿಕೃತ ಮಾನ್ಯತೆ ಪಡೆದ ಚುನಾವಣಾ ಪಕ್ಷವಾಗಿ ಮುಂದುವರೆದಿದೆಯಲ್ಲಾ?

ಅವರ ಪ್ರಕಾರ ಭಾರತದ ಸಮಾಜದಲ್ಲಿ ಈ ಭೀಭತ್ಸ ಕ್ರೌರ್ಯ ಅಂತರ್ಗತವಾಗಿದೆ. ಈ ಕ್ರೌರ್ಯದ ಹೊಸ ಬಲಿಪಶುಗಳು ಮುಸ್ಲಿಮರಾಗಿರಬಹುದು. ಆದರೆ ಕಾಲಾನುಕಾಲದಿಂದಲೂ ಇವತ್ತಿಗೂ ದಲಿತರ ಮೇಲೆ, ಮಹಿಳೆಯರ ಮೇಲೆ ಇದೇ ಬಗೆಯ ಹಿಂಸಾಚಾರಗಳು ಸತತವಾಗಿ ನಡೆಯುತ್ತಲೇ ಬಂದಿವೆ. 1947ರ ನಂತರವೇ ಬೆಲ್ಚಿ, ಕೀಳ್ವೇನ್ಮಣಿಯಿಂದ ಮೊದಲುಗೊಂಡು ಇತ್ತೀಚಿನ ಕಂಬಾಲಪಲ್ಲಿ ಹಾಗೂ ಖೈರ್ಲಾಂಜಿಯತನಕ ಎಷ್ಟು ದಲಿತರನ್ನು ಸಂಘಪರಿವಾರ ಪ್ರತಿನಿಧಿಸುವ ಮೇಲ್ಜಾತಿ ಶಕ್ತಿಗಳು ಜೀವಂತ ದಹಿಸಿಲ್ಲ.... ಎಷ್ಟು ದಲಿತ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಅವರ ಮರ್ಮಾಂಗದಲ್ಲಿ ಕಾದ ಸಲಾಕೆ ತುರುಕಿ ಅಣುಅಣುವಾಗಿ ಸಾಯಿಸಿಲ್ಲ....

ದಲಿತರ ಮೇಲೆ ಈ ಮೇಲ್ಜಾತಿ ಸಮಾಜ ಎಸಗುತ್ತಿರುವ ಕ್ರೌರ್ಯವೆಲ್ಲವನ್ನು ಒಂದು ಸಹಜ ಸ್ಥಿತಿಯೇನೋ ಎಂಬಂತೆ ಈ ಸಮಾಜ ಅರಗಿಸಿಕೊಂಡುಬಿಟ್ಟಿದೆ. ಉದಾಹರಣೆಗೆ ಕಳೆದ ಸೆಪ್ಟೆಂಬರ್ 29ರಂದು ಮಹಾರಾಷ್ಟ್ರದ ಭಂಡಾರ ಜಿಲ್ಲೆಯ ಖೈರ್ಲಾಂಜಿ ಎಂಬ ಗ್ರಾಮದಲ್ಲಿ ಒಬ್ಬ ದಲಿತ ತಾಯಿ ಹಾಗೂ ಅವಳ ಮಗಳ ಮೇಲೆ ಅವರ ಇಬ್ಬರು ಗಂಡುಮಕ್ಕಳ ಎದುರೇ ಆರು ಜನ ಮೇಲ್ಜಾತಿ ಪುರುಷರು ಸಾಮೂಹಿಕ ಅತ್ಯಾಚಾರ ನಡೆಸಿ ಅವರ ಮರ್ಮಾಂಗದಲ್ಲಿ ದಪ್ಪ ಕಟ್ಟಿಗೆ ತುರುಕಿ ಸಾಯಿಸಿದರು. ಅದನ್ನು ನೋಡಲಾಗದೆ ಭಯಭೀತರಾಗಿ ತತ್ತರಿಸಿದ್ದ ಗಂಡು ಮಕ್ಕಳನ್ನು ಕೊಚ್ಚಿ ಸಾಯಿಸಿದ್ದರು.

ಯಾವ ಗುಜರಾತಿಗೂ ಕಡಿಮೆ ಇರದ ಈ ಕ್ರೌರ್ಯಕ್ಕೆ ಮೇಲ್ಜಾತಿ ಸಮಾಜ ಸ್ಪಂದಿಸಿದ್ದು ಹೇಗೆ? ಘಟನೆ ನಡೆದ ಮೂರು ದಿನಗಳ ತನಕ ಸ್ಥಳೀಯ ಠಾಣೆಗೇ ದೂರೇ ಹೋಗದಂತೆ ಇಡೀ ಹಳ್ಳಿ ವ್ಯವಸ್ಥಿತ ಎಚ್ಚರ ವಹಿಸಿತ್ತು. ಹೇಗೋ ಪ್ರಕರಣ ಬೆಳಕಿಗೆ ಬಂದ ಮೇಲೆ ಸ್ಥಳೀಯ ಪೊಲೀಸರು ಸಣ್ಣಪುಟ್ಟ ಕೇಸಿನಡಿ ಪ್ರಕರಣ ದಾಖಲಿಸಿ ಮುಚ್ಚಿ ಹಾಕುವ ಪ್ರಯತ್ನ ನಡೆಸಿದರು. ಆದರೆ ಯಾವಾಗ ದಲಿತ ಕಾರ್ಯಕರ್ತರು ಇದರ ವಿರುದ್ಧ ಮಹಾರಾಷ್ಟ್ರಾದ್ಯಂತ ಪ್ರತಿಭಟನೆ ಪ್ರಾರಂಭಿಸಿದರೋ ಆಗ ಸಮಾಜ ಎಚ್ಚೆತ್ತು ಅದರಲ್ಲಿನ ಮನುಷ್ಯವಂತರು ಈ ಕ್ರೌರ್ಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಇಡೀ ರಾಜ್ಯಾದ್ಯಂತ ಪ್ರತಿಭಟನೆ ದಾವಾನಲದಂತೆ ಹಬ್ಬುತ್ತಿದೆ. ಮೊನ್ನೆ ಕಾನ್ಪುರದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದ ಪ್ರಕರಣದ ವಿರುದ್ಧ ಮಹಾರಾಷ್ಟ್ರದಲ್ಲಿ ಭುಗಿಲೆದ್ದ 'ದಲಿತ್ ಮಿಲಿಟೆನ್ಸಿಗೆ' ಈ ಹಿನ್ನೆಲೆಯಿತ್ತು.

ಇದರ ತಾತ್ಪರ್ಯವೇನು? ಸಂಘ ಪರಿವಾರದ ಸಿದ್ಧಾಂತವಾದ ಹಿಂದುತ್ವ ಹಾಗೂ ಬ್ರಾಹ್ಮಣ್ಯ ಶ್ರೇಷ್ಠತೆ ಒಂದು ಸಾಮಾಜಿಕ ಕ್ರೌರ್ಯವಾಗಿ ದಲಿತರನ್ನು ಸುಡುತ್ತಾ ಬಂದಿದೆ. ಅದು ಎಲ್ಲಾ ಪಕ್ಷಗಳಲ್ಲೂ ಇದೆ.


ಆದ್ದರಿಂದಲೇ ಈ ಕ್ರೌರ್ಯವನ್ನು ಒಪ್ಪಿಕೊಂಡ ಸಮಾಜಕ್ಕೆ ಗುಜರಾತಿನ ಭೀಭತ್ಸ ದಿಗ್ಭ್ರಾಂತಿಯನ್ನು ಮೂಡಿಸುತ್ತಿಲ್ಲ. ಆದರೆ ಎಚ್ಚೆತ್ತ ಮತ್ತು ಜಾಗೃತಗೊಂಡ ದಲಿತ ಹಾಗೂ ಇತರ ದಮನಿತ ಸಮುದಾಯಗಳಲ್ಲಿ ಈ ಭೀಭತ್ಸ ಕ್ರೌರ್ಯ ಜೀವನ್ಮರಣದ ಹೋರಾಟ ಪ್ರಜ್ಞೆಯನ್ನು, ಮಿಲಿಟೆನ್ಸಿಯನ್ನು ಹುಟ್ಟುಹಾಕುತ್ತಿದೆ. ಬ್ರಾಹ್ಮಣ್ಯದ ವರ್ಣಾಶ್ರಮದ ಮೇಲುಕೀಳಿನ ತಾರತಮ್ಯದ ಬೆಂಕಿ ದಲಿತರನ್ನು ಮೊದಲಿಂದ ಸುಡುತ್ತಿದೆ. ದಲಿತರನ್ನು ಸುಟ್ಟ ಬೆಂಕಿ ಈಗ ಇಡೀ ದೇಶವನ್ನು ಸುಡುತ್ತಿದೆ. ■

ಸ್ವರ್ಗ ಮತ್ತು ನರಕಗಳು ಕಲ್ಪನೆಯ ಮೂಸೆಯಲ್ಲಿ ಜನಿಸಿದವು

No Comments

"ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸಿದ್ದರೆ ಸಿದ್ದುಗೆ ಗತಿ ಬರ್ತಿತ್ತಾ"

-ಶಿವಬಸಪ್ಪ (ಚಾಮುಂಡೇಶ್ವರಿ ಕ್ಷೇತ್ರ ಜೆಡಿ(ಎಸ್) ಕ್ಯಾಂಡಿಡೇಟ್



"ಕೆಲವೇ ಕೆಲವು ಜನರಿಗೆ ತಮ್ಮ ಶ್ರದ್ಧಾಂಜಲಿ ನೋಡು... ಸೌಭಾಗ್ಯವಿರುತ್ತದೆ. ಅಂಥಾ ಭಾಗ್ಯವಂತರಲ್ಲಿ ನಾನೂ ಒಬ್ಬ...

-ಗಿರೀಶ್ ಕಾಸರವ... (ಗೋವಾ ಚಿತ್ರೋತ್ಸ...ದಲ್ಲಿ ರಾಜ್ ಬದ... ತಮ್ಮ ಫೋಟೋ ಅಚ... ಬ...

"ಸಿಪಾಯಿಯಂತೆ ಮುನ್ನುಗ್ಗು-ಕಣ್ಣೀರು ಹಾಕಬೇಡ-ಹಿಂದೆ ನಾನಿದ್ದೇನೆ"


-ದೇವೇಗೌಡ (ಕುಮಾರಸ್ವಾಮಿಯ ಬಗ್ಗೆ)



"ನನ್ನ ಮಗ ಭಕ್ತ ಮಾರ್ಕಂಡೇಯನಿದ್ದಂತೆ"

-ದೇವೇಗೌಡ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಮೀಸಲಾತಿಯಿಂದ ಯಾವ ಸಮಸ್ಯೆಯೂ ಪರಿಹಾರವಾಗದು..."


-ನಾರಾಯಣಮೂ...

"ನವಜೋತ್‌ಸಿಂಗ್ ಸಿದ್ದು ಮಾ...ದ್ದನ್ನು ಕೊಲೆಯೆಂದು ಹೇಳಲಾಗ...ದಿಲ್ಲ, ನರಹತ್ಯೆ ಎನ್ನಬಹುದು"

-ಕ್ರಿಕೆಟಿಗ ಸಿದ್ದು ಮಾಡಿದ ಕೊಲೆಯ ಕೋರ್ಟು ತೀ...

"ನನ್ನ ಮಾತು ಕೇಳಿದ್ದಿದ್ರೆ ಸಿದ್ದು ಸಿಎಂ ಆಗ್ತಿದ...

-ಎಚ್.ಡಿ. ಕುಮಾರಸ್ವಾಮಿ



"ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಇಳಿಸಿದ್ದೂ ಸಹ ಚುನಾವಣಾ ನೀತಿಸಂಹಿತೆಯ ಉಲ್ಲಂಘನೆಯೇ"

-ದೇವೇಗೌಡ

ವಾರದ ಘೋಷಣೆ

"ಶಾಲೆಗೆ ಹೋಗುವ ಮಕ್ಕಳಲ್ಲಿ ಶೇ. 4 ರಷ... ಮಾತ್ರ ಮದ್ರಸಾಗಳಿಗೆ ಹೋಗುತ್ತಾರೆ"

-ರಾಜೇಂದ್ರ ಸಚ್ಚಾ... (ನಿವೃತ್ತ ನ್ಯಾಯಾಧೀ...

ವಾರದ ಸುಳ್ಳು

"ನ್ಯಾಯಾಲಯ ದತ್ತಪೀಠದಲ್ಲಿ ಗುಹೆಯ ಒ... ಹೋಮ-ಹವನಕ್ಕೆ ಅವಕಾಶ ನಿರಾಕರಿಸಿದೆಯೇ ವಿ... ಗುಹೆಯ ಹೊರಗಲ್ಲ"

-ಕೇಶವ ಹೆಗ... ವಿಎಚ್‌ಪಿ ರಾಜ್ಯ ಕಾರ್ಯದರ್ಶಿ

'ದೇವರ ಅಸ್ತಿತ್ವವೇ ನಂಬಿಕೆ... ಅನರ್ಹವಾದದ್ದು'.....
ದೇವರು, ಜೀವನ,
ಪುರೋಹಿತಶಾಹಿ
ಇತ್ಯಾದಿ ಕುರಿತ
ಸೂಕ್ತಿಗಳನ್ನು
'ಪೆರಿಯಾರ್'
(ಲೇ: ಪ್ರಭು ಗಣೇಶ್)
ಪುಸ್ತಕದಿಂದ ಆಯ್ದು ಕಳಿಸಿದಾ...
ಕೊಪ್ಪಳದ ವಿಜಯ
ಅಮೃತರಾಜ್.
ಇವು ನಿಮಗೆ
ದಾರಿದೀಪವಾಗುತ್ತವೆ ಎಂದು
ಆಶಿಸುತ್ತಾ....



-ವ...

ಜೈಲಿನಲ್ಲೊಂದು ಸೌಹಾರ್ದ ದಿನ

ಒಂದು ರೀತಿಯಲ್ಲಿ ಮೊನ್ನೆ ಡಿಸೆಂಬರ್ ಎರಡರಂದು ಚಿಕ್ಕಮಗಳೂರಿನಲ್ಲಿ ನಡೆದದ್ದು ಮೂರು ವರ್ಷಗಳ ಹಿಂದೆ ಆದದ್ದರ ಪುನರಾವರ್ತನೆಯೇ. ಅಂದು ಕೂಡ ಎಸ್.ಎಂ. ಕೃಷ್ಣರ ಸರ್ಕಾರ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಸೌಹಾರ್ದ ನಡಿಗೆಗೆ ಅನುಮತಿ ನೀಡಿರಲಿಲ್ಲ. ಆದರೂ ಸಂಘಪರಿವಾರದ ದ್ವೇಷಭರಿತ ಶೋಭಾಯಾತ್ರೆಯ ವಿರುದ್ಧ ನಾವು ಶಾಂತಿ, ಸಹಬಾಳ್ವೆಯನ್ನು ಸಾರಿ ಮೆರವಣಿಗೆ ನಡೆಸಲು ಯತ್ನಿಸಿದ್ದೆವು. ಆಗ ಸುಮಾರು ಸಾವಿರ ಸೌಹಾರ್ದ ಪ್ರೇಮಿಗಳನ್ನು ಕೃಷ್ಣರ ಸರ್ಕಾರ ಜೈಲಿಗೆ ದೂಡಿತ್ತು.

ಮೊನ್ನೆ ಕೂಡ ಕೋ-ಜಾ ಸರ್ಕಾರ ನಮ್ಮ ಸೌಹಾರ್ದ ನಡಿಗೆಗೆ ಅನುಮತಿ ನಿರಾಕರಿಸಿತಲ್ಲದೆ, ಶೋಭಾಯಾತ್ರೆಯಲ್ಲಿ ಸಂಘಪರಿವಾರವು ಜಿಲ್ಲಾಡಳಿತ 'ವಿಧಿಸಿದ್ದ' ಶರತ್ತುಗಳನ್ನು ಪಾಲಿಸುತ್ತದೋ, ಇಲ್ಲವೋ ಎಂದು ವೀಕ್ಷಿಸಲು ಸೇರಿದ್ದ 30 ಜನರನ್ನು ಮುಂಜಾನೆಯೇ ಯಾವ ಕಾರಣವನ್ನೂ ನೀಡದೆ ಬಂಧಿಸಿತ್ತು. ಈ ಅಕ್ರಮ ಬಂಧನದ ವಿರುದ್ಧ ಪ್ರತಿಭಟಿಸಿದ ನಾನು ಸೇರಿದಂತೆ ಇನ್ನೂ ಐವತ್ತು ಜನರನ್ನು ಜೈಲು ಪಾಲಾಗಿಸಿತು. ಆ ನಂತರ ಬಸವರಾಜ ದೇವರು ಸೇರಿದಂತೆ ಮತ್ತೆ ನಲವತ್ತು ಜನ ಬಂಧನಕ್ಕೊಳಗಾದರು. ಹೀಗೆ ಅಂದು ಮುಂದುವರಿದ ಬಂಧನಗಳಿಂದಾಗಿ ಮಧ್ಯಾಹ್ನದ ಹೊತ್ತಿಗೆ ಸುಮಾರು ನೂರೈವತ್ತು ಜನ ಕೋಮು ಸೌಹಾರ್ದಿಗಳು ಚಿಕ್ಕಮಗಳೂರು ಜೈಲಿನಲ್ಲಿ ಜೊತೆಗೂಡುವಂತಾಯಿತು.

ಆದರೆ ವಿಪರ್ಯಾಸವೆಂದರೆ ಸಂಘಪರಿವಾರ ಜಿಲ್ಲಾಡಳಿತ ವಿಧಿಸಿದ ಶರತ್ತುಗಳನ್ನು ಮುರಿಯಿತು. ಆದರೆ ಅವರ್‍ಯಾರ ಬಂಧನವೂ ಆಗಲಿಲ್ಲ. ಕಾನೂನು ಮತ್ತು ನ್ಯಾಯ ಎತ್ತಿ ಹಿಡಿಯಲು ಬಂದ ನನ್ನ ಬಂಧನವಾಯಿತು. ಇದು ಈ ಸರ್ಕಾರದ ನಿಜ ಮುಖ.

ಆಕ್ಸ್‌ಫರ್ಡ್ ಮುಖವಾಡದ ಹಿಂದಿದ್ದ ಅಪ್ಪಟ ಜಾತಿವಾದಿ- ಕೋಮುವಾದಿ ಎಸ್ಸೆಂ ಕೃಷ್ಣರಿಗೂ, ಅಧಿಕಾರಕ್ಕಾಗಿ ಕೋಮುವಾದಿ ಬಿಜೆಪಿಗಳೊಂದಿಗೆ ಕೈ ಜೋಡಿಸಿರುವ ಪುತ್ರಪ್ರೇಮಿ-ಮಣ್ಣಿನಮಗ ದೇವೇಗೌಡರಿಗೂ ಯಾವುದೇ ವ್ಯತ್ಯಾಸವಿಲ್ಲ. (ಆದರೆ ಕೃಷ್ಣ-ಗೌಡ ನಡುವೆ ಅಧಿಕಾರದಲ್ಲಿದ್ದ ಧರಂ ಸಿಂಗ್-ಸಿದ್ಧರಾಮಯ್ಯನವರ ಸರ್ಕಾರ ತನಗೆ ಸಾಧ್ಯವಾದಷ್ಟು ಸಂಘಪರಿವಾರದ ಕುತಂತ್ರಗಳನ್ನು ತಡೆಯಿತಲ್ಲದೇ, ಬಾಬಾಬುಡನ್‌ಗಿರಿಯಲ್ಲಿ ನ್ಯಾಯಾಲಯಗಳ ಆದೇಶಗಳನ್ನು ಪಾಲಿಸಲು ಪ್ರಯತ್ನಪಟ್ಟಿತು ಎಂಬುದು ಗಮನಾರ್ಹ). ಇಲ್ಲದಿದ್ದರೆ, ಜಾತ್ಯತೀತ ಎಂಬ ಪದಕ್ಕೆ ಅವಮಾನ ಮಾಡಿರುವ ಗೌಡ ಮತ್ತವರ ಪುತ್ರ ಈ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ.

ಹಿಂದಿನಂತೆ ಮೊನ್ನೆಯೂ ಚಿಕ್ಕಮಗಳೂರಿನ ಜೈಲಿನಲ್ಲಿ ಒಂದು ಪುಟ್ಟ ಕರ್ನಾಟಕ ಸೇರಿತ್ತು. ಅಲ್ಲಿ ದಲಿತರು, ರೈತರು, ಕಾರ್ಮಿಕರು, ಬುಡಕಟ್ಟು ಜನಾಂಗದವರು, ಮುಸ್ಲಿಮರು, ಪ್ರಾಧ್ಯಾಪಕರುಗಳು, ಬರಹಗಾರರು, ಹೋರಾಟಗಾರರು ಎಲ್ಲರೂ ಸೇರಿದ್ದೆವು. ಕಳೆದ ಭಾನುವಾರ ಬೆಂಗಳೂರಿನಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ನಾನು ಹೇಳಿದಂತೆ, ಜೈಲಿನಲ್ಲಿ ನಾವೆಲ್ಲಾ ಚರ್ಚಿಸಿದೆವು, ಹಾಡಿದೆವು, ಜೊತೆಗೆ ಊಟ ಮಾಡಿದೆವು, ಹೋರಾಟವನ್ನು ಮುನ್ನಡೆಸುವ ನಮ್ಮ ನಿಲುವನ್ನು ಮತ್ತಷ್ಟು ದೃಢ ಮಾಡಿಕೊಂಡೆವು. ಅಲ್ಲಿದ್ದ ಜಾತ್ಯತೀತ ವಾತಾವರಣ, ಸೌಹಾರ್ದದ ಕನಸು, ಎಲ್ಲವೂ ಎಷ್ಟು ಉಲ್ಲಾಸಕರವಾಗಿತ್ತೆಂದರೆ, ಅನಿವಾರ್ಯ ಕಾರ್ಯಗಳಿಂದಾಗಿ ಬೆಂಗಳೂರಿನಲ್ಲೇ ಉಳಿದ ಹಲವು ಮಿತ್ರರು 'ನಮಗೆಲ್ಲಾ ಹೊಟ್ಟೆಕಿಚ್ಚು ಪಡಿಸಬೇಡಿ' ಎಂದು ಹೇಳುತ್ತಿದ್ದರು.

ಈ ಬಾರಿ ನಾನು ಚಿಕ್ಕಮಗಳೂರಿಗೆ ಹೋಗಲು ಸಾಧ್ಯವಾಗುತ್ತದೋ, ಇಲ್ಲವೋ ಎಂಬಷ್ಟು ಕೆಲಸಗಳಿದ್ದವು. ಆದರೆ ನಿಮ್ಮೆಲ್ಲರ ಪ್ರೀತಿಯ ಲಂಕೇಶರ ಮಗಳಾಗಿ, ಜವಾಬ್ದಾರಿಯುತ ಪತ್ರಕರ್ತೆಯಾಗಿ ನಾನು ಹೇಗಾದರೂ ಸೈ, ಅಲ್ಲಿಗೆ ಹೋಗಲೇಬೇಕೆಂದು ನಿರ್ಧರಿಸಿದೆ. ನಿಮಗೆಲ್ಲಾ ಗೊತ್ತಿರುವಂತೆ ನಿಮ್ಮ ಈ ಪತ್ರಿಕೆಯ ಪ್ರಧಾನ ಆಶಯವೇ ಸಮಾಜದ ಕೊಳಕನ್ನು ಬೆಳಕಿಗೆ ತಂದು ಅದರ ನಿವಾರಣೆಗೆ ಶ್ರಮಿಸುವುದು. ಆದ್ದರಿಂದಲೇ ವರದಿ ಪತ್ರಿಕೋದ್ಯಮವನ್ನು ತೊರೆದು ಸಮಾಜಮುಖಿ ಪತ್ರಿಕೋದ್ಯಮವನ್ನು ಈ ಪತ್ರಿಕೆ ಅನುಸರಿಸುತ್ತಾ ಬಂದಿದೆ. ಇದಿಷ್ಟೇ ಅಲ್ಲದೆ, ವೇದಿಕೆಯಲ್ಲಿನ ಮಿತ್ರರು ನನಗಾಗಿ ಒಂದು ಲ್ಯಾಪ್‌ಟಾಪ್‌ಅನ್ನು, ಇಂಟರ್‌ನೆಟ್ ಸಂಪರ್ಕವನ್ನು ಸಿದ್ಧಮಾಡಿಕೊಂಡು 'ಜೈಲಿನಿಂದಲೇ ನಿಮ್ಮ ಕೆಲಸ ಮುಂದುವರಿಸಿ. ಆದರೆ ಯಾವುದೇ ಕಾರಣಕ್ಕೂ ಬಾರದೇ ಇರಬೇಡಿ' ಅಂದಿದ್ದರು. ಇಷ್ಟಾದಮೇಲೆ ನಾನು ಬೆಂಗಳೂರಿನಲ್ಲೇ ಇರಲು ಹೇಗೆ ಸಾಧ್ಯ? ಶುಕ್ರವಾರ ಮಧ್ಯರಾತ್ರಿ ಚಿಕ್ಕಮಗಳೂರಿಗೆ ಹೊರಟೆ. ಆದರೆ ಹಾಸನ ತಲುಪುವಷ್ಟರಲ್ಲಿ 3.30 ಆಗಿದ್ದರಿಂದ ಅಲ್ಲೇ ತಂಗಿದೆವು. ಆದರೆ ಬೆಳಿಗ್ಗೆ ಆರು ಗಂಟೆಗೆ ಫೋನ್ ಕರೆಗಳು ಬರಲಾರಂಭಿಸಿದವು. ಅಶೋಕ್, ವಾಸು, ಯುವರಾಜ್, ದೀಪು ಸೇರಿದಂತೆ ನಮ್ಮ ವೇದಿಕೆಯ ಸದಸ್ಯರು ತಂಗಿದ್ದ ಹೋಟೆಲ್‌ಗಳಿಗೆ ದಾಳಿಯಿಟ್ಟ ಪೊಲೀಸರು ಅವರನ್ನೆಲ್ಲಾ ಬಂಧಿಸಿದ್ದರು. ಆದರೆ ಅಷ್ಟೊತ್ತಿಗೆ ವೇದಿಕೆಯ ಇನ್ನೂ ಹೆಚ್ಚು ಜನ ಚಿಕ್ಕಮಗಳೂರಿಗೆ ಬಂದಿಳಿದಿದ್ದರು. ಅವರನ್ನೆಲ್ಲಾ ಬಸ್ ನಿಲ್ದಾಣದಲ್ಲಿ ಭೇಟಿ ಮಾಡಿ ನಾವೆಲ್ಲಾ ಪ್ರತಿಭಟನಾ ಮೆರವಣಿಗೆ ಮಾಡುವುದೆಂದು ನಿರ್ಧರಿಸಿದೆವು. ಚಿಕ್ಕಮಗಳೂರನ್ನು ಸಮೀಪಿಸುತ್ತಿದ್ದಂತೇ ಕಾರಿನಿಂದ ಇಳಿದು ಬಸ್ ಹತ್ತಿ ಬಸ್ ನಿಲ್ದಾಣವನ್ನು ನಾನು ಮತ್ತು ಬಿಳಿದಾಳೆ ಈಶ ತಲುಪುತ್ತಿದ್ದಂತೇ.. ಅದೆಲ್ಲಿದ್ದರೋ ನಮ್ಮ ವೇದಿಕೆಯ 50 ಜನ! ಅವರೆಲ್ಲ ಪ್ರತ್ಯಕ್ಷರಾಗಿ ಕ್ಷಣಾರ್ಧದಲ್ಲಿ ನಮ್ಮ ಮೆರವಣಿಗೆ ಪ್ರಾರಂಭವಾಗಿಬಿಟ್ಟಿತು!



ಜೈಲಿನಲ್ಲಿ ಚರ್ಚೆ ನಡೆಸುತ್ತಿರುವ ವೇದಿಕೆ ಸದಸ್ಯರು

ಕಂಡಹಾಗೆ



ಕಳೆದ ನಾಲ್ಕು ವರ್ಷಗಳಿಂದ ಹೀಗೆ ಏನೇ ಅಡಚಣೆ ಬಂದರೂ ನಾವು ಕರ್ನಾಟಕವನ್ನು ಸೌಹಾರ್ದ ತಾಣವನ್ನಾಗಿ ಉಳಿಸಿಕೊಳ್ಳಬೇಕೆಂದು ನಡೆಸಿಕೊಂಡು ಬಂದಿರುವ ಹೋರಾಟವೇ ಇವತ್ತು ಸಂಘಪರಿವಾರಕ್ಕೆ ನುಂಗಲಾರದ ತುತ್ತಾಗಿದೆ. ನಮ್ಮ ಯಾವ ಸವಾಲನ್ನೂ ಸ್ವೀಕರಿಸಲಾಗದೆ, ನಮ್ಮ ಯಾವ ಸಾಕ್ಷ್ಯಗಳನ್ನು ಅಲ್ಲಗಳೆಯಲಾಗದೆ ಮುಖಭಂಗಕ್ಕೀಡಾಗಿರುವ ಸಂಘಪರಿವಾರ ಇವತ್ತು ದೇವೇಗೌಡರ ಢೋಂಗಿ ಜಾತ್ಯತೀತ ಜನತಾದಳದೊಂದಿಗೆ ಅಧಿಕಾರ ಹಿಡಿದಿರುವುದರಿಂದ ನಮ್ಮ ವಿರುದ್ಧ ಅಧಿಕಾರ ಬಲವನ್ನು ಪ್ರಯೋಗಿಸಲು ಯತ್ನಿಸುತ್ತಿದೆ.

ಆದ್ದರಿಂದಲೇ ನಮ್ಮನ್ನೆಲ್ಲಾ ಜೈಲಿಗೆ ದೂಡಿದ ರಾಜ್ಯ ಸರ್ಕಾರ, ನಮ್ಮ ಆತ್ಮವಿಶ್ವಾಸವನ್ನು ಮತ್ತು ದೃಢ ಸಂಕಲ್ಪವನ್ನು ಕುಗ್ಗಿಸಲು ಏನು ಮಾಡಿತೆಂದರೆ, ನೂರೈವತ್ತು ಜನರಿದ್ದ ನಾವು ಪ್ರತಿಯೊಬ್ಬರೂ ಇಬ್ಬರು ಸ್ಥಳೀಯರಿಂದ ಶ್ಯೂರಿಟಿಯನ್ನೂ, ತಲಾ ಹತ್ತು ಸಾವಿರ ರೂಪಾಯಿಗಳ ಬಾಂಡ್‌ಅನ್ನೂ ನೀಡಿದರೆ ಮಾತ್ರ ಜಾಮೀನಿನ ಮೇಲೆ ನಮ್ಮನ್ನೆಲ್ಲಾ ಬಿಡುಗಡೆ ಮಾಡಲಾಗುವುದು ಎಂದು ಬೆದರಿಸಿತು. ಹಾಗೆಯೇ, ಜಾಮೀನು ನೀಡದವರನ್ನು ದೂರದ ಬಳ್ಳಾರಿ ಜೈಲಿಗೋ, ಬೆಳಗಾವಿ ಜೈಲಿಗೋ ವರ್ಗಾಯಿಸಲಾಗುತ್ತದೆ ಎಂದೂ ಪರೋಕ್ಷವಾಗಿ ಎಚ್ಚರಿಸಿತು.



ಗೌರಿಯೊಂದಿಗೆ ಸೌಹಾರ್ದ ಮಿತ್ರರು

ಆದರೆ ಯಾವ ತಪ್ಪನ್ನೂ ಮಾಡದಿದ್ದ, ಶಾಂತಿ ಸೌಹಾರ್ದಕ್ಕಾಗಿ ಹೋರಾಟ ನಡೆಸಿದ್ದ ನಾವು 'ಶ್ಯೂರಿಟಿಯನ್ನಾಗಲಿ, ಹತ್ತು ಸಾವಿರ ರೂಪಾಯಿಗಳನ್ನಾಗಲಿ ಕೊಡುವುದಿಲ್ಲ, ಬದಲಾಗಿ ಯಾವುದೇ ಕಾರಣ ನೀಡದೇ ನಮ್ಮನ್ನು ಇಡೀ ದಿನ ಅಕ್ರಮವಾಗಿ ಬಂಧಿಸುವ ಮೂಲಕ ಜಿಲ್ಲಾಡಳಿತ ಮಾನವಹಕ್ಕುಗಳನ್ನು ಉಲ್ಲಂಘಿಸಿದೆಯಲ್ಲದೆ, ಸಿಆರ್‌ಪಿಸಿಯನ್ನು ಸಿರ್ಲಕ್ಷಿಸಿದೆ. ಆದ್ದರಿಂದ ನಮ್ಮನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು' ಎಂದು ಹೇಳಿ ಆ ಕ್ಷಣದಿಂದಲೇ ಅಮರಣಾಂತ ಉಪವಾಸವನ್ನು ಪ್ರಾರಂಭಿಸಿದೆವು.

ಈ ಮಧ್ಯೆ ನಮ್ಮ ಕೆಲವು ಹಿತೈಷಿಗಳು ಗೃಹ ಸಚಿವ ಎಂ.ಪಿ. ಪ್ರಕಾಶ್‌ರವರಿಗೆ ಫೋನ್ ಮಾಡಿ ನಮ್ಮನ್ನೆಲ್ಲ ಬಂಧಿಸಿರುವುದನ್ನು ತಿಳಿಸಿದರು; ತಕ್ಷಣವೇ ನಮ್ಮನ್ನೆಲ್ಲ ಬಿಡುಗಡೆ ಮಾಡಬೇಕೆಂದು ಒತ್ತಾಯ ತಂದರು. ಪ್ರಕಾಶ್‌ರವರು ನಾನೂ ಸೇರಿದಂತೆ ಹಲವರಾದರೂ ಶ್ಯೂರಿಟಿ ಮತ್ತು ಬಾಂಡ್ ನೀಡಿದರೆ ಸಾಕು, ಮಿಕ್ಕವರನ್ನು ಬೇಷರತ್ತಾಗಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು. ಆದರೆ ನಮ್ಮ ನಡುವೆ ಅಂತಹ ಬೇರ್ಪಡಿಸುವಿಕೆ ಸಾಧ್ಯವಿಲ್ಲ ಎಂದಾಗ, ಜಿಲ್ಲಾಡಳಿತದೊಂದಿಗೆ ಪ್ರಕಾಶ್ ಮಾತನಾಡುತ್ತೇನೆ ಎಂದರು.

ಆನಂತರ ಜೈಲಿಗೆ ಆಗಮಿಸಿದ ಡಿಸಿ ಮತ್ತು ಎಸ್ಪಿ ಮತ್ತದೇ ಶ್ಯೂರಿಟಿ, ಹತ್ತು ಸಾವಿರ ರೂಪಾಯಿ ಬಾಂಡ್ ಎಂದು ಪುನರುಚ್ಚರಿಸಿದರು. ಅದಕ್ಕೆ ನಮ್ಮ ಪ್ರತಿಕ್ರಿಯೆ ಧಿಕ್ಕಾರದ ಘೋಷಣೆ ಮತ್ತು ಅಮರಣಾಂತ ಉಪವಾಸವೇ ಆಗಿತ್ತು. ಇದನ್ನು ಪ್ರಕಾಶ್‌ರವರಿಗೆ ತಿಳಿಸಿದಾಗ 'ಅವರು ಜಿಲ್ಲಾ ಮಂತ್ರಿಯ (ಬಿಜೆಪಿಯ ಶಂಕರಮೂರ್ತಿ) ಒತ್ತಡದಲ್ಲಿರಬಹುದು' ಎಂದು ತಕ್ಷಣವೇ ಡಿಸಿಯೊಂದಿಗೆ ಫೋನಿನಲ್ಲಿ ಮಾತನಾಡಿದರು.

ಹೀಗೆ ಸುಮಾರು ಎರಡು ಗಂಟೆಗಳ ಕಾಲ ಜಿಲ್ಲಾಡಳಿತದೊಂದಿಗೆ ನಡೆದ ಚರ್ಚೆ ಮತ್ತು ವಾಗ್ವಾದದ ನಂತರ, ನಮಗೆ ಬೇಷರತ್ ಬಿಡುಗಡೆ ನೀಡದೇ ವಿಧಿಯಿಲ್ಲ ಎಂದು ಮನಗಂಡ ಜಿಲ್ಲಾಡಳಿತ "ಹೋಗಲಿ, ಇದೇ ಮೂರು ಮತ್ತು ನಾಲ್ಕನೇ ತಾರೀಖಿನಲ್ಲಿ ಚಿಕ್ಕಮಗಳೂರಿನಲ್ಲಿ ಯಾವುದೇ ಕಾರ್ಯಕ್ರಮ ಅಥವಾ ಪ್ರತಿಭಟನೆ ನಡೆಸುವುದಿಲ್ಲ ಎಂದು ಲಿಖಿತ ರೂಪದಲ್ಲಿ ಮಾತು ಕೊಡಿ" ಎಂದಿತು. ಹೇಗಿದ್ದರೂ ನಾವು ಆ ದಿನಗಳಂದು ಯಾವ ಕಾರ್ಯಕ್ರಮವನ್ನೂ ಇಟ್ಟುಕೊಂಡಿರಲಿಲ್ಲವಾದ್ದರಿಂದ ನಾವು ಅದನ್ನು ಲಿಖಿತವಾಗಿ ಕೊಟ್ಟೆವು. ಮಧ್ಯರಾತ್ರಿ ಬಿಡುಗಡೆ ಹೊಂದಿದ ನಂತರ, ಬೆಂಗಳೂರಿಗೆ ಹೊರಟು ಇದೇ ಭಾನುವಾರ ಮುಂಜಾನೆ ತಲುಪಿದೆವು. ಪ್ರಯಾಣದ ದಣಿವು, ಆದರೆ ನಮ್ಮ ಹೋರಾಟದಲ್ಲಿ ಮತ್ತೊಂದು ಯಶಸ್ವಿ ಹೆಜ್ಜೆಯನ್ನು ಇಟ್ಟದ್ದರ ಹೆಮ್ಮೆಯಲ್ಲಿ ಈ ಲೇಖನವನ್ನು ಬರೆಯುತ್ತಿದ್ದೇನೆ, ಈ ಸಂಚಿಕೆಯನ್ನು ಹೊರತರುತ್ತಿದ್ದೇವೆ.

ಈ ವರ್ಷವೂ ನಮ್ಮ ಹೋರಾಟಕ್ಕೆ ಫಲ ದಕ್ಕಿದೆ. ನಮ್ಮ ಹೋರಾಟಗಳಿಗೆ ಮಣಿದು 2004ರಿಂದ ಜಿಲ್ಲಾಡಳಿತ ಗಿರಿಯ ಮೇಲೆ ಹೋಮ-ಹವನದಂತ ವೈದಿಕ ಕಾರ್ಯಕ್ರಮಗಳಿಗೆ ಅವಕಾಶ ನಿರಾಕರಿಸಿದೆ. ಡಿಸೆಂಬರ್ 3ರ ಅಸಲಿ ಘೋಷಿತ ಶೋಭಾಯಾತ್ರೆಯನ್ನು ಪರಿವಾರವೇ ರದ್ದುಪಡಿಸಿದೆ. ಡಿಸೆಂಬರ್ 3ರ ನಮ್ಮ ಹೋರಾಟ ಇದರ ಮುಂದಿನ ಹೆಜ್ಜೆಯದ್ದು.


ಇವತ್ತು ಬಾಬಾಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆಯನ್ನಾಗಿಸುವ ಸಂಘಪರಿವಾರದ ಉದ್ದೇಶಕ್ಕೆ ನಮ್ಮ ವೇದಿಕೆ ದೊಡ್ಡ ಅಡ್ಡಗಾಲಾಗಿದೆ. ಆದರೆ ಕರ್ನಾಟಕವನ್ನು ಮತ್ತೊಂದು ಗುಜರಾತ್ ಆಗಿಸುವ ಅವರ ದುರುದ್ದೇಶ ಕರಾವಳಿ ಪ್ರದೇಶಗಳಲ್ಲಿನ ಗಲಭೆಗಳಲ್ಲಿ ನಿಜರೂಪ ತಾಳುತ್ತಿದೆ. ಇದು ಇಡೀ ಕರ್ನಾಟಕವನ್ನು ಆವರಿಸಿಕೊಳ್ಳದಂತೆ ತಡೆಯುವುದು ಕರ್ನಾಟಕದ ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಮ್ಮ ಕರ್ನಾಟಕ ಕೋಮುಸೌಹಾರ್ದ ವೇದಿಕೆಯು ತನ್ನ ಹೋರಾಟದಿಂದಾಗಿಯೇ ಬೆಳೆಯುತ್ತಾ ಸಾಗಿರುವುದನ್ನು ನೋಡಿ ಸಹಿಸಲಾಗದೇ ಕೆಲವರು ನಮ್ಮ ವಿರುದ್ಧ ಸಾಕ್ಷ್ಯ ರಹಿತ ಆರೋಪಗಳನ್ನು ಮಾಡಿದ್ದರಲ್ಲದೇ, ಒಂದೆರಡು ಪರ್ಯಾಯ ಸಂಘಟನೆಗಳನ್ನು ಸ್ಥಾಪಿಸಿದ್ದರು. ಆದರೆ ಆ ಸಂಘಟನೆಗಳು ಒಂದೆರಡು ಪತ್ರಿಕಾಗೋಷ್ಠಿ ಒಂದೆರಡು ಸಾಂಕೇತಿಕ ಪ್ರತಿಭಟನೆಗಳ ನಂತರ ಸ್ಥಗಿತಗೊಂಡಿವೆ. ಆದರೆ ಈ ಮಧ್ಯೆ ಸಂಘಪರಿವಾರದ ಸಂಚಿನಿಂದಾಗಿಯೇ ಕರಾವಳಿ ಹೊತ್ತಿ ಉರಿಯುತ್ತಿದೆ. ಇದನ್ನು ನೋಡಿಯಾದರೂ, ನಮ್ಮ ರಾಜ್ಯದ ಪ್ರಜ್ಞಾವಂತರು ವೇದಿಕೆಗೆ ತಮ್ಮ ಬೆಂಬಲವನ್ನು ನೀಡುವಂತಾಗಲಿ ಎಂದು ಆಶಿಸುತ್ತೇನೆ. ಕರ್ನಾಟಕ ರಾಜ್ಯವು ಮೋದಿಯ ಹಾದಿ ಹಿಡಿಯದಂತೆ ನೋಡಿಕೊಳ್ಳುವಷ್ಟರ ಮಟ್ಟಿಗಾದರೂ ಅವರು ತಮ್ಮ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಡುತ್ತಾರೆಯೇ?

-ಗೌರಿ ಲಂಕೇಶ್

ಹೊಸ ಕೂಸು: ಲಂಕೇಶ್ ಪ್ರಕಾಶನ

ಇನ್ನೂ ಎರಡು ವರ್ಷಗಳಾಗಿಲ್ಲ, ಆದರೆ ಅಗಲೇ ಮೂರು ಸಂಸ್ಥೆಗಳನ್ನು ಹುಟ್ಟು ಹಾಕಿದ್ದೇವೆ. ಇನ್ನು ಮೂರೇ ತಿಂಗಳಲ್ಲಿ ನಿಮ್ಮ 'ಲಂಕೇಶ್' ವಾರ ಪತ್ರಿಕೆಗೆ ಎರಡು ವರ್ಷ ತುಂಬುತ್ತದೆ. ಇವತ್ತು ಇಡೀ ರಾಜ್ಯದಲ್ಲಿ ನಿಮ್ಮ ಪ್ರೋತ್ಸಾಹದೊಂದಿಗೆ ಈ ಪತ್ರಿಕೆ ಏಕೈಕ ವಿರೋಧ ಪಕ್ಷವಾಗಿ ಬೆಳೆದಿದೆಯಲ್ಲದೆ, ಜಾತ್ಯತೀತರ ದನಿಯಾಗಿದೆ, ದಮನಿತ ವರ್ಗಗಳ ವೇದಿಕೆಯಾಗಿದೆ. ಈ ಮಧ್ಯೆ ನಮ್ಮ 'ಗ್ರೈಡ್' ಮಾಸಿಕಕ್ಕೂ ಒಂದು ವರ್ಷವಾಗುತ್ತಿದೆ. ಇವತ್ತು ಸ್ಪರ್ಧಾ ಪತ್ರಿಕೆಗಳ ನಡುವೆ 'ಗ್ರೈಡ್'ಗೆ ಎಷ್ಟು ಬೇಡಿಕೆ ಇದೆ ಎಂದರೆ ಆ niche ನಲ್ಲಿ ನಮ್ಮದೇ ಅತಿಹೆಚ್ಚು ಪ್ರಸಾರವುಳ್ಳ ಮಾಸಿಕವಾಗಿದೆ.

ಈಗ ಯಾವ ಸದ್ದುಗದ್ದಲವಿಲ್ಲದೆ ನಮ್ಮ ಮೂರನೇ ಸಂಸ್ಥೆಯಾದ 'ಲಂಕೇಶ್ ಪ್ರಕಾಶನ'ವನ್ನು ಸ್ಥಾಪಿಸಿದ್ದೇವೆ. ಈಗಾಗಲೇ ಈ ಸಂಸ್ಥೆಯಿಂದ ಪರೀಕ್ಷಾ ಸ್ಪರ್ಧಾರ್ಥಿಗಳಿಗೆಂದು ಮೂರು ಪುಸ್ತಕಗಳನ್ನು ಪ್ರಕಟಿಸಿದ್ದೇವಲ್ಲದೆ, ಈಗ ಕುವೆಂಪು ವಿಶ್ವವಿದ್ಯಾಲಯದಲ್ಲಿ ಡಿಗ್ರಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿರುವ ಅಪ್ಪನ 'ಗುಣಮುಖ' ನಾಟಕವನ್ನೂ ಹೊರತಂದಿದ್ದೇವೆ. ಹಾಗೆಯೇ ಕಳೆದ ವಾರ ನಮ್ಮ ಸುಕನ್ಯಾ ಕನಾರಳ್ಳಿಯವರು ಅನುವಾದಿಸಿರುವ 'ಅಲ್ಲಿಂದ ಇಲ್ಲಿಗೆ- ಅನುವಾದಿತ 'ಅವಳ' ಕತೆಗಳು' ಎಂಬ ಪುಸ್ತಕವನ್ನು ಪ್ರಕಟಿಸಿದ್ದೇವೆ. ಈ ಪುಸ್ತಕದಲ್ಲಿ ಇಸ್ಮತ್ ಚುಗ್ತಾಯಿ ಮಹಾಶ್ವೇತಾ ದೇವಿ, ಹಂಸಾ ವಾಡಕರ್ ಸೇರಿದಂತೆ ದೇಶದ ಪ್ರಖ್ಯಾತ ಮಹಿಳಾ ಲೇಖಕರ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.






ಇದಿಷ್ಟೇ ಅಲ್ಲದೆ, ಹಲವು ವರ್ಷಗಳಿಂದ ಲಭ್ಯವಿರದಿದ್ದ ಅಪ್ಪನ ಪುಸ್ತಕಗಳನ್ನೂ, ಹಾಗೆಯೇ ಹೊಸ ಪುಸ್ತಕಗಳನ್ನು ಹೊರತರುವ ಕೆಲಸ ಸಾಗುತ್ತಿದೆ. ಇವುಗಳಲ್ಲಿ 'ದೊರೆ ಈಡಿಪಸ್ ಮತ್ತು ಅಂತಿಗೊನೆ' ನಾಟಕ, 'ಪ್ರಸ್ತುತ' ಎಂಬ ವಿಚಾರ ವಿಮರ್ಶೆಗಳ ಸಂಕಲನ ಪ್ರಮುಖ. ಹಾಗೆಯೇ ಅಪ್ಪನ ಜನಪ್ರಿಯ 'ನೀಲು' ಪದ್ಯಗಳೂ ಪ್ರಥಮ ಬಾರಿಗೆ ಪುಸ್ತಕ ರೂಪದಲ್ಲಿ ನಿಮ್ಮ ಕೈ ಸೇರಲಿದೆ.

'ಲಂಕೇಶ್' ವಾರ ಪತ್ರಿಕೆಗೂ, 'ಗ್ರೈಡ್' ಮಾಸಿಕಕ್ಕೂ ನೀವು ನೀಡಿರುವ ಬೆಂಬಲದಂತೆ ನಮ್ಮ ಹೊಸ ಕೂಸಾದ 'ಲಂಕೇಶ್' ಪ್ರಕಾಶನಕ್ಕೂ ಪ್ರೋತ್ಸಾಹ ನೀಡುತ್ತೀರೆಂದು ನಂಬಿರುವೆ. ನಿಮ್ಮ ಪ್ರೀತಿ ಮತ್ತು ವಿಶ್ವಾಸ ಹೀಗೆ ಮುಂದುವರೆಯಲಿ ಎಂದು ಆಶಿಸುತ್ತೇನೆ.

-ನಿಮ್ಮ ಗೌರಿ

ಕ್ರಿಮಿ ಸುಖಾನಂದ ಶೆಟ್ಟಿ ಕೊಲೆ



ಕರಾವಳಿಯ ಹಿಂದೂ ಜಾಗರಣ ವೇದಿಕೆಯ ಪುಂಡು ನಾಯಕ ಸುಖಾನಂದ ಶೆಟ್ಟಿಯ ಕೊಲೆಯಾಗಿದೆ. ಕಳೆದ ನಾಲ್ಕಾರು ವರ್ಷಗಳಿಂದ ಹಿಂದೂ-ಮುಸ್ಲಿಂ ಗಲಭೆಗಳಿಗೆ ಪ್ರಚೋದನೆ ಕೊಡುತ್ತಾ ಹಲ್ಲೆ-ಲೂಟಿ-ಹತ್ಯೆಗಳನ್ನು ನಡೆಸುತ್ತಾ ಮೆರೆಯುತ್ತಿದ್ದ ಈ ಸುಖಾನಂದ ಶೆಟ್ಟಿ. ಅನ್ಯ ಸಮುದಾಯಗಳ ರಕ್ತ ಹರಿಸುವುದು ಇವನಿಗೆ ಸಲೀಸಾಗಿ ಹೋಗಿತ್ತು. ಆದರೆ ಸಾವು ತನ್ನನ್ನೇ ಹೀಗೆ ಬೆನ್ನತ್ತಿ ಬರಬಹುದೆಂಬ ಕಲ್ಪನೆಯೂ ಶೆಟ್ಟಿಗೆ ಇರಲಿಲ್ಲವೆಂದು ಕಾಣುತ್ತದೆ. ಕತ್ತಿ-ತಲವಾರುಗಳನ್ನು ಹಿಡಿದು ಅಪರಿಚಿತ ಜನ ತನ್ನೆದಿರು ಬಂದು ನಿಂತಾಗ ಶೆಟ್ಟಿಯ ಜೊತೆ ಯಾವೊಬ್ಬ ಹಿಂದೂ ಭಜರಂಗಿ ಕಾರ್ಯಕರ್ತನೂ ಇರಲಿಲ್ಲ.

ಕರಾವಳಿಯ ಸಂಘ ಪರಿವಾರದ ಜನ ಶೆಟ್ಟಿ ಕೊಲೆಗೆ ಮುಸ್ಲಿಮರೇ ಕಾರಣ ಎಂದು ಆರೋಪಿಸುತ್ತಿದ್ದಾರೆ. ಪೊಲೀಸರಿಗೆ ಇದುವರೆಗೂ ಅಂತಾ ಸಾಕ್ಷಿಗಳೇನೂ ಸಿಕ್ಕಿಲ್ಲ. ಹತ್ಯೆಗೆ ಬಳಸಿದ ಒಂದು ಕ್ವಾಲೀಸ್ ಗಾಡಿ ಬಿಟ್ಟು.

ಶೆಟ್ಟಿಯ ಹತ್ಯೆಯ ಬೆನ್ನ ಹಿಂದೆಯೇ ಅವನ ಶವಯಾತ್ರೆಯ ವೇಳೆ ಗಲಭೆ ನಡೆದು ಮೂಲ್ಕಿಯಲ್ಲಿ ನೂರಾರು ಮುಸ್ಲಿಮರ ಆಸ್ತಿಪಾಸ್ತಿಗಳ ಮೇಲೆ ದಾಳಿ ನಡೆದಿದೆ. ಆದುವರೆಗೂ ಮೌನ ವೀಕ್ಷಕರಂತಿದ್ದ ಎಸ್‌ಪಿ-ಡಿಸಿಗೂ ಒದೆ ಬಿದ್ದ ಮೇಲೆ ಗೋಲಿಬಾರ್ ನಡೆದು ಇನ್ನಿಬ್ಬರು ಸಂಘ ಪರಿವಾರಿಗಳು ಸತ್ತಿದ್ದಾರೆ. ಶೆಟ್ಟಿ ಹತ್ಯೆಗೆ ಕಾರಣ ಯಾರೆಂಬುದು ಗೊತ್ತಿಲ್ಲ. ಆದರೆ ಗೋಲಿಬಾರ್‌ನಲ್ಲಿ ಸತ್ತ ಪ್ರೇಂ ಹಾಗೂ ದಿನೇಶರ ಸಾವಿಗೆ ಸಚಿವ ನಾಗರಾಜ ಶೆಟ್ಟಿಯೇ ನೇರ ಕಾರಣ.


ಹತ್ಯಾ ನಂತರದ ಗಲಭೆಗಳಿಗೆ ಪೊಲೀಸರು ಬೇಡವೆಂದರೂ ನಡೆಸಿದ ಶವಯಾತ್ರೆಗೆ ಸಚಿವ ನಾಗರಾಜ ಶೆಟ್ಟಿಯ ಅವಿವೇಕ ನಿರ್ಧಾರಗಳೇ ಕಾರಣವಾಗಿವೆ.

ಎಂತವನು ಈ ಸುಖಾನಂದ ಶೆಟ್ಟಿ

ಕರಾವಳಿಯ ರಕ್ತಪಿಪಾಸು ನಾಯಕನಾಗಿ ಬೆಳೆಯುತ್ತಿದ್ದ ಸುಖಾನಂದ ಶೆಟ್ಟಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಪಳಗಿದ್ದ ಆಸಾಮಿಯಾಗಿದ್ದ. ಇವನು ಹುಟ್ಟಿದ್ದು ಮೂಲ್ಕಿಯಲ್ಲಿ ಆದರೆ ಬೆಳೆದಿದ್ದೆಲ್ಲಾ ಮುಂಬೈನಲ್ಲಿ. ತಂದೆ ವಿಪರೀತ ಕುಡುಕನಾಗಿದ್ದ. ತಾಯಿ ಶ್ರೀಕೃಷ್ಣ ರೈಸ್ ಮಿಲ್‌ನಲ್ಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದರು. ಆಗ ಶೆಟ್ಟಿಗೆ ಆಸರೆ ನೀಡಿದ್ದು ಅವನ ಸೋದರ ಮಾವ. ಚೂರುಪಾರು ಓದಿ ಮುಂಬೈನಿಂದ ಮೂಲ್ಕಿಗೆ ವಾಪಸ್ ಬಂದ ಸುಖಾನಂದ ಶೆಟ್ಟಿ ಹಿಂದೂ ವೀರನಾಗುವ ಮೊದಲು ಸ್ಥಳೀಯ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಪಿಗ್ಮಿ ಕಲೆಕ್ಟರ್ ಆಗಿದ್ದ. ಒಮ್ಮೆ ಆ ಬ್ಯಾಂಕ್ ಲೂಟಿಯಾಯಿತು. ಇನ್ನೊಮ್ಮೆ ಲಕ್ಷಾಂತರ ರೂಪಾಯಿಗಳ ಗೋಲ್‌ಮಾಲ್ ಕೂಡ ನಡೆದಿತ್ತು. ಇವೆರಡೂ ವಂಚನೆಗಳಲ್ಲಿ ಸುಖಾನಂದ ಶೆಟ್ಟಿಯ ಕೈವಾಡವಿತ್ತೆಂಬುದು ಎಲ್ಲರಿಗೂ ಗೊತ್ತಿತ್ತು. ಹೀಗೆ ತನಗ ಅನ್ನ ಕೊಟ್ಟಿದ್ದ ಸಹಕಾರಿ ಬ್ಯಾಂಕಿಗೇ ಕನ್ನ ಹಾಕಿದ ಶೆಟ್ಟಿ ಬೇಗನೆ ಆ ಕೆಲಸ ಬಿಟ್ಟ. ಇವನ ಬಂಧು ರಾಜೇಶ ಶೆಟ್ಟಿ ಎಂಬುವನು ಸಂಘ ಪರಿವಾರಿಗಳ ಜೊತೆ ಸೇರಿ ಮುಸ್ಲಿಮ ವಿರುದ್ಧ ಪ್ರಚೋದನಕಾರಿ ದುಷ್ಕೃತ್ಯಗಳನ್ನು ನಡೆಸಿಕೊಂಡು ಬರುತ್ತಿದ್ದನಲ್ಲದೆ, ಇತ್ತೀಚೆಗೆ ಕುದುರೋಳಿ ಕಸಾಯಿ ಖಾನೆಯ ಜವಾಬ್ದಾರಿಯನ್ನು ಹರಾಜಿನಲ್ಲಿ ಖರೀದಿಸಿದ್ದ.

ಇದೇ ರಾಜೇಶ ಶೆಟ್ಟಿಯೇ ಸದಾನಂದ ಶೆಟ್ಟಿಯನ್ನು ಕರೆತಂದು ಮಾರ್ಬಲ್ ಅಂಗಡಿಗೆ ಕೆಲಸಕ್ಕೆ ಸೇರಿಸಿದ ಅದರ ಧಣಿ ದೂರದ ಗುಜರಾತಿನಲ್ಲಿದ್ದ. ಮಾರ್ಬಲ್ ದಂಧೆಯಲ್ಲಿ ಶೆಟ್ಟಿ ಎಷ್ಟು ಚಿಗುರಿಕೊಂಡನೆಂದರೆ ಇತ್ತೀಚೆ ಗುಜರಾತಿ ಅಂಗಡಿ ಮಾಲೀಕನಿಗೇ ಕೈಕೊಟ್ಟು ಸುಖಾನಂದನ ಅಂಗಡಿ ಲಪಟಾಯಿಸಲು ಹುನ್ನಾರ ನಡೆಸಿದ್ದ.

ಶೆಟ್ಟಿ ಕೊಲೆಯ ಹಿಂದೆ ಈ ಕಾರಣವೂ ಇರಬಹು ದೆಂದು ಈಗ ಪೊಲೀಸರು ಅನುಮಾನ ಪಡುತ್ತಿದ್ದಾರ ಅಷ್ಟೇ ಅಲ್ಲ ಸುಖಾನಂದನಿಗೆ ಸಂತೋಷ ಶೆಟ್ಟಿ ಎಂಬ ತಮ್ಮನಿದ್ದಾನೆ. ಸ್ಪಿರಿಟ್ ವ್ಯವಹಾರ ಅವನದು. ಆದ ಇಡೀ ಸ್ಪಿರಿಟ್ ವ್ಯಾಪಾರವನ್ನು ನಿಭಾಯಿಸುತ್ತಿದ್ದವನು ಸುಖಾನಂದ ಶೆಟ್ಟಿ. ಸ್ಪಿರಿಟ್ ವ್ಯವಹಾರದಲ್ಲಿ ಕಳ್ಳತನ-ಅಕ್ರಮ



ಕೊಲೆಗಳೆಲ್ಲಾ ಮಾಮೂಲ ಇಷ್ಟಲ್ಲದೆ ಮರದ ವ್ಯಾಪಾ ಲೇವಾದೇವಿ, ಲ್ಯಾಂಡ್ ಡೀಲ ಗಳಲ್ಲೆಲ್ಲಾ ಸುಖಾನಂದ ಇದ ಇವೆಲ್ಲದರಲ್ಲೂ ರಾಮ-ಕೃಷ್ಣ ಲೆಕ್ಕಗಳಿರುವುದು ಮಾಮೂಲ ವಿದ್ಯಾಮಾನ. ಬೆಳೆಯುತ್ತಿ ಬಿಜೆಪಿ ಲೀಡರ್ ಸುಖಾನಂ ನಿಗೆ ಈ ಎಲ್ಲಾ ವ್ಯವಹಾ ಗಳಲ್ಲೂ ಶತ್ರುಗಳಿದ್ದರ ಜುಜುಬಿ ಪಿಗ್ಮಿ ಕಲೆಕ್ಟ ಆಗಿದ್ದ ಶೆಟ್ಟಿ ಈ ಹಂತ ಬೆಳೆದೇಟಿಗೆ ಸಹಜವಾಗೇ ಎಂಎಲ್‌ಎ, ಇತ್ಯಾದಿಗಳ ಅವನ ಯೋಚನೆ ಹರಿದಿತ್ತು. ಹಾಗಾಗಿ ಹಿಂದೂ ಜಾಗರಣ ವೇದಿಕೆ ಸೇರಿ ಎಲ್ಲಾ ಮುಸ್ಲಿಂ ವಿರೋಧಿ ಗಲಭೆಗಳಲ್ಲ ಮುಂಚೂಣಿಯಲ್ಲಿರುತ್ತಾ ಹಿಂದೂ ಲೀಡರ್ ಎನಿಸಿಕೊಂಡಿ ಇದರಿಂದ ಈಗಾಗಲೇ ಬೇರು ಬಿಟ್ಟುಕೊಂಡಿದ್ದ ಕ

ಪೊಲೀಸರು ಇನ್ನಾದರೂ ಪಾಠ ಕಲಿಯಲಿ

ಕರಾವಳಿಯ ಪೊಲೀಸರೆಂದರೆ ಸಂಘ ಪರಿವಾರದ ಇನ್ನೊಂದು ರೂಪ ಎಂಬ ಭಾವನೆ ಜನರಲ್ಲಿ ಬಂದು ಬಿಟ್ಟಿದೆ. ಸುಖಾನಂದ ಶೆಟ್ಟಿಯಂತವರು ಚಿಗುರಿಕೊಳ್ಳುವುದೇ ಇಂತಾ ಪರಿಸ್ಥಿತಿಗಳಲ್ಲಿ.

ಬಜೆಪಿ, ಭಜರಂಗ ದಳ, ಆರ್‌ಎಸ್‌ಎಸ್‌ನವರು ದನ ಸಾಗಿಸುವವರನ್ನು ಹಿಡಿದು ಬಡಿಯುವುದು, ಮುಸ್ಲಿಮರ ಮೇಲೆ ನಿತ್ಯ ಹಲ್ಲೆ, ದೌರ್ಜನ್ಯಗಳನ್ನು ಈಗ್ಗೆ ಕೆಲ ವರ್ಷಗಳಿಂದಲೂ ನಡೆಸುತ್ತಲೇ ಬಂದಿದ್ದಾರೆ. ಆದರೆ ಸಂಘ ಪರಿವಾರದ ಈ ಕಾನೂನುಬಾಹಿರ ಕೃತ್ಯಗಳನ್ನು ತಡೆಯುವ ಯಾವ ಪ್ರಯತ್ನಗಳನ್ನೂ ಕರಾವಳಿ ಪೊಲೀಸರು ಮಾಡಿಲ್ಲ, ಅದರ ಬದಲಾಗಿ ಪೊಲೀಸರೇ ಶಾಮೀಲಾಗಿ ಮುಸ್ಲಿಮರಿಗೆ ಕಿರುಕುಳ ನೀಡುತ್ತಾ ಬಂದಿದ್ದಾರೆ. ಮಂಗಳೂರು ಗಲಭೆ ನಡೆದಾಗ ಪೊಲೀಸರೇ ಮುಸ್ಲಿಮರ ಮನೆ-ಅಂಗಡಿಗಳಿಗೆ ನುಗ್ಗಿ ಲೂಟಿ ಮಾಡಿದ್ದು ಈಗ ಸಾಬೀತಾಗಿದೆ.

ಇನ್ನು ಕರಾವಳಿಯ ಪತ್ರಿಕೆಗಳೆಲ್ಲವೂ ಸಂಘ ಪರಿವಾರದ ಪಾಂಪ್ಲೆಟ್ ರೀತಿ ವರ್ತಿಸುತ್ತಾ ಮುಸ್ಲಿಮರ ಮೇಲಿನ ದೌರ್ಜನ್ಯಗಳ ಸುದ್ದಿಗಳನ್ನು ಮುಚ್ಚಿಟ್ಟು, ಪೊಲೀಸರ ನಿಷ್ಕ್ರಿಯತೆಯನ್ನು ಬಯಲಿಗೆಳೆಯದೆ ದುಷ್ಟ ಪತ್ರಿಕೋದ್ಯಮ ಮಾಡಿಕೊಂಡೇ ಬಂದಿವೆ.

ಪರಿಸ್ಥಿತಿ ಈ ಹಂತ ತಲುಪಿದ ಮೇಲೆ ದೌರ್ಜನ್ಯಕ್ಕೀಡಾದವರು ಸುಮ್ಮನೆ ಕೈಕಟ್ಟಿ ಕೂರುವುದಿಲ್ಲ ಎಂಬುದು ಪೊಲೀಸರಿಗೆ ಹಾಗೂ ಸರ್ಕಾರಕ್ಕೆ ಈಗಲಾದರೂ ಗೊತ್ತಾಗಬೇಕಿದೆ. ಸುಖಾನಂದ ಶೆಟ್ಟಿಯ ಹತ್ಯೆ ಯಾವುದೇ ಕಾರಣಕ್ಕೆ ಯಾರೇ ಮಾಡಿರಲಿ, ಆದರೆ ಅವನ ಶವಯಾತ್ರೆಗೆ ಪೊಲೀಸ್ ಅನುಮತಿ ನೀಡಿದ್ದೇ ಮೊದಲನೆ ತಪ್ಪು, ಈ ಶೆಟ್ಟಿ ಪುಂಡರ ನಾಯಕನಾಗಿದ್ದವನು. ಕರಾವಳಿಯಲ್ಲಿ ಇತ್ತೀಚೆಗೆ ತಾನೇ ಕೋಮು ಹಿಂಸಾಚಾರ ನಡೆದಿತ್ತು, ಇದು ಗೊತ್ತಿದ್ದೂ ಸಚಿವ ನಾಗರಾಜ ಶೆಟ್ಟಿ ಮಂಗಳೂರಿನಿಂದ ಮೂಲ್ಕಿಯವರೆಗೂ ಶವಯಾತ್ರೆಗೆ ಪಟ್ಟು ಹಿಡಿದದ್ದು ಇನ್ನಷ್ಟು ಗಲಭೆಗೆ ಪ್ರಚೋದನೆ ನೀಡಲೆಂದೇ ಹೊರತು ಮತ್ತ್ಯಾವ ಘನ ಕಾರ್ಯಕ್ಕೂ ಅಲ್ಲ. ನಂತರ ಸಂಘ ಪರಿವಾರದ ಪ್ಲಾನ್‌ನಂತೆ ಶವಯಾತ್ರೆ ಮೂಲ್ಕಿ ಪ್ರವೇಶಿಸುತ್ತಿದ್ದಂತೆ ಪಾಕಿಸ್ತಾನದ ವಿರುದ್ಧ ಮುಸ್ಲಿಮರ ವಿರುದ್ಧ ಪ್ರಚೋದನಕಾರಿ ಘೋಷಣೆಗಳನ್ನು ಕೂಗುತ್ತಾ ದೊಂಬಿ ಆರಂಭಿಸಲಾಯಿತು. ಮತ್ತೆ ಮುಸ್ಲಿಮರ ಮನೆ-ಅಂಗಡಿಗಳ ಮೇಲೆ ದಾಳಿ ನಡೆಸಿ ಲೂಟಿ-ದೌರ್ಜನ್ಯ ನಡೆಸಲಾಯಿತು.


ಇದೆಲ್ಲಾ ಪೊಲೀಸರ ಸಮ್ಮುಖದಲ್ಲೇ ನಡೆದವು. ಪೊಲೀಸರು ಎಚ್ಚೆತ್ತಿದ್ದು ಎಸ್‌ಪಿ ದಯಾನಂದ್‌ಗೇ ಏಟು ಬಿದ್ದಾಗ, ಡಿ.ಸಿ. ಕಾರಿಗೆ ಕಲ್ಲೇಟು ಬಿದ್ದಾಗ!

ಕೊನೆಗೆ ಗೋಲಿಬಾರ್ ನಡೆದು ಇಬ್ಬರು ಸಂಘ ಪರಿವಾರದ ಹುಡುಗರ ಪ್ರಾಣ ಹೋಯಿತು.

ಇದನ್ನೇ ಬಳಸಿಕೊಂಡು ಸಂಘ ಪರಿವಾರ ಇನ್ನಷ್ಟು ಗಲಭೆಗೆ ಕುಮ್ಮಕ್ಕು ನೀಡಲು ಯತ್ನಿಸಿತಾದರೂ ಅದು ಈ ಬಾರಿ ಯಶ ಕಾಣಲಿಲ್ಲ. ದ್ವೇಷದ ಬೆಂಕಿ ಹಚ್ಚಿ ರಕ್ತದ ಬೆಳೆ ತೆಗೆಯುವವರಿಗೆ ಇವೆಲ್ಲಾ ಎಚ್ಚರಿಕೆಯ ಪಾಠಗಳಾಗಬೇಕಿದೆ.

ಸುಖಾನಂದ ಶೆಟ್ಟಿಯ ಹಿನ್ನೆಲೆ ಗೊತ್ತಿರುವ ಕರಾವಳಿಯ ಜನತೆ ಅಂತವರ ಹತ್ಯೆ ಯಾವ ಸಂದರ್ಭದಲ್ಲಿ ಯಾಕೆ ನಡೆಯಬಹುದು ಎಂದು ಅರ್ಥ ಮಾಡಿಕೊಳ್ಳುವಷ್ಟು ಪ್ರಬುದ್ಧರಾಗಿರುವುದರಿಂದಲೇ ತಲೆ ಕೆಡಿಸಿಕೊಳ್ಳದೆ ತಮ್ಮ ಪಾಡಿಗೆ ತಾವಿದ್ದಾರೆ.

ಎದ್ದು ಕಾಣತೊಡಗಿದ ಸಮ್ಮಿಶ್ರ ಸರ್ಕಾರದ ಖಾಕಿ ಚೆಡ್ಡಿ



"ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡಲು ಹೊರಟ ಸಂಘ ಪರಿವಾರಕ್ಕೆ ಧಿಕ್ಕಾರ."

"ಸಂಘ ಪರಿವಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಸಮ್ಮಿಶ್ರ ಸರ್ಕಾರಕ್ಕೆ ಧಿಕ್ಕಾರ."

"ಹಚ್ಚ ಹಸಿರಿನ ಬಾಬಾಬುಡನ್‌ಗಿರಿ ಮಾನವ ರಕ್ತದಿಂದ ಕೆಂಪಾಗದಿರಲಿ."

"ಬಾಬಾಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆ ಮಾಡಲು ಹೊರಟಿರುವ ಕೋಮುವಾದಿಗಳಿಗೆ ಧಿಕ್ಕಾರ."





–ಇವು ಮೊನ್ನೆ ಡಿಸೆಂಬರ್ ಎರಡರಂದು ಚಿಕ್ಕಮಗಳೂರಿನ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ, ಬೆಂಗಳೂರಿನ ಟೌನ್‌ಹಾಲ್ ಆವರಣದಲ್ಲಿ ಮತ್ತು ಕರ್ನಾಟಕದ ಇನ್ನಿತರೆಡೆಗಳಲ್ಲಿ ಏಕಕಾಲಕ್ಕೆ ಗಗನ ಮುಟ್ಟುವಂತೆ ಮೊಳಗಿದ ಘೋಷಣೆಗಳು. ಮನಸ್ಸು-ಮನಸ್ಸುಗಳ ನಡುವೆ ಕೋಮುದ್ವೇಷ ಬಿತ್ತಿ ಕರ್ನಾಟಕದಲ್ಲಿ ಕೋಮು ದಳ್ಳುರಿಯನ್ನು ಹಚ್ಚುವ ಸಂಘ ಪರಿವಾರದ ಪ್ರಯತ್ನಗಳನ್ನು ವ್ಯರ್ಥಗೊಳಿಸುವ ಮತ್ತು ಆ ಮೂಲಕ ಕರ್ನಾಟಕವನ್ನು ಕೋಮು ಸೌಹಾರ್ದತೆಯ ತಾಣವನ್ನಾಗಿಯೇ ಉಳಿಸಿಕೊಂಡು ಹೋಗುವ ಉದ್ದೇಶದೊಂದಿಗೆ ಚಿಕ್ಕಮಗಳೂರಿನಲ್ಲಿ 'ಸೌಹಾರ್ದ ನಡಿಗೆ' ಆರಂಭಿಸಿದ ಹಿರಿಯ ಮಾನವಹಕ್ಕು ಹೋರಾಟಗಾರ ಪ್ರೊ. ನಗರಿ ಬಾಬಯ್ಯ ಹಾಗೂ 'ಲಂಕೇಶ್' ವಾರಪತ್ರಿಕೆಯ ಸಂಪಾದಕರಾದ ಗೌರಿ ಲಂಕೇಶ್‌ರನ್ನು ಒಳಗೊಂಡಂತೆ ಸುಮಾರು 150 ಜನ ಕೋಮುಸೌಹಾರ್ದ ವೇದಿಕೆಯ ಕಾರ್ಯಕರ್ತರನ್ನು ಸರ್ಕಾರವು ಬಂಧಿಸಿ ಜೈಲಿಗೆ ತಳ್ಳಿತು. ಇನ್ನೊಂದೆಡೆ, ಅವರಲ್ಲಿ ಕೋಮು ದ್ವೇಷವನ್ನು ಬಿತ್ತುತ್ತಿರುವ ಸಂಘ ಪರಿವಾರದ ಪಟಾಲಂಗೆ ಅಂದೇ ಚಿಕ್ಕಮಗಳೂರಿನಲ್ಲಿ ರಾಜಾರೋಷವಾಗಿ ಮೆರವಣಿಗೆ ಮಾಡಲು ಅವಕಾಶ ಕೊಡುವುದರ ಮೂಲಕ ಸಮ್ಮಿಶ್ರ ಸರ್ಕಾರವು ತನ್ನ 'ಜಾತ್ಯತೀತತೆ' ಹಾಗೂ 'ಧರ್ಮ ನಿರಪೇಕ್ಷತೆ'ಗಳ ನಿಜಬಣ್ಣವನ್ನು ತೋರಿಸಿಕೊಟ್ಟಿತು. ಅಲ್ಲಿ ಚಿಕ್ಕಮಗಳೂರಿನಲ್ಲಿ ಅದನ್ನು ವಿರೋಧಿಸಿ ಪ್ರತಿಭಟನೆಗಳೂ ನಡೆದವು. ಪ್ರತಿಭಟನಾಕಾರರ ಸಿಟ್ಟು ಒಂದೆಡೆ ಸಂಘ ಪರಿವಾರದ ಪಟಾಲಂಗಳ ಕಡೆಗೆ ಇದ್ದರೆ ಇನ್ನೊಂದೆಡೇ ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಸರ್ಕಾರದ ಕಡೆಗೂ ತಿರುಗಿತ್ತು.

ಏಕೆಂದರೆ ಸರ್ಕಾರವು ಈ ಬಾರಿ ಶೋಭಾಯಾತ್ರೆಗೆ ಅವಕಾಶ ಕೊಡುವುದಿಲ್ಲವೆಂದೂ ಮತ್ತು ನ್ಯಾಯಾಲಯದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆಂದೂ ಆಶ್ವಾಸನೆಗಳನ್ನು ನೀಡುತ್ತಲೇ ಬಂದಿತ್ತು. ಆದರೆ ಅಂತಿಮವಾಗಿ ಅದು ಮಾಡಿದ್ದೇನೆಂದರೆ ಸೌಹಾರ್ದತೆಯನ್ನು ಬಯಸುವ ವೇದಿಕೆಯ ಕಾರ್ಯಕರ್ತರನ್ನು ಬಂಧಿಸಿ, ಸಂಘ ಪರಿವಾರದ ಶೋಭಾಯಾತ್ರೆಗೆ ಅವಕಾಶ ಕೊಟ್ಟದ್ದು. ಇದಕ್ಕೆ ಚಾಮುಂಡೇಶ್ವರಿ ಉಪಚುನಾವಣೆಯ ಹಿನ್ನೆಲೆಯಲ್ಲಿ ಜನತಾದಳ(ಎಸ್) ಹಾಗೂ ಬಜೆಪಿ ಪಕ್ಷಗಳ ನಡುವೆ ನಡೆದಿದೆ ಎನ್ನಲಾದ ಡೀಲನ್ನು ಸಹ ತಳ್ಳಿ ಹಾಕುವಂತಿಲ್ಲ. ಚುನಾವಣೆಯಲ್ಲಿ ಜೆಡಿ(ಎಸ್) ಅಭ್ಯರ್ಥಿಯನ್ನೇ ಒಮ್ಮತದ ಅಭ್ಯರ್ಥಿಯನ್ನಾಗಿ ನಿಲ್ಲಿಸಬೇಕು, ಬಜೆಪಿ ಪ್ರತ್ಯೇಕವಾಗಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಬಾರದು, ಹಾಗೂ ಇದಕ್ಕೆ ಪ್ರತಿಫಲವಾಗಿ ಸಂಘ ಪರಿವಾರದ ಶೋಭಾಯಾತ್ರೆಗೆ ಸರ್ಕಾರವು ಅವಕಾಶ ಮಾಡಿಕೊಡಬೇಕು ಎಂಬುದಾಗಿ ನಡೆದಿದೆ ಎನ್ನಲಾದ ಒಪ್ಪಂದಕ್ಕೆ ಇಂಬುಕೊಡುವ ರೀತಿಯಲ್ಲೇ ಸರ್ಕಾರವು ವರ್ತಿಸಿದೆ. ಶೋಭಾಯಾತ್ರೆಗೆ ಅನುಮತಿ ನೀಡದಿದ್ದರೆ ಚಾಮುಂಡೇಶ್ವರಿ ಚುನಾವಣೆಯಲ್ಲಿ ಜೆಡಿ(ಎಸ್) ಅಭ್ಯರ್ಥಿಯ ವಿರುದ್ಧ ಮತ ಚಲಾಯಿಸುವಂತೆ ಮತದಾರರಿಗೆ ಕರೆ ನೀಡುತ್ತೇವೆ ಎಂದು ಸಂಘ ಪರಿವಾರದ ನಾಯಕರು ಬಹಿರಂಗವಾಗಿ ಹೇಳಿಕೆ ನೀಡಿದ್ದೂ ಸಹ ಇದನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ. ಒಟ್ಟಿನಲ್ಲಿ ಸರ್ಕಾರವು ನ್ಯಾಯಾಲಯದ ಆದೇಶವನ್ನೂ ಬದಿಗೊತ್ತಿ, ಪ್ರಜಾತಂತ್ರವಾದಿಗಳ, ಸೌಹಾರ್ದತೆ ಬಯಸುವ ಶಾಂತಿಪ್ರಿಯ ಕನ್ನಡಿಗರ ಒತ್ತಾಯಕ್ಕೂ ಬೆಲೆ ಕೊಡದೇ ಸಂಘ ಪರಿವಾರದ ಕೋಮುವಾದಿಗಳ ತಾಳಕ್ಕೆ ಹೆಜ್ಜೆ ಹಾಕಿ, ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೊರಟಿರುವ ಪರಿಯನ್ನು ನೋಡಿದರೆ ದೇಶದ ನ್ಯಾಯಾಂಗ ವ್ಯವಸ್ಥೆ ಮತ್ತು ಪ್ರಜಾತಂತ್ರಗಳಲ್ಲಿ ನಂಬಿಕೆ ಇಟ್ಟವರೂ ದಿಗಿಲುಗೊಳ್ಳುವಂತಾಗಿದೆ. ಒಮ್ಮೊಮ್ಮೆ, ಸರ್ಕಾರದಲ್ಲಿರುವವರು ಜನರು ಆರಿಸಿ ಕಳಿಸಿದ ಪ್ರಜಾಪ್ರತಿನಿಧಿಗಳೋ ಅಥವಾ ರಾಮ ದೇವಸ್ಥಾನ ಅರ್ಚಕರೋ ಎಂಬ ಅನುಮಾನ ಹುಟ್ಟಿ ಬರುತ್ತದೆ.

ಕರ್ನಾಟಕದಲ್ಲಿ ಮೊದಲ ಬಾರಿ ಬಿಜೆಪಿಯು ಅಧಿಕಾರಕ್ಕೇರಿರುವು ಸಂಘ ಪರಿವಾರದ ವಲಯಗಳ ಒಂದಿಷ್ಟು ಭರವಸೆಯನ್ನು ಚಿಗು ಸಿತ್ತು. ಅಧಿಕಾರ ಹಂಚಿಕೊಂ ಜೆಡಿ(ಎಸ್)ನ ಜೊತೆ ರಾಜಕೀ ಡೀಲ್‌ಗಳನ್ನು ಮಾಡಿಕೊಂಡು ಪೂರಕ ಶಕ್ತಿಯನ್ನಾಗಿ ಪರಿವರ್ತಿ ಕೊಳ್ಳುವ ಲೆಕ್ಕಾಚಾರವೂ ಅದಕ್ಕಿ ಅದಕ್ಕೆ ತಕ್ಕಂತೆ ಸಂಘ ಪರಿವಾರದ ಶಿಬಿರದಲ್ಲಿ ಸಿ ಮತ್ತು ಬಿರುಸಿನ ಚಟುವಟಿಕೆಗಳೂ ಆರಂಭಗೊಂಡ ಕೆಲವು ನಾಯಕರುಗಳ 'ಸತ್ಯ ಸಂದೇಶ'(!) ಯಾತ್ರೆಗ ಆರಂಭವಾದವು. ಹಲವಾರು ಯಾತ್ರೆಗಳ ನಂತರ ಬಾಬರಿ ಮಸೀದಿಯನ್ನು ಒಡೆದ ಮಾದರಿಯ ಕರ್ನಾಟಕದ ಬಾಬಾಬುಡನ್ ಗಿರಿಯಲ್ಲೂ ಪುನರಾವ ಸುವ ಪ್ರಯತ್ನಗಳೂ ಶುರುವಾದವು.

ಇವುಗಳೆಲ್ಲವುಗಳ ಬಗ್ಗೆ ಅರಿವಿದ್ದ ಕರ್ನಾಟ ಕೋಮು ಸೌಹಾರ್ದ ವೇದಿಕೆಯು ಅದಕ್ಕೆ ಪರ್ಯಾ ವಾಗಿ ನವೆಂಬರ್ 26 ರಂದು ಬೆಂಗಳೂರಿನಲ್ಲಿ ಬೃಹ ಎಚ್ಚರಿಕೆಯ ಸಮಾವೇಶ ಮಾಡಿ ಸರ್ಕಾರಕ್ಕೆ, ಸ ಪರಿವಾರದ ಕೋಮುವಾದಿಗಳಿಗೆ ಬೌದ್ಧಿಕವಾಗಿಯ ಮತ್ತು ಭೌತಿಕವಾಗಿಯೂ ಸವಾಲು ಹಾಕಿತು. ರಾ ಮೂಲೆಮೂಲೆಗಳಿಂದ ಬಂದಿದ್ದ ಸಾವಿರಾರು ಶಾಂತಿಪ್ರಿ ಕರ್ನಾಟಕ ಜನತೆ, ಪ್ರಜಾತಂತ್ರ ಪ್ರೇಮಿಗಳು, ಸಾಹಿತಿಗ ಬುದ್ಧಿಜೀವಿಗಳು, ವಿವಿಧ ಮಠಗಳ ಶರಣರು, ನೂರಾ ಸಂಘಟನೆಗಳ ಸಾಮಾಜಿಕ ಕಾರ್ಯಕರ್ತರು ಒಕ್ಕೊ ನಿಂದ, ಕೂಗಿದ್ದೊಂದೇ ಮಾತು:

"ಸಂಘ ಪರಿವಾರಕ್ಕೆ ಕಡಿವಾಣ ಹಾಕಿ ಇಲ್ಲ ಅಧಿಕಾರ ಬಿಟ್ಟು ತೊಲಗಿ."

ಇದೇ ಸಮಯದಲ್ಲಿ ಹೈಕೋರ್ಟ್ ಕ ಸುಪ್ರೀಂಕೋರ್ಟಿನ ಆದೇಶವನ್ನೇ ಮತ್ತೊ ಪುನರುಚ್ಚರಿಸಿ 1975 ರ ಹಿಂದಿನ ಆಚರಣೆಗಳು ಮಾತ ಬಾಬಾಬುಡನ್‌ಗಿರಿಯಲ್ಲಿ ನಡೆಯುವಂತೆ ಸರ



ಹಿಂದೂ ಲೀಡರ್‌ಗಳಿಗೂ ಸುಖಾನಂದ ಶೆಟ್ಟಿಯ ವೇಗದ ಬೆಳವಣಿಗೆ ಆತಂಕ ಹುಟ್ಟಿಸಿತ್ತು ಎನ್ನಲಾಗಿದೆ.

ಶೆಟ್ಟಿ ಹತ್ಯೆಯ ಹಿನ್ನೆಲೆಯಲ್ಲಿ ಇದರಲ್ಲಿ ಯಾವುದಾದರೂ ಕುಮ್ಮಕ್ಕು ಇದ್ದಿರಲೂಬಹುದು. ಅಥವಾ ಸಂಘ ಪರಿವಾರ ಚೀರಿಕೊಳ್ಳುತ್ತಿರುವಂತೆ ರೊಚ್ಚಿಗೆದ್ದಿರುವ ಕೆಲ ಮುಸ್ಲಿಂ ಯುವಕರೂ ಈ ಕೃತ್ಯ ನಡೆಸಿರಲಿಕ್ಕೂ ಸಾಕು. ಒಂದು ವೇಳೆ ಇದೇ ನಿಜವಾಗಿದ್ದಲ್ಲಿ ಈ ಶೆಟ್ಟಿ ತನ್ನ ಸಾವನ್ನು ತಾನೇ ಆಹ್ವಾನಿಸಿಕೊಂಡ ಎನ್ನಬೇಕಿದೆ.

ಪುಂಡಾಟಿಕೆ ಪ್ರವೀಣ


ಹಿಂದೂ ಜಾಗರಣ ವೇದಿಕೆ, ಭಜರಂಗದಳದಂತ ಭಯೋತ್ಪಾದಕ ಗುಂಪುಗಳೊಂದಿಗೆ ಶೆಟ್ಟಿಗೆ ಸಂಪರ್ಕಗಳಿದ್ದವು. ಕರಾವಳಿಯಲ್ಲಿ ನಡೆದ ಅನೇಕ ಮುಸ್ಲಿಂ ವಿರೋಧಿ ದಂಗೆಗಳಲ್ಲಿ ಶೆಟ್ಟಿಯ ಕೈವಾಡವಿರುತ್ತಿತ್ತು, ಇಂತಾ ಶೆಟ್ಟಿಯ ಹೆಸರು ಸಾರ್ವಜನಿಕವಾಗಿ ಕೇಳಿಬಂದಿದ್ದೇ ಅಕ್ಟೋಬರ್ 3 ರಂದು ನಡೆದ ಬಪ್ಪನಾಡು ಕ್ಷೇತ್ರದ ಶಾರದಾದೇವಿ ಉತ್ಸವದಲ್ಲಿ. ಮುಸ್ಲಿಂ ಮೌಲ್ವಿಯೊಬ್ಬ ಶಾರದಾದೇವಿ ವಿಗ್ರಹದೆದಿರು ಶರಣಾಗತನಾಗಿ ಕುಳಿತಿರುವಂತ ಪ್ರಚೋದನಕಾರಿ ಟ್ಯಾಬ್ಲೊ ಒಂದನ್ನು ಈ ಶೆಟ್ಟಿ ಬೇಕಂತಲೇ ತಯಾರಿಸಿ ಇರಿಸಿದ್ದ. ಕೆಲ ಮುಸ್ಲಿಮರು ಇದನ್ನು ಪ್ರತಿಭಟಿಸಿದ್ದರು. ಹಾಗೆ ಹೇಳಬೇಕೆಂದರೆ ಮಂಗಳೂರು ಕೋಮು ಗಲಭೆ ಸ್ಫೋಟಗೊಳ್ಳಲು ಪ್ರಚೋದನೆ ನೀಡಿದ್ದೇ ಈ ಘಟನೆ. ಕೋಟಿಗಟ್ಟಲೆ ಆಸ್ತಿ ನಾಶ-ಜೀವಹಾನಿಗಳಿಗೆ ಹೊಣೆಯಾಗಿದ್ದವನು ಇದೇ ಸುಖಾನಂದ ಶೆಟ್ಟಿ.

ಇಷ್ಟೆಲ್ಲಾ ಚೀಟಿಂಗ್ ಹಾಗೂ ಕ್ರಿಮಿನಲ್ ಜಾತಕವಿದ್ದ ಸುಖಾನಂದ ಶೆಟ್ಟಿಯನ್ನು ಈಗ ಕೊಚ್ಚಿ ಕೊಲ್ಲಲಾಗಿದೆ.

ಅಶಾಂತಿ ಬಯಸುವವರಿಗೆ ಶಾಂತಿಯುತ ಜೀವನ ಸಿಗುವುದಿಲ್ಲ, ಅನ್ಯರ ರಕ್ತ ಕೇಳುವವರಿಗೆ ತಮ್ಮ ರಕ್ತವನ್ನು ಹರಿಸುವವರಿರುತ್ತಾರೆಂಬುದು ಗೊತ್ತಿರುವುದಿಲ್ಲ.

ಸುಖಾನಂದ ಶೆಟ್ಟಿ ಹತ್ಯೆಯೇ ಇದಕ್ಕೆ ಸಾಕ್ಷಿ.

-ಈಶ



ನೋಡಿಕೊಳ್ಳಬೇಕು ಎಂದಿತು. ಈ ಕೋರ್ಟಿನ ಆದೇಶವನ್ನು ಮತ್ತು ಜನಾದೇಶವನ್ನು ಪರಿಪಾಲನೆ ಮಾಡಬೇಕಿದ್ದ ಸರ್ಕಾರ ಅವೆರಡನ್ನೂ ಗಾಳಿಗೆತೂರಿ ಹಿಡಿಯಷ್ಟಿರುವ ಅಲ್ಪಸಂಖ್ಯಾತ ಸಂಘ ಪರಿವಾರದ ಜನರ ಎದುರು ಮಂಡಿಯೂರಿ ಕುಳಿತಿರುವುದನ್ನು ನೋಡಿದರೆ ಈ ದೇಶದ, ನಾಡಿನ ನ್ಯಾಯಾಂಗ ವ್ಯವಸ್ಥೆಗೆ ಹಾಗೂ ಒಟ್ಟಾರೆಯಾಗಿ ಪ್ರಜಾತಂತ್ರಕ್ಕೆ ಮುಂಬರುವ ದಿನಗಳಲ್ಲಿ ಬರಬಹುದಾದ ಆಪತ್ತಿನ ಅರಿವಾಗದಿರಲಾರದು.

ವಿಚಿತ್ರ ಪ್ರಜ್ಞಾವಂತ ಮತ್ತು ಪ್ರತಿಭಟಶೀಲ ಬೃಹತ್ ಜನ ಸಮೂಹಗಳೆದುರು ಯಾವ ಕ್ರೂರ ಚಕ್ರಾಧಿಪತ್ಯಗಳೂ ಅಮರವಾಗಿ ಉಳಿದಿಲ್ಲ ಎಂಬುದು ಚರಿತ್ರೆ ಸಾಬೀತು ಮಾಡಿದ ಸತ್ಯ. ಅದಕ್ಕೆ ಕರ್ನಾಟಕವೂ ಹೊರತಾಗಿ ಉಳಿಯುವುದಿಲ್ಲ. ಸಂಘ ಪರಿವಾರದ ಕುಚೇಷ್ಟೆಗಳಿಗೆ ಮತ್ತು ಅವುಗಳಿಗೆ ಬೆಂಬಲವಾಗಿ ನಿಂತ ಸರ್ಕಾರಗಳಿಗೆ ಕನ್ನಡದ ಪ್ರಗತಿಪರ-ಸೌಹಾರ್ದ ಜನಾಂದೋಲನವೇ ಪಾಠ ಕಲಿಸಲಿದೆ. ಈ ಜನ ಹೋರಾಟವೇ ಕರ್ನಾಟಕವನ್ನು ಮತ್ತೊಂದು ಗುಜರಾತ್ ಆಗದಂತೆ ಈವರೆಗೆ ತಡೆದಿರುವುದು ಮತ್ತು ಮುಂದೆಯೂ ತಡೆಯಲಿರುವುದು. ಈ ಜನ ಹೋರಾಟವೇ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಗಟ್ಟಿಯಾಗಿ ಈವರೆಗೆ ಉಳಿಸಿರುವುದು, ಹಾಗೂ ಮುಂದೆ ಉಳಿಸಿ ಬೆಳೆಸಲಿರುವುದು.

-ಕುಮಾರ್ ಬುರಡಿಕಟ್ಟಿ

ಶಿವಮೊಗ್ಗ ನಾಗನ ತಲೆದಂಡ

"ಇದನ್ನೇ ಕ್ರೈಂ ಪ್ರಪಂಚದ ವಿಪರ್ಯಾಸ ಅನ್ನೋದು. ಮೊದಲು ಹೆಬ್ಬೆಟ್ಟು ಮಂಜನ ಬಲಿಯಾಗಬೇಕಿತ್ತು, ಆದರೆ ಉರುಳಿದ್ದು ಶಿವಮೊಗ್ಗ ನಾಗನ ತಲೆ!

ಹೆಬ್ಬಾಳದ ರೈಲ್ವೇ ಸ್ಟೇಷನ್ನಿನ ಎದುರು ನಂಬರ್ ಪ್ಲೇಟಿಲ್ಲದ ಬಿಳಿ ಬಣ್ಣದ ಮಾರುತಿ ಕಾರಿನಲ್ಲಿ ಕೂತಿದ್ದ ಹಾಗೇ ಹೆಣವಾಗಿ ಹೋಗಿದ್ದ ಶಿವಮೊಗ್ಗ ನಾಗ. ಗುಂಡು ಕರಾರುವಾಕ್ಕಾಗಿ ಎಡಗಣ್ಣು ಮತ್ತು ಎಡಕಿವಿಯ ನಡುಭಾಗವನ್ನು ಹೊಕ್ಕಿತ್ತು, ಅದು ಮಿದುಳನ್ನು ಛಿದ್ರಗೊಳಿಸಿ ಬಲಭಾಗದಿಂದ ಹೊರಬದ್ದಿತ್ತು, ಮತ್ತೊಂದು ಗುಂಡು ಮೂಗಿನ ಮೇಲಿಂದ ತಲೆಹೊಕ್ಕಿ, ಹಿಂಭಾಗದಿಂದ ಹೊರಬದ್ದಿತ್ತು. ಮಾತು-ಕತೆ, ಕೊಸರಾಟ, ಚರ್ಚೆ ಯಾವುದಕ್ಕೂ ಆಸ್ಪದವಾಗದೇ ಶಿವಮೊಗ್ಗ ನಾಗನ ಪ್ರಾಣ ಹಾರಿಹೋಗಿತ್ತು.

ಆದರೆ ಪೊಲೀಸರು ಹಾರಿಸಿದ ಗುಂಡೊಂದು ಕಾರಿನ ಮುಂಭಾಗದ ಗಾಜಿನ ಪರದೆಯಿಂದ ತೂರಿ ಬಂದು ನಾಗನ ತಲೆ ಹೊಕ್ಕಿತ್ತೆ? ಗುಂಡು ಬಿದ್ದಾ ಕ್ಷಣವೇ ನಾಗ ತನ್ನ ಡ್ರೈವಿಂಗ್ ಸೀಟಿನಿಂದ ಪಕ್ಕದ ಸೀಟಿಗೆ ಬಂದುಬಿದ್ದಿದ್ದನೆ?

ಕ್ರೈಂ ಡಿಸಿಪಿ ರವಿಕಾಂತೇಗೌಡರ ಪ್ರಕಾರ ನಾಗ ನಂಬರ್ ಪ್ಲೇಟಿಲ್ಲದ ಕಾರಿನಲ್ಲಿ ಹೆಬ್ಬಾಳ ರಿಂಗ್‌ರೋಡ್ ಬಳಿ ಹೋಗುತ್ತಿದ್ದಾನೆ ಎಂಬ ಸುದ್ದಿ ಬಂತಂತೆ. ಅವರ ಜೊತೆ ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ಮತ್ತು ನಂಜುಂಡೇಗೌಡರು ಹೋಗಿ ಕಾರನ್ನು ಅಡ್ಡಗಟ್ಟಿದ್ದಾರೆ. ಆದರೆ ನಾಗ ಅವರ ಮೇಲೆಯೇ ಕಾರ್ ಹತ್ತಿಸಲು ಹೋಗಿ ಅದು ಯಶಸ್ವಿಯಾಗದೇ ತನ್ನಲ್ಲಿದ್ದ .38 ರಿವಾಲ್ವರ್‌ನಿಂದ ಪೊಲೀಸರ ಮೇಲೆ ಗುಂಡು ಹಾರಿಸಿದ್ದಾನೆ. ಆದರೆ ಪೊಲೀಸರು ಹೊಡೆದ ಗುಂಡು ನಾಗನ ತಲೆ ಹೊಕ್ಕಿದೆ!

ನಾಗನ ಸಾವಿಗೆ ಅಳುವವರಿಲ್ಲ. ಏಕೆ ಸತ್ತ? ಹೇಗೆ ಸತ್ತ? ಎಂದು ಯಾರೂ ಕೇಳುವುದಿಲ್ಲ. ಅಸಲಿಗೆ ಆತನ ಶವಸಂಸ್ಕಾರಕ್ಕೂ ಯಾರೂ ದಿಕ್ಕಿಲ್ಲ. ಶಿವಮೊಗ್ಗ ನಾಗ ಇವತ್ತಲ್ಲ ನಾಳೆ ಬೆಂಗಳೂರಿನ ಡಾನ್ ಆಗುತ್ತಾನೆಂದು ಕೆಲ ಪತ್ರಿಕೆಗಳು ಬರೆದಿದ್ದಕ್ಕೂ ಆತನ ಎನ್‌ಕೌಂಟರ್ ನಂತರದ ಪರಿಸ್ಥಿತಿಗೂ ಎಲ್ಲಿಂದೆಲ್ಲಿಯ ಸಂಬಂಧ?

ಅಕ್ಟೋಬರ್ 16 ರ ರಾತ್ರಿ ಹಿರಿಯೂರಿನ ಜವಗೊಂಡನಹಳ್ಳಿಯ ಜೈಭಾರತ್ ಡಾಬಾಕ್ಕೆ ನುಗ್ಗಿ ಸಶಸ್ತ್ರದಾರಿ ಪೊಲೀಸರಿದ್ದಾಗ್ಯೂ ರೌಡಿ ಕೊರಂಗುನನ್ನು ಕತ್ತರಿಸಿ ಆತನ ಬಂಟ ದೀಪುನನ್ನು ಗುಂಡಿಟ್ಟು ಕೊಂದದ್ದು ಹೆಬ್ಬೆಟ್ಟು ಮಂಜನ ಪಡೆಯಾದರೂ ಅದಕ್ಕೆ ಕಾರಣನಾದವನು ಶಿವಮೊಗ್ಗ ನಾಗ. ತನ್ನ ಗುರು ಬನಾಯ್ಸ್ ರಾಜೇಂದ್ರನನ್ನು ಬದುಕಿರುವ ಹೆಣವಾಗುವಂತೆ ಕತ್ತರಿಸಿ ಹಾಕಿದ್ದ ಕೊರಂಗುವಿನ ಮೇಲೆ ಬೇರೆ ಎಲ್ಲರಿಗಿಂತಲೂ ದೊಡ್ಡ ಮಟ್ಟದಲ್ಲಿ ಹಗೆ ಸಾಧಿಸಿದವನು ಶಿವಮೊಗ್ಗ ನಾಗ. ಬಹುಶಃ ಅಧಿಕಾರದಲ್ಲಿ ಜೆಡಿಎಸ್ ಸರ್ಕಾರವಿದ್ದುದರಿಂದ, ಬೆನ್ನಿಗೆ ಮುಖ್ಯಮಂತ್ರಿಯ ಪರಮಾಪ್ತ ಕಾಮಾಕ್ಷಿಪಾಳ್ಯದ ಗೋಪಾಲಯ್ಯನೇ ನಿಂತಿದ್ದರಿಂದ ತನ್ನನ್ನು ಎನ್‌ಕೌಂಟರ್ ಮಾಡಿ ಕೊಲ್ಲುವ ಮಟ್ಟಕ್ಕೆ ಪೊಲೀಸರು ಧೈರ್ಯ ಮಾಡಲಿಕ್ಕಿಲ್ಲ ಎಂದೇ ಆತ ಲೆಕ್ಕ ಹಾಕಿದ್ದ. "ಚಾಮುಂಡೇಶ್ವರಿ ಚುನಾವಣೆ ಮುಗಿಯುತ್ತಿದ್ದಂತೆ ನಾನೇ ನಿಂತು ಪೊಲೀಸರಿಗೆ ಸರೆಂಡರ್ ಮಾಡಿಸಿ ಬಿಡ್ತೀನಿ, ಅಲ್ಲೀ ತನಕ ಪೊಲೀಸರ ಕೈಗೆ ಸಿಗಬೇಡ" ಎಂದೇ ಗೋಪಾಲಯ್ಯ ಮಾತು ಕೊಟ್ಟಿದ್ದ.

ನಾಗನ ತಲೆ ಚಾಪೆ ಕೆಳಗೆ ತೂರಿದರೆ ಪೊಲೀಸರು ರಂಗೋಲಿಯ ಕೆಳಕ್ಕೇ ತೂರಿಬಿಟ್ಟಿದ್ದರು!

ಚಾಮುಂಡೇಶ್ವರಿ ಚುನಾವಣೆಗೂ ಮೊದಲೇ ನಾಗನ ಎನ್‌ಕೌಂಟರ್ ನಡೆದು ಹೋಗಿತ್ತು!

ಒಂದೆಡೆ ಕೊರಂಗು-ಸುನೀಲರ ಗ್ಯಾಂಗ್, ಮತ್ತೊಂದೆಡೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಮತ್ತು ಮುಲಾಮರ ಕೂಟದ ಮಧ್ಯೆ ದಿನಕ್ಕೊಂದು ಮಾರಾಮಾರಿ, ರಕ್ತಪಾತ



ನಡೆಯುತ್ತಿದ್ದಾಗ ಪೊಲೀಸರು ತಾನೇ ಹೇಗೆ ಕೈಕಟ್ಟಿ ಕೂರಲು ಸಾಧ್ಯ?

ತಿಮ್ಮೇನಹಳ್ಳಿ ಸೂರಿ ಹತ್ಯೆಯ ನಂತರ ತಲೆ ಎತ್ತಲಾಗದಂಥ ಅವಮಾನಕ್ಕೀಡಾಗಿದ್ದ ಪೊಲೀಸರಿಗೆ ಎರಡೂ ವೈರಿ ಗ್ಯಾಂಗುಗಳ ಕನಿಷ್ಠ ಎರಡೆರಡು ತಲೆ ತೆಗೆದರಷ್ಟೇ ಸರಿ ಹೋಗಬಹುದು ಎನ್ನಿಸಿತ್ತು. ಆದರಲ್ಲೂ ಸೂರಿ ಹತ್ಯೆಯ ಪ್ರಮುಖನಾಗಿದ್ದ ಮಚ್ಚನ ಬಂಟ ಪೆದ್ದುಗುಂಡನನ್ನೇ ಮೊದಲು ಎನ್‌ಕೌಂಟರ್ ಮಾಡಿಬಿಡಲು ಡಿಸಿಪಿ ರವಿಕಾಂತೇಗೌಡರು ಕಾತುರರಾಗಿದ್ದರು. ಅದಕ್ಕೆಂದೇ ಕಲಾಸಿಪಾಳ್ಯದ ಚತುರ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್‌ರನ್ನು ನೇಮಿಸಲಾಗಿತ್ತು. ಸರಿಸುಮಾರು ಎರಡು ತಿಂಗಳುಗಳ ಕಾಲ ಉಮೇಶ್ ಪೆದ್ದಗುಂಡನ ಬೆನ್ನು ಹತ್ತಿ ಇನ್ನೇನು ಆತನ ಹೆಣಬಿತ್ತು ಎನ್ನುವಷ್ಟರಲ್ಲಿ ಸಣ್ಣದೊಂದು ಯಡವಟ್ಟು ನಡೆದು ಹೋಯಿತು. ಪೆದ್ದಗುಂಡ ಸಿಕ್ಕಿಬಿದ್ದನಾದರೂ ಆತ ಜೊತೆಗಿದ್ದ ಎಂಟು ಮಂದಿ-ಅದರಲ್ಲೂ ಲಕ್ಷ್ಮೀಶ



ಎಂಬಾತ ತಪ್ಪಿಸಿಕೊಂಡು ಪತ್ರಿಕೆಗಳಿಗೆ ಸುದ್ದಿ ಮುಟ್ಟಿಸಿಬಿಟ್ಟಿದ್ದರು!

ಬಹುಶಃ ಇನ್ಸ್‌ಪೆಕ್ಟರ್ ಉಮೇಶ್ ಕೈಗೆ ಪೆದ್ದುಗುಂಡ ಏಕಾಂಗಿಯಾಗಿ ಸಿಕ್ಕಿಬಿದ್ದಿದ್ದರೆ ಖಂಡಿತಾ ಎನ್‌ಕೌಂಟರ್ ನಡೆದೇ ತೀರುತ್ತಿತ್ತು. ಆತನ ಜೊತೆ ಇನ್ನೂ ಎಂಟು ಮಂದಿ ಇದ್ದರಲ್ಲ, ಅದೊಂದೇ ಕಾರಣಕ್ಕೆ ಪೆದ್ದಗುಂಡ ಬದುಕಿಬಿಟ್ಟ. ಇದೇ ಲೆಕ್ಕಾಚಾರ ಹಾಕಿ ಹೆಬ್ಬೆಟ್ಟು ಮಂಜನ ಎನ್‌ಕೌಂಟರ್ ಮಾಡಲೆಂದೇ ಸಿಸಿಬಿಯ ಎಸಿಪಿ ಬಿ.ಕೆ. ಶಿವರಾಮ್ ತಂಡ ನಿದ್ದೆಗೆಟ್ಟು ರೌಂಡಿಂಗ್ ನಡೆಸಿದ್ದಾದರೂ ಹೆಬ್ಬೆಟ್ಟು ಮಂಜ ಕೂಡ ಪೆದ್ದಗುಂಡನಂತೆ ಆರು ಮಂದಿ ಹುಡುಗರ ಜೊತೆ ಸಿಕ್ಕಿಬಿದ್ದು ಸೇಫಾಗಿ ಜೈಲು ಸೇರಿಬಿಟ್ಟ. ಉಳಿದವನು ಶಿವಮೊಗ್ಗ ನಾಗ.

ಆತನ ಸ್ವಭಾವವೇ ವಿಚಿತ್ರ. ಬೇರೆ ರೌಡಿಗಳಂತೆ ಆತ ತನ್ನ ಜೊತೆಗೆ ಹತ್ತಾರು ಹುಡುಗರನ್ನಿಟ್ಟುಕೊಂಡು ಸುತ್ತುವವನಲ್ಲ, ತನ್ನದೇ ಶಿಷ್ಯರ ಸಮೂಹ ಕೂಡ ಆತನಿಗಿಲ್ಲ. ಕ್ರೈಂ ಜಗತ್ತಿನಲ್ಲಿ ಆತನದು ದೊಡ್ಡ ಹೆಸರಾದರೂ ಆತನಿಗೆ ತನ್ನದೇ ಅಂತ ನೆಟ್‌ವರ್ಕ್ ಇಲ್ಲ. ಏಕಾಂಗಿಯಾಗಿ ಸುತ್ತುತ್ತಾನೆ. ಬೇಟೆಯನ್ನು ನಿಗದಿ ಮಾಡಿಕೊಂಡೇ ಆ ಕ್ಷಣಕ್ಕೆ ಇನ್ನಾರದೋ ಗ್ಯಾಂಗಿನ ನೆರವು ಪಡೆಯುತ್ತಾನೆ. ಅವರನ್ನು ಜೊತೆಗಿಟ್ಟುಕೊಂಡೇ ದಾಳಿ ನಡೆಸಿ ಕೆಲಸ ಮುಗಿದದ್ದೇ ಮತ್ತೆ ಏಕಾಂಗಿಯಾಗಿ ಬಿಡುತ್ತಾನೆ. ಅಕ್ಟೋಬರ್ 16 ರ ರಾತ್ರಿ ಹಿರಿಯೂರಿನ ಜವಗೊಂಡನಹಳ್ಳಿಯ ಜೈಭಾರತ್ ಡಾಬಾಕ್ಕೆ ನುಗ್ಗಿ ಕೊರಂಗು ಕೈ ಕತ್ತರಿಸಿ ಆತನ ಬಂಟ ದೀಪುನನ್ನು ಕೊಂದಿದ್ದರಲ್ಲಿ ನಾಗನ ನೆರವಿಗೆ ಬಂದವನು ಶಿವಮೊಗ್ಗದ ಹೆಬ್ಬೆಟ್ಟು ಮಂಜನಾದರೂ ಅದರಲ್ಲಿ ತನ್ನ ಕೈವಾಡವಿಲ್ಲವೆಂದೇ ನಾಗ ಪೊಲೀಸರನ್ನು ನಂಬಿಸಿದ್ದ. ಹೆಬ್ಬೆಟ್ಟು ಮಂಜ ಕೂಡ ಸೂರಿಯ ಋಣಕ್ಕೆ ಬಿದ್ದು ತಾನೇ ಕೊರಂಗು ಮೇಲೆ ದಾಳಿ ನಡೆಸಿದೆನೆಂದು ಹೇಳಿಕೆ ಕೊಟ್ಟು ನಾಗನನ್ನು ಬಚಾವು ಮಾಡಲು ಯತ್ನಿಸಿದ್ದ.

ಆದರೆ ಕೊರಂಗು ಮೇಲಿನ ದಾಳಿಯ ನಂತರ ಮಂಜ ಮತ್ತು ನಾಗ ಧರ್ಮಸ್ಥಳದಲ್ಲಿ ಸಂಧಿಸಿದ್ದು ಪೊಲೀಸರ ಗಮನಕ್ಕೆ ಬಂದಿತ್ತು.

ವಿಚಿತ್ರವೆಂದರೆ ಪೊಲೀಸರಿಂದ ಬಚಾವಾಗಲು ಆತ ಏಕಾಂಗಿಯಾಗಿ ಓಡಾಡುತ್ತಿದ್ದದ್ದೇ ನಾಗನಿಗೆ ಮುಳುವಾಯಿತು. ಅದಕ್ಕೆ ಕಾರಣಳಾದವಳು ಆತನ ಪ್ರೇಯಸಿ. ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿಯ ಸಮೀಪ ಮನೆ ಮಾಡಿಕೊಂಡಿದ್ದ ನಾಗನಿಗೆ ಉಷಾ (ಹೆಸರು ಬದಲಿಸಿದೆ) ಎಂಬ ಹುಡುಗಿ ಪದೇಪದೇ ಎಸ್ಸೆಮ್ಮೆಸ್ ಕಳಿಸುತ್ತಿದ್ದದ್ದು ಹೇಗೋ ಪೊಲೀಸರ ಗಮನಕ್ಕೆ ಬಂದಿದೆ. ಆತ ದಿನಕ್ಕೊಂದು ಮೊಬೈಲ್ ಬಳಸಿದರೂ ಆಕೆಗೆ ಖಂಡಿತ ಫೋನ್ ಮಾಡೇ ತೀರುತ್ತಾನೆಂಬುದು ಪೊಲೀಸರಿಗೆ ಖಾತರಿಯಾಗಿದೆ. ಬಹುಶಃ ಆಕೆಯನ್ನು ಸಂಧಿಸಲೆಂದೇ ಆತ ಏಕಾಂಗಿಯಾಗಿ ಸುತ್ತುತ್ತಿದ್ದನೋ ಏನೋ. ಡಿಸೆಂಬರ್ 2 ರ ರಾತ್ರಿ ಸಿಸಿಬಿ ಪೊಲೀಸರ ತಂಡ ನಾಗನ ಪ್ರೇಯಸಿಯ ಮನೆ ಮುಂದೆಯೇ ಹೊಂಚ ಕುಳಿತಿದೆ. ಬೆಳಿಗ್ಗೆ ನಾಲ್ಕೂವರೆಗೇ ಎದ್ದು ತನ್ನ ಬಿಳಿ-ಬಣ್ಣದ ಮಾರುತಿ ಕಾರಿನಲ್ಲಿ ರಿಂಗ್‌ರಸ್ತೆಗೆ ಇಳಿದಿದ್ದಾನೆ. ಪೊಲೀಸರು ತನ್ನನ್ನು ಹಿಂಬಾಲಿಸುತ್ತಿದ್ದದ್ದು ಗೊತ್ತಿರಲಿಲ್ಲವೋ, ಅಥವಾ ಅದಕ್ಕೂ ಮೊದಲೇ ಸಿಕ್ಕಿಬಿದ್ದಿದ್ದನೋ; ಕನಿಷ್ಠ ಆತನ ಜೊತೆ ಒಬ್ಬೇ ಒಬ್ಬ ಶಿಷ್ಯನಾದರೂ ಇದ್ದರೆ ಬದುಕುತ್ತಿದ್ದನೋ ಏನೋ!


ಪ್ರಾಣ ಉಳಿಸಿಕೊಳ್ಳಲೆಂದೇ ಏಕಾಂಗಿಯಾದವನು ಅದೇ ಕಾರಣಕ್ಕೆ ತನ್ನ ಪ್ರಾಣ ಕಳಕೊಂಡ. ಗ್ಯಾಂಗ್‌ವಾರ್ ಖುಷಿ ಕೊಡಬಹುದು. ಹೆಸರು ತರಬಹುದು. ದುಡ್ಡು ಪ್ರಭಾವಿಗಳ ಶ್ರೀರಕ್ಷೆ, ಹುಡುಗಿಯರ ಮೋಜು ಎಲ್ಲವೂ ಸಿಗಬಹುದು. ಆದರೆ ಕೊನೆಯಲ್ಲಿರುವುದು ಮಾತ್ರ ಕಣ್ಣೀರೆ.

ಇದಕ್ಕೆ ಶಿವಮೊಗ್ಗ ನಾಗನಿಗಿಂತ ಉದಾಹರಣೆ ಬೇಕೆ?


-ರಾ. ಸೋಮನಾಥ್

ಕೊರಂಗುನನ್ನು ಕೊಲ್ಲಲು ಹೋಗಿ ತಾನೇ ಬಲಿಯಾದ

ಶಿವಮೊಗ್ಗ ಜಿಲ್ಲೆಯ ಸೊರಬದ ಮುಟಗುಪ್ಪೆಯ ಬಂಗಾರಪ್ಪನ ಮಗನಾದ ನಾಗರಾಜ್ ಹುಟ್ಟಿದ್ದು 1972 ರ ಜೂನ್ ಹತ್ತರಂದು. ಜಾತಿಯಲ್ಲಿ ಈಡಿಗ. ತನ್ನ ಇಪ್ಪತ್ತನೇ ವಯಸ್ಸಿಗೇ ಊರು ಬಿಟ್ಟ. ನೆಲಮಂಗಲ ಹತ್ತಿರ ಡಾಬಾ ಒಂದರಲ್ಲಿ ಸಪ್ಲೈಯರ್ ಕೆಲಸ ಮಾಡಿಕೊಂಡಿದ್ದೇ 1995 ರಲ್ಲಿ ದಾಬರಿ ಕೇಸಿಗೆ ಫಿಟ್ ಆದ. ಆನಂತರ ಹೆಬ್ಬಾಳದ ಕೆಂಪಾಪುರದ ತನ್ನ ಸಂಬಂಧಿಯೊಬ್ಬರ ಮನೆಯಲ್ಲಿದ್ದು ಜೇಕೆ ಗ್ಯಾಂಗಿನ ಕಾಂಟ್ಯಾಕ್ಟಿಗೆ ಬಂದ. ಯಶವಂತಪುರ, ಪೀಣ್ಯ ಏರಿಯಾಗಳಲ್ಲಿ ಇನ್ನಷ್ಟು ದಾಬರಿ ಮಾಡಿದ. ಈತನ ವಿರುದ್ಧ ಮೊದಲ ಬಾರಿ ಹೆಬ್ಬಾಳ ಪೊಲೀಸರು ರೌಡಿಷೀಟ್ ತೆರೆದದ್ದು 1996 ರ ಸೆಪ್ಟೆಂಬರ್ 15 ರಂದು.




ಯಶವಂತಪುರದ ಪೋರಿ ನಾಗನ ಕೊಲೆಯಾಗುವ ತನಕ ಶಿವಮೊಗ್ಗ ನಾಗನ ಹೆಸರು ಅಂಡರ್‌ವರ್ಲ್ಡ್‌ನ ಬಹುತೇಕರಿಗೆ ಗೊತ್ತೇ ಇರಲಿಲ್ಲ. ಜೈಲಲ್ಲಿ ಆತನ ಜೊತೆಯಾದವನು ಬನಾಯ್ಸ್ ರಾಜೇಂದ್ರ. ಒಂದು ವರ್ಷದ ಕಾಲ ನಾಗನಿಗೆ ಪ್ರತಿನಿತ್ಯ ಬಿರಿಯಾನಿ ಕಳಿಸಿ, ಆತನ ಬಿಡುಗಡೆಗೂ ವ್ಯವಸ್ಥೆ ಮಾಡಿ, ಹೊರಬಂದ ತಕ್ಷಣ ಖರ್ಚಿಗೂ ನೋಡಿಕೊಂಡ ಬನಾಯ್ಸ್ ಋಣವೇ ದೊಡ್ಡದಿತ್ತು. ಬನಾಯ್ಸ್‌ನ ಮೇಲೆ ಅಟ್ಯಾಕ್ ಮಾಡಿಸಿದ ಕೊರಂಗು ಆತನ ಕೈಕಾಲು ಲ್ಯಾಪ್ಸ್ ಮಾಡಿಸಿದ್ದ. ತಲೆಗೆ ಮಾರಕ ಲಾಂಗ್ ಏಟು ಬಿದ್ದು ವ್ಹೀಲ್ ಚೇರ್ ಹಿಡಿದವನು ಕೊನೆ ಕೊನೆಗೆ ತನ್ನ ಜ್ಞಾಪಕ ಶಕ್ತಿಯನ್ನೇ ಕಳಕೊಂಡು ಜೀವಂತ ಹೆಣವಾದ. ಅದೊಂದೇ ಕಾರಣಕ್ಕೆ ಕೊರಂಗು ಮುಗಿಸುತ್ತೇನೆಂದು ಪಣತೊಟ್ಟವನು ಶಿವಮೊಗ್ಗ ನಾಗ. ಕೊರಂಗು ಲೈವ್‌ಬ್ಯಾಂಡ್ ಹುಡುಗಿಯರನ್ನು ಹೊತ್ತೊಯ್ದು ಬಾಣಸವಾಡಿ ಬಳಿಯ ಮರಿಯಪ್ಪನಪಾಳ್ಯದಲ್ಲಿ ಇಟ್ಟಿದ್ದಾನೆಂಬ ಸುದ್ದಿ ಸಿಕ್ಕಿದ್ದೇ ಹೆಬ್ಬೆಟ್ಟು ಮಂಜನ ಕಡೆಯ ಇಪ್ಪತ್ತು ಹುಡುಗರನ್ನು ಹಾಕಿಕೊಂಡು ಬಾಣಸವಾಡಿಗೆ ದಂಡೆತ್ತಿ ಹೋದ. ಆದರೆ ಟಾಟಾ ಸುಮೋ ಕೆಸರಲ್ಲಿ ಸಿಕ್ಕಿ ಅದನ್ನು ಕೊರಂಗು ಬಂಟ ಕತ್ತಿಗುಪ್ಪೆ ಲಿಂಗ ನೋಡಿಬಿಟ್ಟ. ಆವತ್ತು ಲಿಂಗ ಇನ್ನೆಲ್ಲಿ ದಾಳಿ ನಡೆಸುತ್ತಾನೋ ಎಂದು ನಾಗನ ಗ್ಯಾಂಗ್ ಟಾಟಾ ಸುಮೋ ಅಲ್ಲೇ ಬಿಟ್ಟು ಪರಾರಿಯಾಗಿತ್ತು.



ಹಾಗೇ ಬಿಟ್ಟು ಹೋದ ನಾಗನ ಟಾಟಾ ಸುಮೋ ಅನ್ನು ಲಿಂಗನ ಗ್ಯಾಂಗ್ ಮೂರು ತಿಂಗಳ ಕಾಲ ಬಳಸಿತ್ತು. ಆನಂತರ ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತ ಲ್ಯಾಂಡ್ ಡೀಲಿಗೆ ಕೈಯಿಟ್ಟು ರಿಯಲ್ ಎಸ್ಟೇಟ್ ಆಸಾಮಿಯೊಬ್ಬನನ್ನ ಹೊತ್ತೊಯ್ದು ನಾಗ ಹತ್ತು ಲಕ್ಷ ಕಿತ್ತ. ಅದು ಗೊತ್ತಾಗಿಯೇ ಸಿಸಿಬಿ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ನಾಗನ ಬೆನ್ನಿಗೆ ಬಿದ್ದವರು 2005 ರ ಜುಲೈ 25 ರಂದು ಆತನನ್ನು ಹಿಡಿದು ತಂದರು. ಜೈಲಲ್ಲಿ ನಾಗನಿಗೆ ಜೊತೆಯಾದವನು ತಿಮ್ಮೇನಹಳ್ಳಿ ಸೂರಿ. ಇಬ್ಬರು ಸೇರಿಕೊಂಡೇ ಮಚ್ಚನ ಕೊಲೆಗೆ ಸ್ಕೆಚ್ ಹಾಕಿದರು. ಇವರು ಜೈಲಲ್ಲಿದ್ದಾಗಲೇ ಹೊರಗೆ ಗೋಪಾಲಯ್ಯ ಮತ್ತು ಮುಲಾಮ ಸೇರಿ ಮಚ್ಚನನ್ನು ಕೊಂದರು. ಹೊರಗೆ ಬರುತ್ತಿದ್ದಂತೆ ಸೂರಿಯನ್ನು ಮಚ್ಚನ ಗ್ಯಾಂಗ್ ಮುಗಿಸಿತ್ತು, ಅದಕ್ಕೆ ಪ್ರತಿಯಾಗಿ ಕೊರಂಗು ತಲೆ ತೆಗೆಯಲು ಹೋದ ನಾಗ ಈಗ ತಾನೇ ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ.

ಅಂಡರ್ ವರ್ಲ್ಡ್‌ನ ಸಾವು ಬದುಕಿನ ಹಾವು ಏಣಿಯಾಟವೇ ಹೀಗಿರುತ್ತದೆ!

ಶಿವಬಸಪ್ಪ ಗೆದ್ರೆ ದೇವೇಗೌಡ ಭಕ್ತ ಕುಂಬಾರಾಯ್ತನೆ ಕಣ್ರೊ



ಎಲೆಬಿಸಿಲ ಹಿತಕ್ಕೆ ಪೂರಕವಾದ ಸುದ್ದಿಗಳಿಗಾಗಿ ಕಾಯುತ್ತ ಕುಳಿತಿದ್ದವರಿಗೆ ವಾಟಿಸ್ಸೆ ಕಾಣಿಸಿದ. ಚಾಮುಂಡೇಶ್ವರಿ ಚುನಾವಣೆಗೆಂದು ಹೋಗಿದ್ದವನು ಪ್ರತಿದಿನ ಕುದಿದಿರುವುದನ್ನು ಅವನ ಕಣ್ಣುಗಳೇ ಹೇಳುತ್ತಿದ್ದವು. ಬಹಳ ತೂಕವಾದ ಜವಾಬ್ದಾರಿಯನ್ನು ನಿರ್ವಹಿಸಿ ಬಂದವನಂತೆ.

"ಅಸ್ ಸಾಕಾಯ್ತಪ್ಪ" ಎಂದು ಕುಳಿತುಕೊಂಡ.

"ಯಾಕ್ಲ ಒಂದಿನ ಮದ್ಲೆ ಬಂದಿದ್ದಿ?" ಎಂದಳು ಜುಮ್ಮಿ

"ಲೀಡರ್ಸ್ ಎಲ್ಲ ಜಾಗ ಖಾಲಿ ಮಾಡಬೇಕು ಅಂತ ಆದೇಶ ಬಂತು ಕಣಕ್ಕ ಅದ್ಕೆ ಬಂದುಬುಟ್ಟೆ."

"ನೀನ್ಯಾವ ಲೀಡ್ರುಲ?"

"ಇದೇನಕ್ಕ ಹಿಂಗಂತಿ. ನಿನ್ನ ಜಾಗಕ್ಕೆ ನಾನು ಆಫ್‌ಟರಾಲ್ ವಾಟಿಸ್ಸೆ ಆಗಿರಬವುದು. ಆದ್ರೆ ಯಾವುದೇ ಪಾರ್ಟಿ ಲೀಡ್ರುಗಳು ನನ್ನನ್ನ ಈ ಟೈಮಲ್ಲಿ ನೆಗ್ಲೆಟ್ ಮಾಡದಂಗೆ ತುಂಬಾ ರೆಸ್‌ಸ್ಪೆಕ್ಟ್ ಕೊಟ್ಟು ಕರಿತರೆ ಕಣಕ್ಕ. ಅದ್ಕೆ ಊಟಗಳ್ಳಿ ಏರಿಯಾದ ಜವಾಬ್ದಾರಿನೆ ನನಿಗ್ವಯಿಸಿದ್ರು."

"ಅಂಗರೆ ಹೂಟಗಳ್ಳಿ ಲೀಡ್ರಾಗಿದ್ದೆ ಅನ್ನು?"

"ಊ ಕಣಕ್ಕ ಮನಿಮನಿಗೋಗಿ ಓಟು ಕೇಳನಾ ಅಂತ ಇದ್ರೆ ಅಷ್ಟ್ರಲ್ಲಿ ಲೀಡರ್ಸ್ ಎಲ್ಲಾ ಕ್ಷೇತ್ರ ಬುಡಬೇಕು ಅಂತ ಪೀಟರ್ ಮೆಮೊ ಕೊಟ್ಟ ಬಂದೆ ಅತ್ತಗೆ."

"ಪೀಟರ್ ಯರಡ್ನೆ ಶೇಷನ್ ಆಗ್ಯವುನಲ್ಲೊ" ಎಂದ ಉಗ್ರಿ.

"ಶೇಷನ್‌ಗಿಂತ್ಲು ಸ್ಟ್ರಾಂಗು ಕಣೊ ಉಗ್ರಿ ಅಪ್ಪ ಮಕ್ಕಳ ಅಳ್ಳಾಡ್ಸಿ ಬುಟ್ಟ ಅತ್ತಗೆ"

"ಯಾರು ಗೆಲ್ತರ್ಲ?" ಎಂದ ಕಾಳಮಾವ.

"ಯಾರಾರ ಗೆದ್ದು ಹಾಳಾಗೋಗ್ಲಿ ಅನ್ನಂಗಾಗೋಯ್ತು ದ್ವಡಪ್ಪ ಈ ಚುನಾವಣೆ."

"ಅಂಗಾಯ್ತು ಅನ್ನು?"

"ಊ ದ್ವಡಪ್ಪ, ಈಗ ಕುಸ್ತಿ ಆಡಕ್ಕೆ ಅಂತ ಕಾಚಾ ಕಟಗಂಡು ಆಖಾಡಕ್ಕೆ ಇಳದಾಗ ಎದುರಾಳಿ ಕಾಚಾನೇ ಹಾಕದಂಗೆ ಬಂದ್ರೆ ಕುಸ್ತಿ ಮಾಡಕ್ಯಾಯ್ತದಾ, ಥೂ ಅಂತ ಉಗುದು ಬರಬೇಕಾಯ್ತದೆ ಅಂಗಾಯ್ತು ಈ ಯಲಕ್ಷನ್ನು."

"ಅದ್ಯಾರಂಗೆ ಮಾಡಿದ್ದುರ್ಲ?"

"ಇನ್ಯಾರಕ್ಕ, ದೇವೇಗೌಡ ಅಂಡ್ ಸನ್ಸ್. ಈ ಕಾಳಗದಲ್ಲಿ ಖಾಚಾನೇ ಹಾಕಿರಲಿಲ್ಲ, ಅಷ್ಟೊಂದು ಬೋರ್ ಮಾಡಿಬುಟ್ರು. ಆ ಸಿದರಾಮಯ್ಯನ ಟೀಮು ಇವುರೇಳೊ ಸುಳ್ಳಿಗ್ಯಲ್ಲ ಉತ್ತರ ಕೊಡಕ್ಯಾಗದೆ ಸುಸ್ತಾಗಿಬುಟ್ರು ಕಣಕ್ಕ. ಆದ್ರು ದೇವೇಗೌಡ್ರ ಕಡಿಯೋರು ಹಂಚೋ ಸಾಮಗ್ರಿ ನೋಡಿ ಅಲ್ಲೇ ಇರನಾ ಅನ್ನಿಸಿತ್ತು ಕಣಕ್ಕ."

"ಅದೇನಂಚಿದುರ್ಲ?"

"ನೀನೇನು ಕೇಳ್ತಿ ಅದ ಕೊಡೋರು ಕಣಕ್ಕ. ನಾವು ಈತರ ಕೀತರ ಇಂತ ಜಾತಿಯವುರು ನಮ್ಮದೆ ಒಂದು ಸಂಘ ಅದೆ ಅಂದ್ರೆ ಸಾಕು ಕೈಗೆ ಎರಡು ಲಕ್ಷ ಕ್ಯಾಶ್ ಕೊಡೋರು."

"ಯರಡು ಲಕ್ಷ ಕೊಡೋರೆ!"

"ಜಾಸ್ತಿ ಜನಿದ್ದಿವಿ ಅಂದ್ರೆ ನಾಕರಿಂದ ಹತ್ತು ಲಕ್ಷ ಕೊಡೋರು ಕಣಕ್ಕ. ಅಂಗಾಗಿ ಕಿರುಜಾತಿ ಹುಡುಗರೆಲ್ಲಾ ಮೈದೆಲಿ ಹುಲ್ಲಿರದಂಗೆ. ದುಡ್ನ ಇರುದು ಮಡ ಗಿದ್ರು ಕಣಕ್ಕ ನಾನಂತು ಇತಿಹಾಸದಲ್ಲಿ ಹಿಂದ್ಯಾವಾಗ್ಲೂ ಇಂತ ಚುನಾವಣೆ ನೋಡಿರಲಿಲ್ಲ."

"ಕಾಂಗ್ರೆಸ್ಸಿನೋರೇನು ಕಡಮೆ ಅನ್ನಕಂಡಿದ್ದಿಯಾ ಅವರು ಏನಾರ ಕೊಟ್ಟಿರತರೆ ಕಣೊ" ಎಂದ ಉಗ್ರಿ.

"ಯಾರು ಕೊಡಬೇಕೊ ಯಾರು ಕೊಡಬೇಕು ಇಲ್ಲಾದ್ರೆ ಮುಖ್ಯಮಂತ್ರಿನೆ ಹಂಚೊ ವಿಷಯದಲ್ಲಿ ಲೀಡ್ರಾಗಿದ್ದ. ಆ ಚಲುವ ಚನ್ನಿಗ ಜೆ.ಟಿ. ದ್ಯಾವ ಜೈಕುಮಾರ ಯಾರು ನೋಡು ಕೊಳ್ಳೆ ಹ್ವಡದಿರೊ ಪದಾರ್ಥ ಹಂಚಗಳೊರಂಗೆ ಕಾಣೋರೆ ವರತೂ ಯಾರೂ ಮಂತ್ರಿ ಮಹೋದಯರಂಗೆ ಕಾಣಲೇ ಇಲ್ಲ. ಅದ್ಕೆ ಈ ಚುನಾವಣೆ ರಿಜಲ್ಟ್ ಇಷ್ಟೆ ಅಂತ ಹೇಳಕ್ಕೆ ಬರೋದಿಲ್ಲ."

"ಅದೇ ಕಣೊ ನೀನು ತಿಳಕಂಡಿರೊ ತಪ್ಪು ವಾಟಿಸ್ಸೆ. ನಮ್ಮ ಜನ ಯಂಥೋರು ಅಂದ್ರೆ ಜೆ.ಎಚ್. ಪಟೇಲರ ಮೂರನೆ ಸ್ಥಾನಕ್ಕೆ ಕಳಿಸಿದ್ರು. ಯಸ್ಸೆಂ ಕಿಸ್ನ ಮದ್ದೂರು ಬುಟ್ಟು ಓಡಂಗೆ ಮಾಡಿದ್ರು ಇದನ್ನೆಲ್ಲ ನೋಡಿದ್ರೆ ಈತರ ಹಂಚಿ ಗೆಲ್ತಿವಿ ಅನ್ನದು ಸುಳ್ಳು ಕಣೊ."

"ಅದು ನನಿಗೂ ಗೊತ್ತು ಕಣೊ ಉಗ್ರಿ, ಆದ್ರೆ ಈ ದ್ಯಾವೇಗೌಡ್ರು ಟೀಮು ಹಣ ಹಂಚಕ್ಕೆ ಸ್ತ್ರೀಸಗತಿ ಅಂಗನವಾಡಿ ಜನ ಬಳಿ ಸಿಗತ್ತರೆ. ಗಣಿ ದುಡ್ಡು ಪೂರ ಹೋಗ್ಲಿ ಅಂತರೆ ಅದ್ಕೆ ನನಿಗೆ ರಿಜಲ್ಟ್ ಹೇಳದು ಕಷ್ಟಾಗಿರದು ಒಟ್ಟನಲ್ಲಿ ನೆಕ್‌ಟು ನೆಕ್ಕದೆ."

"ಅದೇನ್ಲ ನೆಕ್ಕು ನೆಕ್ಕು ಅದ್ರೆ?" ಎಂದು ಜುಮ್ಮಿ ನಕ್ಕಳು.

"ಏ ಯಾವನೊ ಅಂದ ಮಾತಂತನೆ ಕಣೆ. ಅವುನು ಅಲ್ಲಾ ಕಣೇ. ವಾಟಿಸ್ಸೆ ಪೇಪರ್‌ನೋರ್ ತರ ಮಾತಾಡಬ್ಯಾಡ ಒಂದಿಷ್ಟು ಚರ್ಚೆ ಮಾಡು. ನಮ್ಮೊರು ಎಲ್ಯಾರ ಅವುರಿವುರು ಹೇಳಿದಂಗೆ ಓಟಾಕ್ತರೇನೊ?"

"ಇಲ್ಲ ಬುಡು."

"ಅಂತ ದೇವರಾಜ ಅರಸುನ್ನ ಗೆಲ್ಸಿಗಂಡು ಬಂದ್ರು ಈ ದ್ಯಾವೇಗೌಡ ಹೋಗಿ ಏನು ಚಾಡಿ ಹೇಳಿದ್ರು ಅರಸು ಸೋಲಸಕ್ಯಾಗಲಿಲ್ಲ."



ಒಕ್ಕಲಿಗ ನಾಯಕರು

"ನಿಜ ಕಂಡ್ಯ, ನಮ್ಮೊರು ದ್ಯಾವೇಗೌಡನ ಮಾತ ಯಾವತ್ತೂ ಕೇಳಿಲ್ಲ" ಎಂದ ಸೀರ.

"ಇಸಿಸಿ ದ್ಯಾವೇಗೌಡನ್ನ ಸಿಂಧ್ಯಾ ಸೋಲಿಸಿರಲಿಲ್ಲವೆ?"

"ಅದೋಗ್ಲಪ್ಪ ಟಿ. ಮರಿಯಪ್ಪನ್ನ ನಾವೆ ಯರಡ[...] ಸತಿ. ಗೆಲ್ಸಿರಲಿಲವೆ?" ಎಂದ ಕಾಳಮಾವ.

"ಅದೆ ಮಾವ ನಾನೇಳದು. ನಮ್ಮೊರು ತಮ[...] ಮನಸಿಗೆ ಬಂದಂಗೆ ಓಟು ಮಾಡದರಿಂದ ಚಾಮುಂಡ[...] ಶ್ವರಿಲಿ ಸಿದ್ಧರಾಮಯ್ಯನಿಗೂ ಹಾಕ್ತಾರೆ. ಇನ್ನ ಸಾ[...] ರೋಟು ದಳಕ್ಕೆ ಬರದಿಲ್ಲ, ಬಿಜೆಪಿಗಳಂತೂ ತಮ[...] ಅಭ್ಯರ್ಥಿ ಇಲ್ಲ ಅಂತ ಮನೆ ಬುಟ್ಟು ಈಚೆಗೆ ಬರದಿ[...] ಲಿಂಗಾಯಿತ್ರು ಅರ್ಧ ಅಂಗಾದ್ರೆ ಅರ್ಧ ಹಿಂಗಾ[...] ಬವುದು, ಇದನ್ನೆಲ್ಲ ಲ್ಯಕ್ಕ ಹಾಕಿ ಟೋಟ್ಲು ಮಾಡಿ[...] ಸಿದ್ಧರಾಮಯ್ಯ ಗೆಲ್ಲಬವುದು ಅಂತ ನನಿಗನುಸ್ತಾ ಅದ[...]" ಎಂದ ಉಗ್ರಿ.

"ಗುರುಸ್ವಾಮಿ ಪೋರಸಾಗಿದ್ರೆ ನಾನು ಕರಟ[...] ರಿಜಲ್ಟ್ ಹೇಳತಾಯಿದ್ದೆ ಕಣೊ ಉಗ್ರಿ. ಏನು ಮಾ[...] ಅವುನ್ಯಾಕೊ ಡಲ್ಲಾಗ್ಯವುನೆ" ಎಂದ ವಾಟಿಸ್ಸೆ.

"ಅವುನೇನಾರ ಆಗ್ಲಿ ಈ ನಾಗೇಗೌಡನೆದ್ರಿಗೇ[...] ಬತ್ತು. ಗಂಡುಳ್ಳೊ ಗರತಿ ಜೋಗಿ ಹಿಂದೋದ[...] ದ್ಯಾವೇಗೌಡನ ಜ್ವತೆ ಹೋಗಿ ಸೇರಿಕಂಡ್ನಲ[...]" ಎಂದಳು ಜುಮ್ಮಿ.

"ದ್ಯಾವೇಗೌಡನ ಜ್ವತೆ ಅಲ್ಲ ಕ[...] ಕುಮಾರಸ್ವಾಮಿ ಹಿಂದೋದ್ನು."

"ಇಂಗೋಗಳು ಅಂಗ್ಯಾಕನ್ನಬೇಕಾಗಿತ್ತೂ!"

"ಏನಂದಿದ್ದೆ?"

"ನನ್ನ ಗಂಡನ್ನಾ ದ್ಯಾವೇಗೌಡ ಮಾ[...] ಮಾಡಿ ಮುರುದಾಕಿದ. ಆದ್ರು ನನ್ನ ಗಂ[...] ಇವತ್ತು ಬಂದು ಸಿದ್ಧರಾಮಯ್ಯನ ಸರೀಳದ[...] ಸೇರಿಕಂಡವುನೆ ಅಂದಿದ್ನು."

"ಸರಿ ಕಣೆ ಅವುಳಂದ ಮ್ಯಾಲೂ [...] ಸಿದರಾಮಯ್ಯ ಅವುಳ ಕಡಿಕೆ ತಿರಿಗಿ ನೋ[...] ದಂಗೆ ಬೀಜ ಹ್ವಡಿಸಿ ಗಂಡಿರೊ ಟ[...] ನಂಗಿದ್ರೆ ಅವುಳೇನು ಮಾಡ್ತಳೆ ಪಾಪ ಹೋ[...] ಲತ್ತಗೆ" ಎಂದು ಉಗ್ರಿ ನಗಾಡಿದ. ಉ[...] ಹಾಸ್ಯಕ್ಕೆ ಎಲ್ಲರೂ ನಗಾಡುತ್ತಿರುವಾಗ ಎಚ[...] ವನಂತೆ ವಾಟಿಸ್ಸೆ, "ಈ ಯಲಕ್ಸನ್ನಲಿ ದ್ಯಾ[...] ಗೌಡ ಗೆದ್ರೆ ಗತಿಯೇನೊ ಉಗ್ರಿ?" ಎಂ[...]

"ಗತಿಯೇನು ಭಕ್ತ ಕುಂಬಾರ ಕೈಮ[...] ತ್ತಿಗಂಡು ವಿಟ್ಟಲ ವಿಠಲ ಪಾಂಡುರಂಗ ಅಂತ ಮ[...] ತುಣಿತನೆ ನೋಡು ಅಂಗೆ ಇದ್ದ ಬದ್ದ ಲೀಡ್ರುಗಳ[...] ತುಳದಾಕ್ತನತ್ತಗೆ."

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ.

–ಬಿ. ಚಂದ್ರೇಗೌ[...]

Zero Hour ಮುನ್ನಿ

1. ಈ ಅಪೂರ್ವ ಮಿಲನದ ಕುರಿತು ಒಂದು ಸಾಲು ಬರೆಯಿರಿ




a) ಬಂಡವಾಳಶಾಹಿ+ಸನಾತನವಾದಿ
b) ಫೈರ್! ಇದು ಬಿಜೆಪಿ ಸಿದ್ಧಾಂತದ ಹಿಂದಿನ ಗುಟ್ಟು
c) ಬುಶ್, ವಾಜಪೇಯಿ ಮುದ್ದಾಡಿದಂತೆ....
d) ಇದಿಷ್ಟೇ ಸಾಕಲ್ಲವೆ, ಬಿಜೆಪಿಗೇಕೆ ಬುಶ್ ಇಷ್ಟ ಎಂದು ಹೇಳಲು

2. ಮಂಗಳ ಗ್ರಹದ ಕಾಟ ತಪ್ಪಿಸಿಕೊಳ್ಳಲು 85 ಅರ್ಚಕರಿಂದ ಪೂಜೆ ಮಾಡಿಸಿದ್ದಾರೆ ಐಶೂ, ಅಭಿಷೇಕ್. ನೀವೇನಂತೀರಿ?



a) ಮಂಗಳದ ಕಾಟ ತಪ್ಪಿಸಲು 85 ಮಂಗಗಳೇ ಬೇಕೆ?
b) ಸದ್ಯಕ್ಕೆ ಪ್ಲುಟೋ ಕಾಟ ಎಂದಿಲ್ಲವಲ್ಲ!
c) ಕಿಲಾಡಿ ಅರ್ಚಕರು ಸೂರ್ಯನ ಕಾಟ ಎಂದೂ ಹೇಳಬಲ್ಲರು
d) ಬಹುಶಃ ಸಲ್ಮಾನ್ ಕಾಟ ತಪ್ಪಿಸಲು ಈ ಪೂಜೆ ಮಾಡಿರಬೇಕು

3. 'ಕುಮಾರಸ್ವಾಮಿ ಕೊಲೆಗೆ ಸ್ಕೆಚ್ಚು ಹಾಕಿದ್ದಾರೆ. ಕನ್ನಡದ ಕಂದನನ್ನು ಉಳಿಸಿಕೊಳ್ಳಿ' ಎಂದಿದ್ದಾರಲ್ಲ ಗೌಡಾಜಿ?



a) ಅಪ್ಪ ಮಕ್ಳು ಸೇರಿ ಕರ್ನಾಟಕಕ್ಕೇ ಸ್ಕೆಚ್ ಹಾಕುವ ಪೂರ್ವ ತಯ್ಯಾರಿಯಿದು
b) ಶೂಟ್ ಮಾಡಿ ಕೊಲ್ತಾರೊ, ಕೊಚ್ಚಿ ಕೊಲ್ತಾರೊ ಎಂಬುದನ್ನು ಹೇಳಿಲ್ಲವಲ್ಲ!
c) ಅತ್ತತ್ತು ಓಟು ಬೇಡುವ ಸ್ಥಿತಿಗೆ ಬಂದಾಗ ಇನ್ನೇನು ಹೇಳ್ತಾರೆ ಮಾಜಿ ಪಿಎಮ್ಮು
d) ಚಾಮುಂಡೇಶ್ವರಿಯನ್ನೇ ಕೊಲ್ಲಬಲ್ಲ ಗೌಡರಿಂದ ಇಂತಹ ಮಾತೆ?


4. ಕರಾವಳಿ, ಮಲೆನಾಡಿಗೆ ಚಡ್ಡಿಗಳಿಂದ ಮುಕ್ತಿ ಎಂದು?

a) ಮೋದಿಯ ಮಂಗಗಳಾದ ನಾಗರಾಜಶೆಟ್ಟಿಗಳನ್ನು ಸಮುದ್ರಕ್ಕೆ ತಳ್ಳಿದಾಗ
b) ಸಿ.ಟಿ. ರವಿ, ಸುನಿಲ್‌ಕುಮಾರ್ ಎಂಬ ಕಪಿಗಳ ಬಾಲಗಳನ್ನು ಕಟ್ ಮಾಡಿದಾಗ
c) ಭಜರಂಗಿಗಳನ್ನು ಕಸಾಯಿಖಾನೆಗೆ ದಬ್ಬುವುದೇ ಪರಿಹಾರವೇನೊ?
d) ಎಲೆಕ್ಷನ್ ಬರ್ಲಿ ತಡಿ, ಜನರೇ ಪಾಠ ಕಲಿಸ್ತಾರೆ

5. ಸಂಸದರು ದುಡ್ಡು ಪಡೆದು ಪ್ರಶ್ನೆ ಕೇಳುತ್ತಾರೆ ಎಂದಿದ್ದಾನೆ ಗ್ರೇಗ್ ಚಾಪೆಲ್. ಕಾಮೆಂಟ್ ಮಾಡಿ

a) ಸತ್ಯ ಹೇಳಿದ್ದಾನೆ ಬಿಡು
b) ತನ್ನ ಬೌಂಡರಿ ದಾಟಿ ಮಾತಾಡ್ತಿದ್ದಾನೆ ಚಾಪೆಲ್
c) ಸೋಲಿನತ್ತ ಸಾಗುತ್ತಿರುವ ಭಾರತದ ತಂಡ ನೋಡಿ ತಲೆಕೆಟ್ಟದೆಯಂತೆ
d) ಹಾಳಾಗಿ ಹೋಗ್ಲಿ ಬಿಡು ಈ ಕ್ರಿಕೆಟ್ಟು

ಉತ್ತರಗಳು: 1. c 2. d 3. d 4. c 5. d



ಪೊಲೀಸಪ್ಪ ಚನ್ನಿಗಪ್ಪ, ಗಂಡುಮಗಾ ಅಂದ್ರ ನೀನಾ ಬಿಡಪ್ಪ. ಪೇಪರ್‌ನ್ಯಾವು ಅಂದ್ರ ಏನ್ ಮ್ಯಾಲಿಂದ ಇಳಿದು ಬಂದಾರನು? ಹೋಗಿ ಹೋಗಿ ನಿನ್ ಫೋಟಾ ಹೊಡೆಯಾಕ ಬರೋದಾ? ಅದೂ ನೀ ಎಲೆಕ್ಷನ್ನಿನ್ಯಾಗ ರೊಕ್ಕ ಹಂಚಾಕ ಹೊಂಟಾಗ.... ನೀ[...] ಬಿಡಾ ಮಗನಾ ಅಲ್ಲ... ರಿಬ್ ರಿಬ್ ನಾಕು ಹೊಡದ[...] ಬಿಟ್ಟಿ.... ಬಾಳ ಶಾಣ್ಯಾ ಅದಿ ನೀ. ಹೊಡೆಯೊ ಮಟ[...] ಹೊಡೆದು ಆಮ್ಯಾಲ sorry ಅಂದ್ಬಿಟ್ಟಿಯಲ್ಲ... ಚಾಲೂ[...] ನನ್ಮಗ ಅಂದ್ರ ನೀನಾ ನೋಡು... ಈ ಕಡೆ ಗೌಡ[...] 'ಹೌದ್ದಲೆ ಮಗನಾ ಚೆನ್ನಿಗ' ಅಂತಾ ಖುಷಿಗೊಂಡಂಗೂ[...] ಆತು, ನಿನ್ ಚಟಾ ತೀರಿದಂಗೂ ಆತು....

ಮತ್ತು ಆ ಗಣಿರೊಕ್ಕ ಎಣಿಸೊ ವಿಡಿಯೊ[...] ತೆಗೆದಾವ ನಿನ್ ಕೈಗೆ ಸಿಕ್ರೆ ಸಾಯಿ ಹೊಡೆದುಬಿ[...] ಬಿಡು ನೀ. ಅದಕ್ಕ ಆ ಜನಾರ್ಧನ ರೆಡ್ಡಿ ವಿಡಿಯೊ[...] ತೆಗೆದೋರು ಯಾರು ಅಂತಾ ಹೇಳ್ಳಲ್ಲ...


ಮಿನಿಸ್ಟ್ರಾಗಿ ಸಿಕ್ಕೋರಿಗೆಲ್ಲ ಹೊಡಿತಿಯಲ್ಲ[...] ಪೊಲೀಸಿದ್ದಾಗ ಅದೆಷ್ಟು ಮಂದಿಗೆ ಹೊಡೆದಿರ್ಬೇಕು[...] ನೀನು.... ನೆಪ್ಪಿರಲಿ, ಕೊರಟಗೆರೆ ಮಂದಿ ಎಲೆಕ್ಷನ್ನಿ[...] ಕಾಯಾಕ ಹತ್ಯಾರ....ಆವಾಗ ನಿನ್ಗ ಬೀಳ್ತಾವ ತಡಿ... ರಿಬ್ ರಿಬ್...

–ಇತಿ ಮುನ್ನಿ[...]
ಧಾರವಾಡ[...]

ಒಂದು 'ಗಾದಿ' ಮಾತು

ಬುದ್ಧಿಯಿಲ್ಲದ ಗೌಡ ಕಡಿವಾಣ ಇಲ್ಲದ ಕುದುರೆಯಂತೆ.


ಊರೊಂದರ ವಕ್ರರೇಖೆಗಳು




ಆಗಸ್ಟ್ 28, 1988

ನಾನು ಇಲ್ಲಿ ಹೇಳಲು ಹೊರಟಿರುವುದು ಒಂದು ಹಳ್ಳಿಯ ವಕ್ರರೇಖೆಯ ಬಗ್ಗೆ. ಆ ಊರಿನ ಹೆಸರು ಮತ್ತೋಡು. ಹೊಸದುರ್ಗ ತಾಲ್ಲೂಕಿನ ಸುಮಾರು ಆರುನೂರು ಮನೆಗಳ ಗ್ರಾಮ ಇದು. ಪಟ್ಟಣದ ಗಿಲೀಟು, ಹಳ್ಳಿಯ ದಾರಿದ್ರ್ಯ ಎರಡನ್ನೂ ಇಟ್ಟುಕೊಳ್ಳಲು ಹವಣಿಸುತ್ತಿರುವ ಊರು ಇದು. ಭಾರತೀಯ ಜನತಾಪಕ್ಷ ಹೆಚ್ಚಾಗಿರುವ, ಕಾಂಗ್ರೆ, ಜನತಾ ತಮ್ಮ 'ವ್ಯಕ್ತಿತ್ವ' ಮೆರೆಸಲು ಯತ್ನಿಸುತ್ತಿರುವ ಊರು. ನಾನು ಈ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಎದ್ದು ಬಿದ್ದು ನನ್ನ ಕಾರಿನ ಬಗ್ಗೆ ಮರುಕಪಟ್ಟು, ಎಲ್ಲರ ಮೇಲೆ ರೇಗುತ್ತ ಹೋದೆ. ಅಲ್ಲಿಗೆ ನನ್ನನ್ನು ಕರೆದೊಯ್ದ ಹುಡುಗರು, "ನೀವು ಬರುತ್ತಿರೋದಕ್ಕೆ ಎಲ್ಲರಲ್ಲಿ ಥ್ರಿಲ್ ತುಂಬಿದೆ" ಎಂದು ಮುಂತಾಗಿ ಹೇಳಿ ಆಯಾಸ ಕಮ್ಮಿ ಮಾಡಲು ನೋಡುತ್ತಿದ್ದರು. ನಾನು ಅಷ್ಟೇನೂ ಭ್ರಮೆಗಳಿಲ್ಲದ ಮನುಷ್ಯ. ಆಗ ನನ್ನ ಸಿಟ್ಟು ಕಮ್ಮಿ ಮಾಡಲು "ನಮ್ಮ ಪತ್ರಿಕೆಯಲ್ಲಿ ಮತ್ತೋಡಿನ ಬಗ್ಗೆ ಬಂದಿದೆ. ಇಲ್ಲಿನ ಅನ್ಯಾಯವನ್ನು ಮೂರು ವರ್ಷದ ಹಿಂದೆಯೇ ನಮ್ಮ ವರದಿಗಾರರು ಬರೆದಿದ್ದಾರೆ" ಎಂದು ಹೇಳಿದರು.

ಎಷ್ಟಾದರೂ ಅದು ಗ್ರಾಮವಾದ್ದರಿಂದ, ಮಳೆ ಚೆನ್ನಾಗಿ ಹೊಯ್ದಿದ್ದರಿಂದ ರೈತರು ತಮ್ಮ ತಮ್ಮ ಗದ್ದೆಗಳಿಗೆ ಹೋಗಿದ್ದರು. ನನಗಾಗಿ ಕಾಯುತ್ತಿದ್ದವರು, "ನಮ್ಮ ಸ್ಕೂಲ್ ನೋಡಿ ಬರೋಣ-ನೀವು ಅದನ್ನು ನೋಡಲೇಬೇಕು" ಅಂದರು. ನಾನು, "ಯಾಕೆ? ನಾನು ನೋಡಿದರೆ ಏನಾಗುತ್ತೆ? ಮಂತ್ರಿಗಳಿಗೆ, ಅಧಿಕಾರಿಗಳಿಗೆ ತೋರಿಸಿದರೆ ಒಳ್ಳೆಯದಲ್ಲವೆ?" ಅಂದೆ. ಅವರು ಬಿಡಲಿಲ್ಲ, ಕರೆದೊಯ್ದರು. ಹೋಗುವ ದಾರಿಯಲ್ಲೇ ಮಹಿಳಾ ಸಂಘ ಇತ್ತು. ಗೋಡೆ ಬಿದ್ದು ಹೋಗಿತ್ತು. ಛಾವಣಿ ಕುಸಿಯತೊಡಗಿತ್ತು. ಅದನ್ನು ಕಂಡರೂ ಕಾಣದಂತೆ ಶಾಲೆಯ ಬಳಿಗೆ ಹೋದರೆ, ಆರುನೂರು ಮನೆಯ ಈ ಗ್ರಾಮದ ಐನೂರು ಮಕ್ಕಳು ಕಲಿಯುವ ಶಾಲೆ ದಿಗ್ಭ್ರಮೆಗೊಳಿಸಿತು. ಸೂರಿಲ್ಲದೆ ಮಳೆಯ





ನೀರು ಒಳಗೇ ಸುರಿಯುತ್ತಿತ್ತು; ಮಕ್ಕಳು ಒದ್ದೆ ನೆಲದ ಮೇಲೆ ಕೂತಿದ್ದರು. ಅಧ್ಯಾಪಕರ ಮೇಜು ಅಂಗವಿಕಲವಾಗಿತ್ತು. ಶಾಲೆಯನ್ನು ಇವರು ವಿಸ್ತರಿಸಿದ್ದು ಕೂಡ ಕುತೂಹಲಕರ. ಹುಲ್ಲು ಜೋಪಡಿ ಕಟ್ಟಿ ಅದು ಸುರಕ್ಷಿತವೋ ಎಂದು ಕೂಡ ನೋಡಿರಲಿಲ್ಲ.

"ಇಲ್ಲಿಗೆ ಡಿ. ಮಂಜುನಾಥ್ ಬಂದರು, ಇತರ ಮಂತ್ರಿಗಳು ಬಂದು ಆಶ್ವಾಸನೆ ನೀಡಿದರು. ಆಳ್ವ, ಹೆಗಡೆ ಎಲ್ಲರಿಗೆ ಹೇಳಿದೆವು. ಏನೂ ಆಗಿಲ್ಲ" ಅಂದರು.

"ಅಲ್ರೀ, ನೀವೇ ಆರುನೂರು ಕುಟುಂಬಗಳಿದ್ದೀರಿ. ನೋಡಲು ಅಂಥ ಬಡವರ ಹಾಗೆ ಕಾಣ್ತಿಲ್ಲ. ರಾಜಕಾರಣಿಗಳ ಎದುರು ಗೋಗರೆದು ಸೋತಿದ್ದೀರಿ. ನೀವು ಒಗ್ಗಟ್ಟಾಗಿ ಒಬ್ಬೊಬ್ಬರು ಇನ್ನೂರು ರೂಪಾಯಿ ಕೊಟ್ಟರೂ ಈ ಸ್ಕೂಲಿನ ರಿಪೇರಿಗೆ ಬೇಕಾಗುವಷ್ಟು ಹಣ ಬರುತ್ತೆ, ಅಲ್ಲವೇ? ನಿಮ್ಮ ಮರ್ಯಾದೆ ಗಿಂತ ಈ ಇನ್ನೂರು ರೂಪಾಯಿ ಹೆಚ್ಚೆ? ನಿಮ್ಮ ಮಕ್ಕಳಿಗಿಂತ ಹೆಚ್ಚೆ?" ಅಂದೆ.


ಅವರಲ್ಲಿ ಉತ್ತರ ಸಿದ್ಧವಿತ್ತು, "ಅದು ಸರಿ ಸಾರ್, ಸಂಗ್ರಹಿಸಿದ ಹಣ ಯಾರಲ್ಲಿ ಸುರಕ್ಷಿತ ಅಂತ ನಂಬೋದು? ತಿಂದು ಹಾಕುವವರೇ ಹೆಚ್ಚು" ಅಂದನೊಬ್ಬ. ಅವರೆಲ್ಲರನ್ನೂ ನೋಡಿದೆ. ತಮ್ಮಲ್ಲೇ ವಿಶ್ವಾಸ ವಿಲ್ಲದ ಜನ.

ಮತ್ತೋಡಿನ ಹೇಡಿತನ, ದೌರ್ಬಲ್ಯ ಇನ್ನೂ ಆಳವಾಗಿತ್ತು. ಮತ್ತೋಡು ಒಂದು ಮೋಸದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿತ್ತು. ಎಂ.ಎಸ್. ರಾಮಯ್ಯ ಎಂಬ ಪ್ರಖ್ಯಾತ ಖದೀಮ ಇಲ್ಲಿ ನಾಲ್ಕು ವರ್ಷದ ಹಿಂದೆಯೇ 'ಗೋಕುಲ್ ಸಿಮೆಂಟ್ಸ್' ಎಂಬ ಕಾರ್ಖಾನೆ ಸ್ಥಾಪಿಸಿ ಕಳೆದ ಮೂರು ವರ್ಷದಿಂದ ದಿನಕ್ಕೆ ಇನ್ನೂರು ಟನ್ ಸಿಮೆಂಟ್ ತಯಾರಿಸುತ್ತಿದ್ದ. ಸಿಮೆಂಟ್ ಧೂಳು ಊರಿನ ತೆಂಗಿನ ತೋಟ, ಕಬ್ಬಿನ ತೋಟಕ್ಕೆ, ಅವರಿಸಿ ಗಿಡಮರಗಳನ್ನು ನಾಶ ಮಾಡುತ್ತಿದ್ದವು. ಎಂ.ಎಸ್. ರಾಮಯ್ಯ ಕಾರ್ಖಾನೆ ಸ್ಥಾಪಿಸುವುದಕ್ಕೆ ಮುಂಚೆ ಮತ್ತೋಡು ಗ್ರಾಮದವರೊಂದಿಗೆ ಮಾತಾಡಿ ಊರಿನ ಅಭಿವೃದ್ಧಿಗಾಗಿ ಪ್ರತೀ ವರ್ಷ ಎರಡು ಲಕ್ಷ ರೂಪಾಯಿ ಕೊಡುವುದಾಗಿ, ಕಾರ್ಖಾನೆಯಲ್ಲಿ ಬಹುಪಾಲು ಊರಿನ ತರುಣರಿಗೆ ತರಬೇತಿ ನೀಡಿ ಕೆಲಸಗಾರರನ್ನಾಗಿ ನೇಮಿಸಿಕೊಳ್ಳುವುದಾಗಿ ಕರಾರು ಬರೆದು ಕೊಟ್ಟಿದ್ದ. ಆದರೆ ಆತ ಕರಾರಿಗೆ ಬದ್ಧನಾಗಲಿಲ್ಲ; ಊರಿಗೆ ಹಣ ಬರಲಿಲ್ಲ, ಊರಿನ ಜನಕ್ಕೆ ಉದ್ಯೋಗ ದೊರೆಯಲಿಲ್ಲ. ಊರವರು ಪ್ರತಿಭಟಿಸಲು ಯತ್ನಿಸಿದರು; ಪೊಲೀಸರು ಗದರಿಸಿ ಲಾಠಿ ತೋರಿಸಿದರು. ಅಷ್ಟರಲ್ಲಿ ಊರಿನ ಕೆಲವು ಕಳ್ಳರೇ ರಾಮಯ್ಯನೊಂದಿಗೆ ಶಾಮೀಲಾಗಿ ಪ್ರತಿಭಟನೆ ನಿಂತಿತು. ಊರಿನ ರಸ್ತೆ ಕೊರಕಲಿನಿಂದ ಮುಂದುವರಿದವು; ಊರಿನ ಸ್ಕೂಲು ದಿವಾಳಿ ಎದ್ದಿತು. ಹೆಗಡೆಗೆ ಹೇಳಿದರೂ, ಆಳ್ವಾಗೆ ಹೇಳಿದರೂ ಏನೂ ಆಗಲಿಲ್ಲ. ರಾಮಯ್ಯನ ಮೆಡಿಕಲ್ ಎಂಜಲಿನ ಎದುರು ಮತ್ತೋಡಿನ ಕೂಗು ದುರ್ಬಲವಾಗಿತ್ತು. ಊರಿನ ದಾರಿದ್ರ್ಯದಲ್ಲಿ ಇಬ್ಬಂದಿತನ, ಸುಳ್ಳು, ನೋವು, ನಿರಾಶೆಯೆಲ್ಲ ಸೇರಿಕೊಂಡವು.

"ಹೀಗೇ ಆದರೆ ನಿಮ್ಮ ಶಾಲೆಯ ಸೂರಿನಂತೆಯೇ ನಿಮ್ಮ ಮನೆಯ ಛಾವಣಿಗಳೂ ಮುರಿದು ಬೀಳಲಿವೆ. ನಿಮ್ಮಲ್ಲಿ ಹತ್ತು ಜನರಾದರೂ ನಿಯತ್ತಿನವರಿಲ್ಲದಿದ್ದರೆ ಇಂಥ ಊರುಗಳಲ್ಲಿ ಜೀವನ ದುಸ್ತರವಾಗಲಿದೆ. ನಿಮ್ಮ ಊರಿನಂಥ ಎಲ್ಲ ಊರುಗಳಲ್ಲಿನ ನಿರುದ್ಯೋಗ, ನಿರ್ಲಕ್ಷ್ಯ ಸರ್ಕಾರದ ಭಂಡತನ ಗಮನಿಸಿದ್ದೇನೆ. ನಿಮ್ಮ ಊರು ನಮ್ಮ ಎಲ್ಲ ಸರ್ಕಾರಗಳಿಗೆ ಸಂಕೇತ ಕೂಡ" ಅಂದೆ.

ಮತ್ತೋಡಿನ ಜನ ಅಸಹಾಯಕರಾಗಿ ಕೇಳುತ್ತಲೇ ಇದ್ದರು. ಅವರನ್ನು ಮೆಚ್ಚಿಸುವ ಅಗತ್ಯ ನನಗಿರಲಿಲ್ಲ. ಇದೀ ಪರಿಸ್ಥಿತಿಯ ವಕ್ರರೇಖೆಗಳು ನನ್ನ ಮನಸ್ಸು ಮುತ್ತಿದ್ದವು.

ಹೆಣ್ಣಿಗಾಗಿ ರಾಮಾಯಣ, ಮಣ್ಣಿಗಾಗಿ ಮಹಾಭಾರತ, ರಾಜಕಾರಣಕ್ಕಾಗಿ?



ಕೆ.ಶ್ರೀನಿವಾಸ್, ಮಂಡ್ಯ
ಭ್ರಷ್ಟರ ಮಕ್ಕಳು ಪ್ರಾಮಾಣಿಕರ ಮಕ್ಕಳನ್ನು ಕೀಳಾಗಿ ಕಾಣುವುದೇಕೆ?
* ಗಿಲೀಟು ಪುತ್ರರೇ ಹಾಗೆ.

ಇಂದಿರಾ ಶ್ರೀಧರ್, ದಾವಣಗೆರೆ
ಕೆ.ಎಸ್. ನರಸಿಂಹಸ್ವಾಮಿ ರಸಿಕ ಕವಿ ಯಾದರೆ, ಲಂಕೇಶ್?
* ಸಿಂಪ್ಲಿ 'ನೀಲು'!

ಸದಾನಂದ ಸಿ. ಗಂಗನಬೀಡು, ಕೆ.ಆರ್.ಪುರಂ
ತಾಳಿದವನು ಬಾಳಿಯಾನು ಎಂದು ನಂಬಿಕೊಂಡು ತಡವಾಗಿ ಮದುವೆಯಾಗುವವರ ಪಾಡೇನು?
* Urgent ಆಗಿ ಮದುವೆ ಆಗಿರುವವರ ಪಾಡೂ ಇದೇನೆ ಬಿಡಿ.

ವಿದ್ಯಾಶ್ರೀ, ಸುರಪೂರ
ಹೆಣ್ಣು ನಾಚಿಕೊಂಡರೆ ಚಂದವಂತೆ! ಗಂಡು?
* ಚಂದ!

ಅಕ್ಬರ್ ಸಿ. ಕಾಲಿಮಿರ್ಚಿ, ಭಾಗ್ಯನಗರ
ಕರ್ನಾಟಕಕ್ಕೆ ಮಹಿಳಾ ಮುಖ್ಯಮಂತ್ರಿಯ ಯೋಗ ಯಾವಾಗ?
* ಭವಾನಿ, ಅನಿತಾ ಮುಂದಲೆ ಹಿಡಕೊಂಡು ಆಗಲೇ ಕಿತ್ತಾಡುತ್ತಿದ್ದಾರಂತೆ ಗೊತ್ತಾ,

ಕಾಳಿಹುಂಡಿ ಶಿವಕುಮಾರ್, ಮೈಸೂರು
ಸೀರೆ ಉಡುವ ನಾರಿಯರು ಕಣ್ಮರೆಯಾಗುತ್ತಿದ್ದಾರಲ್ಲಾ?
* ಹುಡುಗಿಯರ ಕಾಲೇಜಿನ ಹತ್ತಿರ ಓಡಾಡುವುದನ್ನು ಕಡಿಮೆ ಮಾಡು!

ಉಮಾ ಗುರುರಾಜಾಚಾರ್, ಸಂಗನಕಲ್ಲು
ಸತಿ, ಸವತಿಯಾಗುವುದು ಯಾವಾಗ?
* ಪತಿ, ಕಿತಾಪತಿ ಶುರುಹಚ್ಚಿಕೊಂಡಾಗ.

ಆರ್ಕೆ. ಕೊಟ್ರೇಶ, ಹಗರಿಬೊಮ್ಮನಹಳ್ಳಿ
ಹುಡುಗಿಯರೇ ಪ್ಯಾಂಟ್‌ಶರ್ಟ್ ಧರಿಸಿದರೆ ಹುಡುಗರು ಏನು ಧರಿಸಬೇಕು?
* ಕೊಟ್ರೇಶಿ, ನಿನ್ನ ಪ್ಯಾಂಟು ಶರ್ಟು ಕಿತ್ತುಕೊಂಡು ಹೋದಾಗ ಆ ಯೋಚನೆ ಮಾಡೋವಂತೆ ಬಿಡು.



ಮಂಚಾಲಿ ಗುರುರಾಜಾಚಾರ್, ಬಳ್ಳಾರಿ
ಹುಚ್ಚರ ಮದುವೆಯಲ್ಲಿ ಉಂಡೋನೆ ಜಾಣ, ಮತ್ತೆ ಸಮ್ಮಿಶ್ರ ಸರ್ಕಾರದಲ್ಲಿ?
* ಮಿಲಾಕತ್ ಆದವನೇ ಕೋಣ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ವಾರವಾರವೂ ಉತ್ತಮ ಪ್ರಶ್ನೆಗೆ ಹಾಗೂ ಉತ್ತಮ ಉತ್ತರಕ್ಕೆ ಬಹುಮಾನ ಕೊಡುವ ಏಕೈಕ ಪತ್ರಿಕೆ 'ಲಂಕೇಶ್' ಎಂಬುದು ಸಂತೋಷದ ವಿಷಯವಲ್ಲವೇ?
* ಮಿ. ಶ್ರೀವತ್ಸ ಅದು ಖರ್ಚಿನ ವಿಚಾರವೂ ಹೌದು.

ಆ.ರಾ.ಮಂಜುನಾಥ್, ಗೆದರೆ
ಪ್ರೇಮಿಗಳ ನಡುವೆ ಮದುವೆಗೂ ಮುಂಚಿದ್ದ ಆತ್ಮೀಯತೆ ಮದುವೆ ಬಳಿಕ ಏಕೆ ಇಲ್ಲ?
* ಅದಕ್ಕೆ ಅದನ್ನು ಮದುವೆ ಅಂತಾರೆ ಗೊತ್ತಾ.

ಶಿವಕುಮಾರ್, ಸುರಪೂರ
ಹಣ್ಣು ಕದ್ದು ತಿಂದ್ರೇ ಸವಿ ಹೆಚ್ಚಂತೆ! ಹೆಣ್ಣು?
* ಹೆಂಗಸರೂ ಕದ್ದು ತಿಂದರೆ ರುಚಿ ಯಾಕೆ ಬದಲಾಗುತ್ತೆ.

ಬಸವರಾಜ ಬೆಸ್ತರ್, ಗುಲ್ಬರ್ಗಾ
ವಿಜ್ಞಾನಿ ಕಲಾಂ ಬೂದಿ ಸಾಯಿಬಾಬಾನಲ್ಲಿ ಕಂಡದ್ದೇನು?
* ಮ್ಯಾಜಿಕ್ 20-20.

ಬಿ.ಚಂದ್ರೇಗೌಡ, ಬೆಂಗಳೂರು
ಬೇಜವಾಬ್ದಾರಿತನದ ಪರಮಾವಧಿ ಯಾವುದು?
* ಕುಮಾರನ ಬಾಯಿಂದ ಉದುರುವ ಆಣಿಮುತ್ತುಗಳು.

ಸಬಿಯಾ ಬೇಗಂ, ದೇವದುರ್ಗ
ಹೆಣ್ಣು ಸಂಸಾರದ ಕಣ್ಣು ಗಂಡು?
* ನೆಟ್ಟಗಿಲ್ಲದಿದ್ದರೆ ಹುಣ್ಣು ಎನ್ನುವವರಿದ್ದಾರೆ.

ಎಂ.ಎಸ್. ವಿನಯ್, ಕುಮಟಾ
ಚಾಮುಂಡೇಶ್ವರಿಗೆ ಯಾರು ಬಲಿ?
* ಕೋಣಗಳಂತೆ ಇರುವವರದ್ದು ಅಂದ್ರೆ ಗೊತ್ತಾಗುತ್ತೆ ತಾನೆ.

ಎಂ. ನಿಸರ್ಗ, ದಾವಣಗೆರೆ
ದೇವೇಗೌಡರು ಪದೇ ಪದೇ ಅಳುವಾಗ ಗ್ಲಿಸರೀನ್ ಬಳಸುವರೆ?
* ಕೃತಕ ಕಣ್ಣೀರಿನ 'ಕುಮಾರ' ಎಂಬ ಗ್ಲಿಸರೀನ್ ಇದ್ದೇ ಇದ್ದಾನಲ್ಲ.


ಬಸವರಾಜ ಹೂಗಾರ್, ಸವದತ್ತಿ
ಹೆಣ್ಣಿಗಾಗಿ ರಾಮಾಯಣ, ಮಣ್ಣಿಗಾಗಿ ಮಹಾಭಾರತ, ರಾಜಕಾರಣಕ್ಕಾಗಿ?
* ಕುಮಾರಾಯಣ!

ಬಹುಮಾನಿತ ಪ್ರಶ್ನೆ

ಥೀ ತುಂಟಿ!

ಕಲ್ಪನಾ ಶರ್ಮಾ ಮತ್ತು ಸುನೀತಾ ವಿಲಿಯಮ್ಸ್ ಬಾಹ್ಯಾಕಾಶಕ್ಕೆ ಹೋಗಬೇಕಿದ್ದರೆ ಅವರಿಗಿಂತ ಮಂಡ್ಯದ ಗಂಡುಗಳಾದ ತಾವೇನು ಕಮ್ಮಿ ಎಂದು ಇಬ್ಬರು ಮಂಡ್ಯದ ಪುತ್ರರು ನಾಸಾಗೆ ಅರ್ಜಿ ಸಲ್ಲಿಸಿದರು.

ಅವರ ಅರ್ಜಿಗಳು ಸ್ವೀಕೃತವಾಗಿ ಅವರನ್ನು ಅಮೆರಿಕಾದ ಕ್ಯಾಲಿಫೋರ್ನಿಯಾಗೆ ತರಬೇತಿಗೆ ಕರೆಸಲಾಯಿತು. ಒಂದಿಷ್ಟೂ ಗುಂಡು ಸೇವಿಸದೇ ಅವರಿಬ್ಬರೂ ಹಲವು ದಿನಗಳ ಕಾಲ ತರಬೇತಿ ಪಡೆದರು. ಆದರೆ ಒಂದು ದಿನ ಅವರಿಗೆ ಕುಡಿಯಬೇಕೆಂಬ ಆಸೆ ಆಯಿತು. ಆದರೆ ಅಲ್ಲೆಲ್ಲೂ ಗುಂಡು ಸಿಗದಿದ್ದ ಕಾರಣ, ರಾಕೆಟ್‌ಗೆ ಬಳಸುವ ತೈಲವನ್ನೇ ಕುಡಿದರು.



ಮರುದಿನ ಬೆಳಿಗ್ಗೆ ಅವರಿಬ್ಬರ ನಡುವೆ ನಡೆದ ಸಂಭಾಷಣೆ ಹೀಗಿತ್ತು:

"ಲೋ ನೀನು ಬೆಳಿಗ್ಗೆ ಒಂದಕ್ಕೆ ಹೋದ್ಯಾ?"

"ಇನ್ನೂ ಇಲ್ಲಾ ಕಣೋ, ಯಾಕೆ?"

"ಹೋಗಬ್ಯಾಡೋ ಮಗನೇ, ನಾನೀಗ ಟೋಕಿಯೋದಿಂದ ಮಾತಾಡ್ತಾ ಇದ್ದೀನಿ ಗೊತ್ತಾ?"

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ದೇವೇಗೌಡರ ಮಗನ ಹೆಸರು ಭಕ್ತ ಮಾರ್ಕಂಡೇಯನೋ? ಭಕ್ತ ಪ್ರಹ್ಲಾದನೋ?

ನವೆಂಬರ್ 29ರ ಸಂಚಿಕೆಯ ನಮ್ಮ ಪ್ರಶ್ನೆ: ನಾಸ್ತಿಕನಿಗೂ-ಆಸ್ತಿಕನಿಗೂ ಸಮಾನವಾದುದೇನು?
ನಿಮ್ಮ ಉತ್ತರ: ಅರಿಷಡ್ವರ್ಗದ ಆತಂಕ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಕೆ. ಶರತ್, ಹಾಸನ

ರ್ಥ ಎಂಬುದು ವ್ಯಕ್ತಿಯ ಇಚ್ಛೆಯಂತೆ ಬದುಕಿ

ಸೈತಾನ್ ಅಲ್ಯೆಮಣಿ




ಬೆಂಗಳೂರಿನ ಕತ್ತಲ ರಾಜ್ಯದಲ್ಲಿ ಅದೆಷ್ಟು ತಲೆಗಳು ಬಿದ್ದವೋ? ಆದರೆ ಅಲ್ಯೆಮಣಿಯಂಥ ಸೈತಾನನನ್ನು ಮಾತ್ರ ಈತನಕ ಯಾರೂ ನೋಡಿರಲಿಕ್ಕಿಲ್ಲ. ಅವನು ರಕ್ಕಸ, ರೇಪಿಸ್ಟ್, ಹಂತಕ, ಡಕಾಯಿತ- ಎಲ್ಲವೂ ಒಂದೇ ಆಕೃತಿಯಲ್ಲಿ ಮೂಡಿಬಂದಂತಿದ್ದ. ಆತ ಬದುಕಿದ್ದಷ್ಟೂ ದಿನ ಈಗಿರುವ ಕದಿರೇಶ್, ಕುಮರೇಶ್, ಚಾಮರಾಜು, ಚಕ್ರಿ, ಸಾರಾಯಿರಾಣಿ ಮಾಲಾ, ತಮಿಳ್‌ಕುಡಿ, ಗುಪ್ಪು, ಗಣೇಶ, ದಕ್ಷಿಣ ಇತ್ಯಾದಿ ರೌಡಿಗಳ್ಯಾರೂ ಆಂಜನಪ್ಪ ಗಾರ್ಡನ್ನಿನಲ್ಲಿ ತಲೆ ಎತ್ತಲಿಲ್ಲ. ದೊರೈ, ರಮೇಶ, ಸುರೇಶ, ಶಂಕ್ರ, ಆರೋಗ್ಯರಾಜ್, ಡೇನಿಯಲ್, ಆಟೋಬಾಬು ಮುಂತಾದ ತಮಿಳು ಕಿರಾತಕರ ಗ್ಯಾಂಗ್ ಕಟ್ಟಿಕೊಂಡು ಆತ ಎಸಗಿದ ಕುಕೃತ್ಯಗಳು ಬೆಂಗಳೂರು ನಗರವನ್ನೇ ಬೆಚ್ಚಿಬೀಳಿಸಿದ್ದವು.

ಅಲ್ಯೆಮಣಿ!

ಅದು ಆಂಜನಪ್ಪ ಗಾರ್ಡನ್ ಕೊಂಪೆಯಿಂದ ಹುಟ್ಟಿ ಬಂದ ಹೀನ ಜಂತುವಿನ ಹೆಸರು. 1998ರ ಡಿಸೆಂಬರ್ 28ರ ನಡುರಾತ್ರಿ ಆತನನ್ನು ನ್ಯಾಯಾಧೀಶರ ಎದುರು ನಿಲ್ಲಿಸಿ ಇನ್ನಷ್ಟು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಕೋರಿಕೆ ಸಲ್ಲಿಸಿದ್ದ ಮಡಿವಾಳದ ಇನ್ಸ್‌ಪೆಕ್ಟರ್ ಕೃಷ್ಣಪ್ಪ ವಾಪಸ್ಸು ಬರುವಾಗ ಸರ್ಜಾಪುರ ರಿಂಗ್‌ರೋಡ್‌ನ ಜಂಕ್ಷನ್ನಿನಲ್ಲಿ ಇದ್ದಕ್ಕಿದ್ದಂತೆ ಜೀಪು ನಿಲ್ಲಿಸಿ ಅಲ್ಯೆಮಣಿಯನ್ನು ಕೆಳಕ್ಕಿಳಿಸಿದ್ದೇ ಆತನ ದೇಹಕ್ಕೆ ಸರಿಯಾಗಿ ನಾಲ್ಕು ಗುಂಡುಗಳನ್ನು 'ಪಂಚ್' ಮಾಡಿದ್ದರು.

ಮರುದಿನದ ಪತ್ರಿಕೆಗಳಲ್ಲಿ ರೇಪಿಸ್ಟ್ ಅಲ್ಯೆಮಣಿ ಗುಂಡಿಗೆ ಬಲಿ! ವಿಕೃತಕಾಮಿ ಅಲ್ಯೆಮಣಿ ಪೊಲೀಸರ ಗುಂಡಿಗೆ ಬಲಿ!! ಮುಂತಾದ ಹೆಡ್ಡಿಂಗುಗಳಿದ್ದವು. ಈ ಒಂದೇ ಕಾರಣಕ್ಕೆ ಬೆಂಗಳೂರಿನ ಅನೇಕ ಮಹಿಳಾ ಸಂಘಟನೆಗಳು ಇನ್ಸ್‌ಪೆಕ್ಟರ್ ಕೃಷ್ಣಪ್ಪನವರನ್ನು ಅಭಿನಂದಿಸಿ ಪತ್ರಿಕಾ ಹೇಳಿಕೆ ಕೊಟ್ಟವು. ಅಣ್ಣಮ್ಮ, ರಾಜ್ಯೋತ್ಸವಗಳ ವೇದಿಕೆಗೆ ಕರೆದು ಅವರನ್ನು ಸನ್ಮಾನಿಸಲಾಯ್ತು.

ಬೆಂಗಳೂರಿನ ಕತ್ತಲ ರಾಜ್ಯದಲ್ಲಿ ಅದೆಷ್ಟು ತಲೆಗಳು ಬಿದ್ದವೋ? ಆದರೆ ಅಲ್ಯೆಮಣಿಯಂಥ ಸೈತಾನನನ್ನು ಮಾತ್ರ ಈತನಕ ಯಾರೂ ನೋಡಿರಲಿಕ್ಕಿಲ್ಲ. ಅವನು ರಕ್ಕಸ, ರೇಪಿಸ್ಟ್, ಹಂತಕ, ಡಕಾಯಿತ- ಎಲ್ಲವೂ ಒಂದೇ ಆಕೃತಿಯಲ್ಲಿ ಮೂಡಿಬಂದಂತಿದ್ದ. ಆತ ಬದುಕಿದ್ದಷ್ಟೂ ದಿನ ಈಗಿರುವ ಕದಿರೇಶ್, ಕುಮರೇಶ್, ಚಾಮರಾಜು, ಚಕ್ರಿ, ಸಾರಾಯಿರಾಣಿ ಮಾಲಾ, ತಮಿಳ್‌ಕುಡಿ, ಗುಪ್ಪು, ಗಣೇಶ, ದಕ್ಷಿಣ ಇತ್ಯಾದಿ ರೌಡಿಗಳ್ಯಾರೂ ಆಂಜನಪ್ಪ ಗಾರ್ಡನ್ನಿನಲ್ಲಿ ತಲೆ ಎತ್ತಲಿಲ್ಲ. ದೊರೈ, ರಮೇಶ, ಸುರೇಶ, ಶಂಕ್ರ, ಆರೋಗ್ಯರಾಜ್, ಡೇನಿಯಲ್, ಆಟೋಬಾಬು ಮುಂತಾದ ತಮಿಳು ಕಿರಾತಕರ ಗ್ಯಾಂಗ್ ಕಟ್ಟಿಕೊಂಡು ಆತ ಎಸಗಿದ ಕುಕೃತ್ಯಗಳು ಬೆಂಗಳೂರು ನಗರವನ್ನೇ ಬೆಚ್ಚಿಬೀಳಿಸಿದ್ದವು.



ಕೃಷ್ಣಪ್ಪ

ತನ್ನ ಮೂವತ್ತನೇ ವರ್ಷಕ್ಕೆ ಹದಿನೈದು ಮಂದಿ ನಿಷ್ಪಾಪಿ ಹೆಂಗಸರ ಮೇಲೆ ಅಲ್ಯೆಮಣಿ ದಾರುಣವಾಗಿ ಅತ್ಯಾಚಾರವೆಸಗಿದ್ದ. ಕುಡಿದು ರೇಜರ್ ಹಿಡಿದು ಬೀದಿಗಿಳಿದವನು ಸಂಜೆಯ ಹೊತ್ತಿಗೆ ತನ್ನ ಏಳು ಮಂದಿ ದುಷ್ಮನ್‌ಗಳ ಮುಖ ಕುಯ್ದು ಹಾಕಿದ್ದ. ಎಸ್.ಟಿ. ಪೇಟೆಯ ಪೊಲೀಸ್ ಪೇದೆ ಕೃಷ್ಣಸಿಂಗ್ ಎಂಬಾತನ ಬಲಗೈಯನ್ನೇ ಕತ್ತರಿಸಿ ಹಾಕಿದ್ದ. ಆಗಿನ್ನೂ ಬಲಾಢ್ಯ ರೌಡಿಗಳೆನಿಸಿದ್ದ ಚಕ್ರಿ ಮತ್ತು ಅಗ್ರಹಾರದ ಬಚ್ಚನ್ ವಿರುದ್ಧ ಯುದ್ಧಕ್ಕೆ ನಿಂತಿದ್ದ. ತಾನು ಜೇಡರಹಳ್ಳಿ ಕೃಷ್ಣಪ್ಪನ ಫ್ರೆಂಡು ಎಂಬ ಒಂದೇ ಕಾರಣಕ್ಕೆ ಜೈಲಿನಲ್ಲೇ ಶ್ರೀರಾಂಪುರ ಕಿಟ್ಟಿಯನ್ನು ಕತ್ತರಿಸಿದ್ದ. ಒಂದಲ್ಲ ನಾಲ್ಕು ಬಾರಿ ಜೈಲಿಂದ ಪರಾರಿಯಾದ. ತಲೆ ಮರೆಸಿಕೊಂಡಿದ್ದೇ ಶ್ರೀಮಂತ ವ್ಯಾಪಾರಿಗಳನ್ನು ಅಪಹರಿಸಿ ಲಕ್ಷಗಟ್ಟಲೇ ಕಿತ್ತ, ದೋಚಿದ ದುಡ್ಡಲ್ಲೇ ಬಾಂಬು ರಿವಾಲ್ವರ್‌ಗಳನ್ನು ತರಿಸಿಕೊಂಡ. ಕೋರ್ಟಿಗೆ ಬಂದನೆಂದರೆ ವಕೀಲರ ನೆರವಿಲ್ಲದೇ ತನ್ನ ಕೇಸಿಗೆ ತಾನೇ ವಾದಿಸಿ ಶಿಕ್ಷೆ ಕಮ್ಮಿ ಮಾಡಿಕೊಳ್ಳುತ್ತಿದ್ದ. ಆಗ ಇನ್ಸ್‌ಪೆಕ್ಟರ್ ಆಗಿದ್ದ ಜೆಡಿಎಸ್ ಎಮ್ಮೆಲ್ಸಿ ಅಜೀಮ್‌ರನ್ನೇ ಕೊಲ್ಲುವ ಶಪಥಗೈದಿದ್ದ. ಇಂಥಾ ಹೀನ ಪಾತಕಿ ಅಲ್ಯೆಮಣಿ ಬದುಕಿದ್ದರೆ ಯಾವತ್ತಿಗೂ ಸಮಾಜಕ್ಕೊಂದು ಪೀಡೆಯೇ ಆಗುತ್ತಿದ್ದ. ಆಂಜನಪ್ಪ ಗಾರ್ಡನ್ ಸ್ಲಮ್ಮಿನಿಂದ ಹುಟ್ಟಿಬಂದ ದುಷ್ಟ ಜಂತುಗಳ ಪೈಕಿ ಅತ್ಯಂತ ಅಪಾಯಕಾರಿಯೇ ಈ ಅಲ್ಯೆಮಣಿ!


ಮೇಲುನೋಟಕ್ಕೆ ಯಾರೋ ಫುಟ್‌ಪಾತ್ ತರಕಾರಿ ಮಾರುವವನಂತೆಯೋ ಅಥವಾ ಮನೆಗೆಲಸದವನಂತೆಯೋ ಕಾಣುತ್ತಿದ್ದ ಅಲ್ಯೆಮಣಿ ಹುಟ್ಟಿ ಬೆಳೆದದ್ದೆಲ್ಲ ಇದೇ ಆಂಜನಪ್ಪ ಗಾರ್ಡನ್ನಿನಲ್ಲಿ. ತಂದೆ ಕ್ರಿಶ್ಚಿಯನ್, ತಾಯಿ ತಮಿಳು. ಬಿನ್ನಿಮಿಲ್ ಸುತ್ತಮುತ್ತ ಚಿಂದಿ ಆಯುತ್ತಿದ್ದ ಈತನ ತಾಯಿಗೆ ಸಾರಾಯಿ ಕುಡುಕ ಜಾರ್ಜ್ ಎಂಬ ಕೂಲಿಯೊಬ್ಬ ಗಂಟುಬಿದ್ದ. ಆ ಕಾಲಕ್ಕೆ ಖಾಲಿ ಬಿದ್ದಿದ್ದ ಆಂಜನಪ್ಪ ಗಾರ್ಡನ್‌ನಲ್ಲಿ ಜೋಪಡಿಯೊಂದನ್ನು ಎಬ್ಬಿಸಿ ಅಲ್ಲಿ ಆಕೆಯನ್ನು ತಂದಿಟ್ಟಿದ್ದ. ಅಲ್ಯೆಮಣಿ ಹುಟ್ಟುತ್ತಲೇ ಕುಡಿಕುಡಿದು ಎಕ್ಕುಟ್ಟಿದ್ದ ಅಪ್ಪ ಜಾರ್ಜ್ ತೀರಿಕೊಂಡ. ರಟ್ಟೆ ಬಲಿಯುವಷ್ಟು ದಿನ ತಾಯಿಯ ಜೊತೆಗೇ ಚಿಂದಿ ಆಯ್ದುಕೊಂಡಿದ್ದ ಅಲ್ಯೆಮಣಿಗೆ ರಾಬರಿಯ ರುಚಿ ತೋರಿಸಿದವನು ಇದೇ ಸ್ಲಮ್ಮಿನ ಮತ್ತೊಬ್ಬ ಕ್ರಿಮಿ ಪಣ್ಣುಖ ಉರ್ಫ್ ಅಲಿಪಯ್ಯ.

ಈ ಅಲಿಪಯ್ಯ ಉರ್ಫ್ ಪಣ್ಣುಖ ಕೂಡ ಪ್ರಾರಂಭದಲ್ಲಿ ಸಾರಾಯಿ ರಾಣಿ ಇಂದ್ರಾಣಿಯ ಸೇವೆ ಮಾಡಿದ್ದವನೆ. ಛಪ್ಪರ್ ಹುಡುಗರನ್ನು ಬಿಟ್ಟು ರೈಲ್ವೇ ಹಳಿಗಳ ಕಬ್ಬಿಣ ಕದ್ದು ಮಾರುವುದು, ಮಾರ್ಕೆಟ್, ಕಲಾಸಿಪಾಳ್ಯ, ಕಾಟನ್‌ಪೇಟೆ, ಬಿನ್ನಿಪೇಟೆ ಏರಿಯಾಗಳಲ್ಲಿ ಮನೆಗಳ್ಳತನ ಮಾಡಿಸುವುದು; ಕದ್ದ ಮಾಲನ್ನೆಲ್ಲ ಜಾಲಿಮೊಹಲ್ಲಾದ ಮುಸ್ಲಿಂ ಸಾಸ್ ದಂಧೆಕೋರರಿಗೆ ಮಾರುವುದು ಅಲಿಪಯ್ಯನ ವೃತ್ತಿಯಾಗಿತ್ತು. 1987ರ ಹೊತ್ತಿಗೇ ಆತನ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ರೌಡಿ ಷೀಟಿತ್ತು.

ಪುಡಿ ಕಾಸಿಗೆ ಸಿಗುವ ಕಳ್ಳಭಟ್ಟಿ, ಚಿಲ್ಲರೆ ದುಡ್ಡಿಗೂ ದೊರಕುವ ಚಿಟಕೆ ಗಾಂಜಾ, ಗಲ್ಲಿಗಲ್ಲಿಯಲ್ಲೂ ಇಟ್ಯಾಡುವ ಛಪ್ಪರ್ ಹುಡುಗರ ಹಿಂಡು ಮತ್ತು ಕಾಸಿಗೆ ತಕ್ಕಂತೆ ತಾಳಹಾಕುವ ಪೊಲೀಸರು. ಅಲ್ಯೆಮಣಿಗೆ ಇಷ್ಟೇ ಸಾಕಾಯಿತು. 1991ರ ಮಾರ್ಚ್‌ನಲ್ಲಿ ಬಿನ್ನಿಮಿಲ್ ಸಂಧಿಯಲ್ಲಿ ಹೊಂಚು ಹಾಕಿ ದಾರಿಹೋಕರ ರಾಬರಿ ನಡೆಸುವಾಗಲೇ ಕ್ರೈಂ ಪೇದೆ ರನ್ನಿಂಗ್ ಗೋಪಾಲ್ ಕೈಗೆ ಸಿಕ್ಕಿಬಿದ್ದ. ಜೈಲಿಗೂ ಹೋದ. ಆದರೆ ಬಿಡುಗಡೆಯಾಗಿ ಬರುವ ಹೊತ್ತಿಗೆ ಘಾತಕದಲ್ಲಿ ಮತ್ತಷ್ಟು ಪಳಗಿದ್ದ. ಸುಲಿಗೆಗೆ ಯಾವುದೇ ಮಿಕ ಸಿಗದೇ ಹೋದರೆ ಬೀದಿಬದಿಯ ಜಾಹೀರಾತು ಫಲಕಗಳ ತಗಡನ್ನೇ ಕುಯ್ದು ಮಾರುತ್ತಿದ್ದ. ಆ ಹೊತ್ತಿಗೆ ಕಲಾಸಿಪಾಳ್ಯ ಬಸ್‌ಸ್ಟ್ಯಾಂಡ್‌ನಲ್ಲಿ ಪಿಕ್‌ಪಾಕೆಟ್ ಹುಡುಗರ ಪಡೆಯೇ ಇತ್ತು. ಅಲಿಪಯ್ಯನಿಂದ ಬೇರ್ಪಟ್ಟು ತನ್ನದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡಿದ್ದ ಅಲ್ಯೆಮಣಿಗೆ ಮಜೂರ್‌ಬಾಬು ರೌಡಿಗಳಿಗೆ ಕಾಸು ಬಿಚ್ಚಾನೆ ಎಂದು ಯಾರೋ ಸುದ್ದಿ ಕೊಟ್ಟರು. ಹೋಗಿದ್ದೇ ಬಾಬುವನ್ನು ಎತ್ತಾಕಿಕೊಂಡಿದ್ದೇ ಗಾರ್ಡನ್ನಿಗೆ ತಂದು ರೇಜರ್‌ನಲ್ಲಿ ಕಾಲು-ಕೈ ಕುಯ್ದುಬಿಟ್ಟ. ತಿಂಗಳಿಗೆ ಇಂತಿಷ್ಟು ಮಾಮೂಲಿ ಕೊಡ್ತೀನಿ ಎಂದು ಮಜೂರ್‌ಬಾಬು ಒಪ್ಪಿಕೊಂಡ ನಂತರವೇ ಆತನನ್ನು ಬಿಟ್ಟು ಕಳಿಸಿದ್ದ.

ರಿವೇಂಜ್ ಕಿಲ್ಲಿಂಗ್ಸ್ 7

ರಾ. ಸೋಮನಾಥ್



ಗಾರ್ಡನ್ ಮಣಿ

ಪೊಲೀಸರಿಗೂ ಮಾಮೂಲಿ ಗೊತ್ತು ಮಾಡಿದ್ದ ಮಜೂರ್‌ಬಾಬು ಅಲ್ಯೆಮಣಿ ವಿರುದ್ಧ ಪೊಲೀಸರಿಗೆ ಕಟಾಯಿಸಿಬಿಟ್ಟ. ತನ್ನನ್ನು ಪೊಲೀಸರು ಹುಡುಕುತ್ತಿದ್ದಾರೆ ಎಂದು ಗೊತ್ತಾದದ್ದೇ ಮತ್ತೆ ಎಸ್ಕೇಪಾಗಿ ಎಲ್ಲೆಂದರಲ್ಲಿ ರಾಬರಿ ಮಾಡಿಕೊಂಡಿದ್ದ. ಮತ್ತೆ ಪೊಲೀಸರಿಗೆ ಸಿಕ್ಕು ಜೈಲು ಪಾಲಾದ. ಹೊರಬಿದ್ದವನು ಬೆಂಗಳೂರೇ ಬೇಡವೆಂದು ತಮಿಳುನಾಡಿಗೆ ಹೋದ. ಅಲ್ಲಿ ಚೆಂಗಮ್ ಎಂಬಲ್ಲಿ ಸಾರಾಯಿ ಅಂಗಡಿಯಲ್ಲಿ ಲೋಟ ತೊಳಕೊಂಡಿದ್ದ. ಅಲ್ಲಿಯೇ ಮುತ್ತುಮಾರಿ ಎಂಬ ದಲಿತರ ಹುಡುಗಿಯನ್ನು ಮದುವೆಯಾದ. ಸಾಮಾನ್ಯವಾಗಿ ಮದುವೆಯಾದ ರೌಡಿಗಳ್ಯಾರೂ ಕಂಡಕಂಡ ಹೆಂಗಸರನ್ನು ಅತ್ಯಾಚಾರಕ್ಕೀಡು ಮಾಡಿದ್ದಿಲ್ಲ. ಆದರೆ ಅಲ್ಯೆಮಣಿ ಮದುವೆಯಾದ ಮೇಲೂ ಸುಧಾರಿಸಲಿಲ್ಲ. ಬೆಂಗಳೂರಿನ ರುಚಿ ಕಂಡಿದ್ದ ಆತ ಮತ್ತೆ ಆಂಜನಪ್ಪ ಗಾರ್ಡನ್ನಿಗೆ ಬಂದವನೇ ಭಾರತಿ ಮೋಹನ್ ಎಂಬ ಭೋಟಾ ಘಾತಕಿಯೊಬ್ಬನ ಜೊತೆ ಸೇರಿಕೊಂಡು ಗಾರ್ಡನ್ ಮಣಿಯ ಶಿಷ್ಯರನ್ನು ಸಿಕ್ಕಸಿಕ್ಕಲ್ಲಿ ಕತ್ತರಿಸತೊಡಗಿದ. ಒಂದೇ ದಿನದಲ್ಲಿ ರೇಜರ್ ಹಿಡಿದು ರೌಂಡಿಂಗ್ ಶುರು ಹಚ್ಚಿಕೊಂಡವನು ಗಾರ್ಡನ್ ಮಣಿ ಕಡೆಯ ಏಳು ಮಂದಿ ಹುಡುಗರ ಮುಖ ಕುಯ್ದು ಹಾಕಿದ್ದ. ಅಲ್ಯೆಮಣಿಯ ಎರಡನೇ ಇನ್ನಿಂಗ್ಸ್ ನೋಡಿದ ಕಾಟನ್‌ಪೇಟೆ ಪೊಲೀಸರು ನಡುಗಿಹೋದರು. ಅಷ್ಟೊತ್ತಿಗಾಗಲೇ ಆತನ ಅಸಲೀ ಗುರು ಅಲೀಪಯ್ಯ ಮನೆಗಳ್ಳತನಕ್ಕಿಳಿದವನು ಜನರ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಪರಾರಿಯಾಗಲೆಂದು ಒಂದು ಮಹಡಿಯಿಂದ ಮತ್ತೊಂದು ಮಹಡಿಗೆ ಹಾರಲು ಹೋಗಿ ಆಯತಪ್ಪಿ ಬಿದ್ದು ಸತ್ತೇ ಹೋಗಿದ್ದ.



ಅಬ್ದುಲ್ ಅಜೀಂ

ಪೊಲೀಸರು ಮತ್ತೆ ತನ್ನ ಬೆನ್ನಿಗೆ ಬಿದ್ದಿದ್ದಾರೆಂಬುದು ಅಲ್ಯೆಮಣಿಗೆ ಗೊತ್ತಾದದ್ದೇ ತಡ, ಮತ್ತೆ ತಮಿಳುನಾಡಿನ ಚೆಂಗಮ್‌ಗೆ ಪರಾರಿಯಾದ. ಈಗಾಗಲೇ ಮುತ್ತುಮಾರಿ ಎಂಬಾಕೆಯನ್ನು ಆತ ಮದುವೆಯಾಗಿದ್ದರೂ ಅಲ್ಲಿ ಕುಮಾರಿ ಎಂಬ ಬ್ರಾಹ್ಮಣರ ಹುಡುಗಿಯನ್ನು ಪಟಾಯಿಸಿ ಆಕೆಗೂ ಮಗುವನ್ನು ದಯಪಾಲಿಸಿದ. ಒಂದಷ್ಟು ದಿನ ಕಳೆದು ಮತ್ತೆ ಬೆಂಗಳೂರಿಗೆ ಬಂದವನು ಈ ಬಾರಿ ಅಗ್ರಹಾರದ ಬಚ್ಚನ್ ಮತ್ತು ಶ್ರೀರಾಂಪುರದ ಚಕ್ರಿಯಂಥ ಸೈಂಧವ ರೌಡಿಗಳ ವಿರುದ್ಧವೇ ಬಡಿದಾಟಕ್ಕೆ ನಿಂತ. ಅದೂ ಕೂಡ ಜೇಡರಹಳ್ಳಿ ಕೃಷ್ಣಪ್ಪನ ಮೇಲಿನ ನಿಯತ್ತಿಗೆ ಆತನ ಓಲೈಕೆಗೆಂದು ಅಲ್ಯೆಮಣಿ ಎಸಗಿದ ಕೃತ್ಯಗಳಾಗಿದ್ದವು. ಬಚ್ಚನ್ ಮುಗಿಸಲೆಂದೇ ಸರಿಸುಮಾರು ಮೂವತ್ತು ಮಂದಿ ಹುಡುಗರ ಸಮೇತ ಆತನ ಮನೆಗೇ ನುಗ್ಗಿ ಬಚ್ಚನ್ ಸಿಗಲಿಲ್ಲ ಎಂದು ಆತನ ತಾಯಿಯ ಕೈ ಕುಯ್ದು ಹಾಕಿದ್ದ.

ಆಗ ಅಲ್ಯೆಮಣಿಯ ಬೆನ್ನಿಗೆ ಬಿದ್ದ ಪೊಲೀಸರ ಪೈಕಿ ತೀರ ಕಾಟ ಕೊಡುತ್ತಿದ್ದದ್ದು ಎಸ್.ಟಿ. ಪೇಟೆಯ ಕ್ರೈಂ ಪೇದೆ ಕೃಷ್ಣಸಿಂಗ್. ಅವರನ್ನು ಸೂಪರ್‌ಟಾಕೀಸ್ ಸಂಧಿಯಲ್ಲೇ ಅಡ್ಡಗಟ್ಟಿದ ಅಲ್ಯೆಮಣಿ ... ಬಲಗೈಯನ್ನೇ ಕತ್ತರಿಸಿ ಹಾಕಿದ್ದ. ಆಗಿನ್ನೂ ಜೈ... ಪಾಳಯದಲ್ಲಿದ್ದ ಜೇಡರಹಳ್ಳಿಗೂ ಆತನ ದು... ಶ್ರೀರಾಂಪುರ ಕಿಟ್ಟಿಗೂ ಭಯಂಕರ ಜಿದ್ದಾಜಿದ್ದಿ... ಅದೇನೋ ಅಲ್ಯೆಮಣಿಗೆ ಜೇಕೆ ಮೇಲೆಯೇ ನಿ... ಅದಕ್ಕೆಂದು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಕಿಟ್ಟಿ... ಹಿಡಿದು ಕುಯ್ದುಬಿಟ್ಟ. ಆತನ ಕಾಟಕ್ಕೆ ರೋಸತ್ತ ... ಸಿಬ್ಬಂದಿ ಆತನನ್ನು ಮೈಸೂರು ಜೈಲಿಗೆ ಸಾಗ ಹಾ... ಅಲ್ಲಿ ಕೆಂಪಾಪುರ ಅಗ್ರಹಾರದ ರೌಡಿ ಜ... ಎಂಬಾತನ ಜೊತೆ ಸೇರಿ ಹೊಟ್ಟೆ ಸೋಮಣ್ಣ ... ಸಜಾ ಖೈದಿಯನ್ನು ಕುಯ್ದು ಹಾಕಿದ್ದ. ಇದಕ್ಕೆ... ಅಂತ ಬೆಳಗಾವಿ ಜೈಲಿಗೆ ಕಮಾನೆತ್ತಿದರೆ, ಅ... ಕೋರ್ಟಿಗೆಂದು ಬೆಂಗಳೂರಿಗೆ ಬಂದವನು ವಾ... ಹೋಗುವಾಗ ಪೊಲೀಸರನ್ನು ಸೂಪರ್ ಟಾ... ಬಳಿಯ ಬಾರಿಗೆ ಕರೆತಂದು ಚಿತ್ತಾಗುವಂತೆ ... ಪರಾರಿಯಾಗಿಬಿಟ್ಟ.

ಹಾಗೇ ಪರಾರಿಯಾದವನು ನಕಲಿ ಕೈಗಡಿ... ಗಳನ್ನು ಸ್ಮಗಲ್ ಮಾಡುತ್ತಿದ್ದ ಚಿಕ್ಕಪೇಟೆಯ ಕಾಂತಿ... ಎಂಬ ಮಾರ್ವಾಡಿಯನ್ನು ಅಪಹರಿಸಿ ಐದು... ಕಿತ್ತ. ಅದಕ್ಕೆ ಒಂದು ರಿವಾಲ್ವರ್ ಮತ್ತು ಕೆಲ ಕೈಬ... ಗಳನ್ನು ರೆಡಿ ಮಾಡಿಕೊಂಡ. ಆತನ ಜಿದ್ದಿಗೆ... ದೊಡ್ಡ ದೊಡ್ಡ ರೌಡಿಗಳ ವಿರುದ್ಧ ಆತನ ಕಾಳಗ... ದೊಡ್ಡ ಕಾರಣಗಳೇ ಇರುತ್ತಿರಲಿಲ್ಲ. ಆತನಿಗೆ ... ಮಾಡಬೇಕಷ್ಟೇ. ಹಾಗೆ ಕಂಡಕಂಡ ಹೆಂಗಸರ ನುಗ್ಗಿ ಆತ ರೇಪ್ ಮಾಡುತ್ತಿದ್ದದ್ದು ಕೂಡ ನಿರ್ಗತಿಕರು ಮತ್ತು ಅಸಹಾಯಕರೆಂಬ ಕಾರಣಕ್ಕಾಗಿರುತ್ತಿತ್ತು.

ಹಾಗೇ ಎಸ್ಕೇಪಾಗಿದ್ದ... ರಿವಾಲ್ವರ್-ಬಾಂಬುಗಳನ್ನು ತೋರಿಸಿಕೊಂಡು ಹಾವಳಿಯಿಡುತ್ತಿದ್ದ ಅಲ್ಯೆ... ಆಂಜನಪ್ಪ ಗಾರ್ಡನ್ನಿನ ಪ... ಮೊಹಲ್ಲಾದೊಳಕ್ಕೆ ನುಗ್ಗಿ ... ಬೆಂಗಳೂರಿನ ಇತಿಹಾಸದ... ಯಾವೊಬ್ಬ ರೌಡಿಯೂ ... ಮಾಡಲಾರದಂಥ ಭಯಾ... ಘಾತಕ ಮಾಡಿಬಿಟ್ಟ. ಅದ... ಏರಿಯಾದಲ್ಲಿ ಗಾಂಜಾ ... ಮಾರಿಕೊಂಡಿದ್ದ ಮುಬಾ... ಎಂಬಾತನ ಮನೆಗೆ ನುಗ್ಗಿ... ಆತನ ಇಬ್ಬರು ನಿಷ್ಪಾಪಿ ತಂಗಿಯರನ್ನು ದರದರನೇ ಹೊರಕ್ಕೆ ಎಳೆತಂದ. ನೂರಾರು ಜನ ... ಅಸಹಾಯಕರಾಗಿ ನೋಡುತ್ತಿರುವಂತೆಯೇ ಮುಬ... ಇಬ್ಬರು ತಂಗಿಯರ ಪೈಕಿ ಕಿರಿಯವಳನ್ನು ತನ್ನ ಜ... ದೊರೈ ಎಂಬಾತನ ಕೈಗೊಪ್ಪಿಸಿ, ಹಿರಿಯವಳನ್ನು ... ಜನರೆಲ್ಲರ ಎದುರಿಗೇ ಮಾನಭಂಗ ಮಾಡಿಬಿ...

ಈ ಒಂದೇ ಘಟನೆ ಬೆಂಗಳೂರಿನ ಪೊಲೀ... ಯಾಪಾಟ ಅಪಮಾನಕ್ಕೀಡುಮಾಡಿತೆಂದರೆ, ... ಇನ್ಸ್‌ಪೆಕ್ಟರ್ ಅಬ್ದುಲ್ ಅಜೀಮ್ ಮತ್ತು ... ರೆಡ್ಡಿ ಆತನನ್ನು ತಮಿಳುನಾಡಿನಿಂದ ಹಿಡಿತಂದು ... ಕೆಡವುವವರೇಗೆ ಕಾಟನ್‌ಪೇಟೆ ಪೊಲೀಸರು ... ಓಡಾಡಲಿಲ್ಲ. ಆಗ ಕಾಟನ್‌ಪೇಟೆಗೆ ಇನ್ಸ್‌ಪೆಕ್ಟ... ಬಂದಿದ್ದ ಅಬ್ದುಲ್ ಅಜೀಮ್ ಈ ಪ್ರಕರ... ಅತ್ಯಂತ ಶಿಸ್ತಿನಿಂದ ಅಭ್ಯಸಿಸಿ, ಅದರ ಪ್ರತಿ... ಸಾಕ್ಷಿಯನ್ನೂ ಶ್ರದ್ಧೆಯಿಂದ ಕೋರ್ಟಿಗೆ ತಂದ...

ಅಲ್ಯೆಮಣಿಯಿಂದ ನಡುರಸ್ತೆಯಲ್ಲಿ ಮಾ... ಕ್ಕೀಡಾದ ಮುಬಾರಕ್‌ನ ಇಬ್ಬರು ತಂಗಿಯರನ್ನು ಅಜೀಮ್ ವರ್ಷಾನುಗಟ್ಟಲೇ ತಮ್ಮ... ಯಲ್ಲಿಟ್ಟುಕೊಂಡು ಸಾಕಿ ವಿದ್ಯೆ ಕೊಟ್ಟರು. ನಿಂತು ಅವರ ಮದುವೆಯನ್ನೂ ಮಾಡಿಕೆ... ಸದ್ಯ ದುಬೈನಲ್ಲಿರುವ ಆ ಇಬ್ಬರು ಸಹೋದ... ಕೋರ್ಟಿನ ಕಟಕಟೆಯಲ್ಲಿ ನಿಂತು ಹೇಳಿದ ... ಫಲವಾಗಿಯೇ ಕೋರ್ಟು ಅಲ್ಯೆಮಣಿಗೆ ಹ... ವರ್ಷಗಳ ಕಠಿಣ ಸಜೆಯ ತೀರ್ಪು ನೀಡಿತ್ತು... ವಿಚಾರಣೆಗೆಂದು ಗುಲ್ಬರ್ಗಾ ಜೈಲಿನಿಂದ ಬೆಂ... ಕರೆತಂದಾಗಲೇ ಅಲ್ಯೆಮಣಿ ಮತ್ತೆ ಪೊ... ಚಳ್ಳೆಹಣ್ಣು ತಿನ್ನಿಸಿ ಎಸ್ಕೇಪಾದ.

ಬಹುಶಃ ಆತ ಪರಾರಿಯಾಗದೇ ಹೋ... ಕನಿಷ್ಠ ಒಂದು ಡಜನ್ ನಿಷ್ಪಾಪಿ ಹೆಂಗಸರ ಅಮಾನುಷ ಅತ್ಯಾಚಾರವಾದರೂ ತಪ್ಪುತ್ತಿತ್ತೇ... ಹನ್ನೆರಡು ಮಂದಿ ಹೆಂಗಸರ ಮೇಲೆ ಅ... ನಡೆಸಿದ ದೌರ್ಜನ್ಯವಿತ್ತಲ್ಲ; ಅದೇ ಮತ್ತೊಂದು ಅಧ್ಯಾಯವಾಗಿತ್ತು.

(ಮುಂದುವರೆ...

"ಸಾರ್ವಜನಿಕವಾಗಿ ಅಳೋ ಲೀಡ್ರು ನೀಚನಂತೆ ಸಾರ್"



ನಮ್ಮ ಮಾಜಿ ಪ್ರಧಾನಿಗಳಾದ ಎಚ್.ಡಿ. ದೇವೇಗೌಡರು ಮೈಸೂರ ಮಹಾತ್ಮಾಗಾಂಧಿ ಪ್ರತಿಮೆ ಕಟ್ಟಿದ್ದದ ಗೋಡೆಗೆ ಬೆನ್ನು ಕೊಟ್ಟು ಕುಕ್ಕುರುಗಾಲಲ್ಲಿ ಕುಳಿತಿದ್ದರೆ. ಅವರ ಎದುರೊಂದು ಪ್ಲಾಸ್ಟಿಕ್ ಚೊಂಬಿದ್ದರೆ, ಇನ್ನೂ ಚೆನ್ನಾಗಿ ಕಾಣುತ್ತಿತ್ತು. ಏಕೆಂದು ಕಾರಣ ತಿಳಿಯುತ್ತಿಲ್ಲ, ನೀವಾದರೂ ಹೇಳಿ ಎಂಬ ಫೋನೊಂದು ನಮ್ಮ ಪತ್ರಿಕಾ ಕಚೇರಿಗೆ ಬಂತಲ್ಲಾ, ಆ ಕೂಡಲೇ ನಾವು ದೇವೇಗೌಡರಿಗೆ ಫೋನು ಮಾಡಲಾಗಿ ಅವರು ಸಿಕ್ಕೇಬಿಟ್ಟರು.

"ಹಲೋ ಸಾರ್ ನಾನು ಯಾಹೂ."

"ಯಾಹೂ ಅವ್ರೆ ಎಲ್ಲಿದ್ದೀರಿ?"

"ಇಲ್ಲೆ ಮೂಕಳ್ಳಿ ಉಂಡಿಲಿದ್ದಿನಿ, ತಾವೆಲ್ಲಿದ್ದೀರಿ ಸಾರ್?"

"ನಾನು ನಮ್ಮ ರಾಷ್ಟ್ರಪಿತ ಮಹಾತ್ಮಗಾಂಧಿ ಪ್ರತಿಮೆ ಎದುರು ಅಹಿಂಸಾತ್ಮಕ ರೀತಿಲಿ ಪ್ರತಿಭಟನೆಯಲ್ಲಿ ತೊಡಗಿದ್ದೇನೆ."

"ಯಾಕ್ ಸಾರ್ ಪ್ರತಿಭಟನೆ?"

"ಇಲ್ಲಿಗೇ ಬನ್ನಿ ಡೀಟೈಲಾಗಿ ಹೇಳ್ತಿನಿ."

"ಕೂಡ್ಲೆ ಬರಕ್ಕಾಗಲ್ಲ ಸಾರ್. ಇಲ್ಲಿ ನಿಮ್ಮ ಚೆನ್ನಿಗಪ್ಪನ ಕಡೆಯವರು ನನ್ನ ಪೆನ್ನು ಪೇಪರ್ ಕಿತ್ತುಕೊಂಡು ಆಟ ಆಡುಸ್ತಯಿದಾರೆ."

"ಚುನಾವಣೆ ಸಮಯದಲ್ಲಿ ಇವೆಲ್ಲಾ ಸಾಮಾನ್ಯವಾದ ಘಟನೆ, ನಾನು ಪೆನ್ನು ಪೇಪರ್ ಕೊಡುಸ್ತಿನಿ ಬನ್ನಿ."

"ಪೇಪರ್ ಸರಿ, ಪೆನ್ನು ಯಾರೋ ನನ್ನ ಆತ್ಮೀಯರು ನೆನಪಿಗಾಗಿ ಕೊಟ್ಟಿರೋದು ಸಾರ್."

"ಅಲ್ರೀ, ಆತ್ಮೀಯರು ಕೊಟ್ಟಿರೊ ಪೆನ್ನಿಗಾಗಿ ಅಳತಾಯಿರೊ ನೀವು ಯಾವ ಸೀಮೆ ಪತ್ರಕರ್ತರು?"

"ಸಾರ್ ನಾನು ಪೆನ್ನು ಕಳಕೊಂಡು ಅಳತಾಯಿದ್ದಿನಿ. ನೀವು ಏನೂ ಕಳಕೊಳ್ಳದೆ ಅಳತಿರಲ್ಲಾ, ಯಾಕ್ ಸಾರ್?"

"ನೋಡಿ ಯಾಹೂ, ಅದೇನೊ ನನಗೆ ಇತ್ತೀಚೆಗೆ ಮೈಕ್ ತೆಗೆದುಕೊಂಡರೆ ಸಾಕು, ಕಣ್ಣೀರು ಧಾರಾಕಾರ ಹರಿತವೆ."

"ನಿಜ ಸಾರ್ ಮೊನ್ನೆ ಟೀವಿಲಿ ನೋಡಿದೆ. ಬೇಸಿಗೆ ಕಾಲದ ಜೋಗ್ ಜಲಪಾತ ನೋಡಿದಂಗಾಯ್ತು, ಡಾಕ್ಟರಿಗಾರ ತೋರಿಸಿ ಸಾರ್."

"ಡಾಕ್ಟರಿಗೆ ತೋರಸೊ ಅಂತದ್ದೇನೂ ಆಗಿಲ್ಲ, ಆ ನಮ್ಮ ಕುಮಾರ ಭಾಷಣ ಮಾಡತಾಯಿದ್ರೆ ನನಗೆ ತುಂಬಾ ಅಳುಬರುತ್ತೆ."


"ರೇವಣ್ಣನ ಭಾಷಣ ಕೇಳಿದ್ರೆ?"

"ರೇವಣ್ಣ ಭಾಷಣ ಕೇಳಿದ್ರೆ ಯಾಕೊ ಇನ್ನು ಆ ತರ ಆಗ್ತಾಯಿಲ್ಲ, ಆದ್ರೆ ನಮ್ಮ ಕುಮಾರನ ಭಾಷಣದ ದನಿ ಕೇಳಿದ್ರೆ ಕಣ್ಣೀರು ತಾನಾಗೇ ಹರಿತವೆ."

"ಲೋಹಿಯಾ ಹೇಳಿದ್ರು ಸಾರ್, ಸಾರ್ವಜನಿಕ ಸಭೇಲಿ ಅಳೋನು ನೀಚ ನಂಬಬೇಡಿ ಅಂತ."

"ಆ ಲೋಯಿಯಾನಿಗೆ ಹೆಂಡತಿ ಮಕ್ಕಳು ಮೊಮ್ಮಕ್ಕಳಿದ್ರೆ ಗೊತ್ತಾಗೋದು. ಯಾವ ಭಾವನೆಗಳೂ ಇಲ್ಲದೆ ಬರೀ ಬಣ ರಾಜಕೀಯ ಮಾಡಿ ಸತ್ತರು. ಅವರ ಸುದ್ದಿ ಈಗ ಬೇಡಿ, ಅಪ್ರಸ್ತುತ ಕೂಡ."

"ಈ ದೇಶದಲ್ಲಿ ಲೋಹಿಯಾ ವಿಚಾರ ಯಾವಾಗಲೂ ಪ್ರಸ್ತುತ ಅಂತ ತೇಜಸ್ವಿ ಹೇಳಿದಾರೆ ಸಾರ್."



"ಅವ್ರುಳು ಹೇಳಿದಾಳೆ ಅಂತ ನಾವು ಕೇಳೋಕಾಗುತ್ತ. ಆಕೆ ಆಗ್ಲೆ ನಮ್ಮ ಜೊತೆ ಸೇರೋದಕ್ಕೆ ಕುಮಾರ ಪಾರ್ಕ್ ಹತ್ತಿರ ಸುಳಿದಾಡ್ತಯಿದಾಳೆ."

"ತೇಜಸ್ವಿನಿ ಅಲ್ಲ ಸಾರ್ ತೇಜಸ್ವಿ, ಕುವೆಂಪು ಮಗ."

"ಅವುರೆ ಆಗಲಿ, ಯಾರೆ ಆಗಲಿ, ಪ್ರಸ್ತುತ ಮೈಸೂರು ಸಂಸ್ಥಾನದಲ್ಲಿ ನಡೆದಿರತಕ್ಕಂತಹ ಚುನಾವಣೆ ಮೇಲಾಟ ಇದರಲ್ಲಿ ಕಾಂಗ್ರೆಸ್‌ನವರ ಕಿತಾಪತಿ ಶ್ರೀಕೃಷ್ಣನ ಅವಕೃಪೆಗೆ ತುತ್ತಾಗಿರೋ ಮಹಾನುಭಾವನ ವರ್ತನೆ ಇವನ್ನೆಲ್ಲಾ ನೋಡಿದ್ರೆ ನಮ್ಮ ಕಣ್ಣೀರಿಗೆ ನಿಜವಾದ ಕಾರಣ ಏನು ಅಂತ ತಿಳಕೊಂಡು ಆಶೀರ್ವಾದ ಮಾಡೋದರಲ್ಲಿ ಯಾವ ಅನುಮಾನವೂ ಇಲ್ಲ ಎಂಬತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳೋಕೆ ಇಚ್ಛೆಪಡ್ತೀನಿ."

"ಏನು ನಡೆದಿದೆ ಸಾರ್ ಅಲ್ಲಿ?"

"ಪೀಟರ್, ಮಿಸ್ಟರ್ ಪೀಟರ್ ಅನ್ನೊ ಅಧಿಕಾರಿ ಚುನಾವಣೆಗೆ ಬಂದಿರತಕ್ಕಂತಹ ನಮ್ಮ ಹುಡುಗರ ವಾಹನಗಳನ್ನು ತಡೆದು ಮಟ್ಟ ಗೋಲಾಕದಾನೆ."

"ಅವು ಅನಧಿಕೃತ ವಾಹನಗಳಂತೆ?"

"ಕಾಂಗ್ರೆಸ್ ಪಾರ್ಟಿ ಅನಧಿಕೃತ ವಾಹನಗಳನ್ನು ತೋರಿಸಿಕೊಡ್ಲಾ."

"ಅವುರವುನೂ ಹಿಡದವುರಂತಲ್ಲಾ?"

"ಸುಳ್ಳು, ಸುಳ್ಳು ಮಾಹಿತಿಯನ್ನ ನಾನು ನಂಬಲ್ಲಾ."

"ನಂಬಲ್ಲಾ ಅಂದ್ರೆ ನೀವೇ ಹೋಗಿ ಪರಿಶೀಲಿಸಿದರಾಯ್ತು."

"ನಾನು ಆರ್.ಟಿ.ಓ. ಗುಮಾಸ್ತನಲ್ಲಾ."

"ಹೌದು ಸಾರ್, ಮಾಜಿ ಪ್ರಧಾನಿಗಳು ತಾವು. ತಾವು ಆ ರೀತಿ ಚುನಾವಣಾ ಪ್ರಚಾರದ ಪರವಾನಗಿ ಇಲ್ಲದ ವಾಹನಗಳನ್ನು ತಪಾಸಣೆ ಮಾಡಕ್ಕಾಗಲ್ಲ, ಅನ್ಯಾಯ ನಡೆದಾಗ ಪ್ರತಿಭಟನೆ ಮಾಡಬವುದಷ್ಟೇ."

"ಅದಕ್ಕೆ ಗಾಂಧಿ ಪ್ರತಿಮೆ ಎದುರು ಈ ಉರಿಬಿಸಿಲಲ್ಲಿ ಕುಳಿತಿದ್ದೀನಿ. ಬೇಗ ಬನ್ನಿ."

"ಸಾರ್ ಈ ಚೆನ್ನಿಗಪ್ಪನ ಕಡೆಯೋರು ಯಾಕೊ ನನ್ನ ಕ್ಯಾಮರಾನು ಕಿತ್ತುಕೊಂಡವುರೆ. ಕೊಡ್ತಾಯಿಲ್ಲ."

"ನಮ್ಮ ಕುಮಾರನಿಗೇಳಿ ಒಳ್ಳೆ ಕ್ಯಾಮರ ಕೊಡುಸ್ತಿನಿ ಬನ್ನಿ ಬೇಗ. ಧರಣಿ ಮುಗುದೋಗತ್ತೆ."

"ಅಹಿಂಸಾವಾದಿ ಗಾಂಧಿ ಎದುರು ಕೂರೊ ಅಂತ ಹಿಂಸೆ ಏನು ನಡಿತು ಹೇಳಿ ಸಾರ್?"

"ನೋಡೀ, ಬೋಗಾದಿ ಜನ ನಾವು ಸಾರಾಸಗಟು ಜೆಡಿಎಸ್‌ಗೆ ಓಟು ಮಾಡ್ತಿವಿ. ಇಲ್ಯಾರು ಬರಬೇಡಿ ಅಂದ್ರು. ಅನ್ಯ ಪಾರ್ಟಿ ಜನ ನುಗ್ಗೋದಕ್ಕೆ ಪ್ರಯತ್ನ ಮಾಡಿದಾರೆ."

"ಅವರು ಹೋಗಿ ಕೇಳಲಿ ಬಿಡಿ ಸಾರ್."

"ಹತ್ತೊಂಬತ್ತುನೂರ ಎಪ್ಪತ್ತೊಂಬತ್ತನೆ ಇಸವಿ ಮಾರ್ಚ್ ತಿಂಗಳಲ್ಲಿ ಚಿಕ್ಕಮಗಳೂರು ಜಿಲ್ಲೆ ಹೊಸಳ್ಳಿಲಿ ಇಂದಿರಾಗಾಂಧಿ ಬೆಂಬಲಿತ ಜನ ನಮ್ಮನ್ನು ಊರಿಗೆ ಸೇರಿಸಲಿಲ್ಲ, ನಾವು ವಾಪಸು ಬಂದೊ ಗೊತ್ತೆ?"

"ನಿಮ್ಮ ವಾದ ಸರಿ. ಇನ್ನೇನಾಗಿದೆ ಸಾರ್?"

"ನಮ್ಮ ಜೆಡಿಎಸ್ ಕಾರ್ಯಕರ್ತರು ನಿರ್ಭೀತಿಯಿಂದ ಮತ ಕೇಳಕ್ಕಾಗ್ತಯಿಲ್ಲ, ಅವರ ಕಣ್ಣೀರು ನೋಡಕ್ಕಾಗ್ತಾಯಿಲ್ಲ."

"ಅಲ್ಲ ಸಾರ್, ಇಡೀ ಕರ್ನಾಟಕದ ಅರೆಬರೆ ರೌಡಿಗಳೆಲ್ಲಾ ಬಂದು ನಿಮ್ಮ ಪಾರ್ಟಿ ಲೀಡರ್‌ಗಳ ಜೊತೆ ಇದಾರೆ. ನಾನೇ ಗಮನಿಸಿದಂಗೆ ಪೊಲೀಸರಿಗೆ ಬೇಕಾದೋರೆಲ್ಲಾ ಕುಮಾರಣ್ಣನ ಹಿಂದೆನೆ ಅವುರೆ. ಅಂತದ್ರಲ್ಲಿ ನೀವಿಂಗೇಳ್ತಿರಲ್ಲ ಸಾರ್."

"ನೋಡಿ ಇವುರೆ ಪರಿಶೀಲಿಸದೆ ಮಾತನಾಡಬಾರದು. ರೌಡಿ ಸಂಸ್ಕೃತಿ ನಮ್ಮದಲ್ಲ, ಅದೇನಿದ್ರು ಕಾಂಗ್ರೆಸ್‌ನವರ ಕಲ್ಚರ್."

"ಪೀಟರ್ ಅಲ್ಲ ಜಾನ್ ಬಂದ್ರೂ ಕೇರ್ ಮಾಡಲ್ಲ ಅಂದವುರೆ ಕುಮಾರಣ್ಣ."

"ಸರಿಯಾದ ಮಾತಾಡಿದಾನೆ."

"ಚತುರ್ವೇದಿ ವಿವರ ಕೇಳಿದಾರಂತೆ."

"ಆತ ಕೇಂದ್ರದಲ್ಲಿ ಲೆಕ್ಕ ಪರಿಶೋಧಕನಾಗಿದ್ದ. ಅದವುರ ಕೆಲಸ."

"ಒಳ್ಳೆ ಟೈಮಲ್ಲಿ ಜೆಡಿಯು ಮೂರ ಜನ ಬಂದರಲ್ಲ ಸಾರ್."

"ತಡವಾಗಿ ಆಗಿರೊ ಜ್ಞಾನೋದಯಕ್ಕೆ ನನ್ನ ಮೆಚ್ಚುಗೆಯಿದೆ."

"ಖರೀದಿನೊ ಅಥವಾ ಆಶ್ವಾಸನೇನೊ ಸಾರ್?"

"ಖರೀದಿನೂ ಇಲ್ಲ ಬಕರಿನೂ ಇಲ್ಲ, ಅವರಿಗೆ ನನ್ನಂತವನ ಆಶ್ರಯ ಬೇಕಾಗಿತ್ತು, ಪಾಪ ಬಂದಿದಾರೆ."

"ಸಿಂಧ್ಯಾ ನಿಮ್ಮನ್ನೇ ತಗದಾಕ್ತನಂತೆ?"

"ನಾಯಿ ಬಾಲ ಅಲ್ಲಾಡಿಸಬಹುದೇ ಹೊರತು ಬಾಲ ನಾಯಿ ಅಲ್ಲಾಡಿಸೋಕೆ ಸಾಧ್ಯವೇ ಇಲ್ಲ, ಗೊತ್ತ ನಿಮಗೆ?"

"ಗೊತ್ತು ಸಾರ್, ಆದರೂ ನಾಯಿ ದುರ್ಬಲ ಆದಾಗ ಬಾಲ ಅಲ್ಲಾಡಸದಕ್ಕೆ ಟ್ರೈ ಮಾಡಿದ್ರೆ, ನಾಯಿ ಕೂಡ ಅಲ್ಲಾಡುತ್ತೆ ಮತ್ತೆ ಶಡತಗೊಂಡ ಬಾಲ ಅಲ್ಲಾಡಲ್ಲ ಅನ್ನದೂ ಗೊತ್ತು ಸಾರ್."

"ವಿವರವಾಗಿ ಮಾತಾಡೋಣ ಬನ್ನಿ."

"ಬರಲ್ಲ ಸಾರ್. ನಿಮ್ಮ ಚೆನ್ನಿಗಪ್ಪ ನನ್ನ ಕ್ಯಾಮರ ಜಜ್ಜಿ ತಗಂಡೋದ. ನಿಮ್ಮ ವಿರುದ್ಧ ಪ್ರತಿಭಟಸೊ ಸಂದರ್ಭನ ನೀವೇ ತಂದುಕೊಂಡ್ರಿ."


"ನಾನಾಗ್ಲೆ ಹೇಳಿದ್ದಿನಿ, ಬಾಲ ನಾಯಿನ ಅಲ್ಲಾಡಸಕ್ಕಾಗಲ್ಲ ಅಂತ."

"ಥೂತ್ತೇರಿ."

-ಯಾಹೂ

ಕೆಪಿಎಸ್‌ಸಿ: ಸುಳ್ಳುಗಳ ಸರಮಾಲೆ!

ಕೆಪಿಎಸ್‌ಸಿಯ ಕಳ್ಳ ಕೃಷ್ಣ ತನ್ನೆಲ್ಲ ಕರಾಮತ್ತನ್ನು ಮುಚ್ಚಿ ಹಾಕಲು ಸರ್ಕಸ್ ಮಾಡುತ್ತಿದ್ದಾನೆ. ತನ್ನಿಂದ 'ಫಲ' ಪಡೆದ ಅಭ್ಯರ್ಥಿಗಳಿಂದ ದಿನಕ್ಕೊಂದು ಪತ್ರಿಕಾ ಹೇಳಿಕೆ ಕೊಡಿಸುತ್ತಿದ್ದಾನೆ.




ಅಕೌಂಟ್ಸ್ ಆಫೀಸರ್ ಆಗಿರುವ ಹನುಮಂತೇಗೌಡ ಅರ್ಜಿಗೆ ಫೋಟೋ ಅಂಟಿಸಿರಲೇ ಇಲ್ಲ ಎಂದು ಬರೆದರೆ ಹೇಗೆ? ಆತ ಫೋಟೋ ಅಂಟಿಸಿದ್ದ ಎಂದು ಕೃಷ್ಣ ಹನುಮಂತನ ಪರವಾಗಿ ಮಾತಾಡಿದ್ದಾನೆ. ಮುಖ್ಯ ಪರೀಕ್ಷೆಯ ಅರ್ಜಿಯಿಂದ ಫೋಟೋ ಜಾರಿ ಬಿದ್ದು ಹೋಗಿತ್ತಂತೆ! ಅರ್ಜಿಯನ್ನೇ ಸರಿಯಾಗಿ ಕಾಪಾಡಿಕೊಳ್ಳದ ಆಯೋಗ, ಅದೆಂತಹ ನೇಮಕಾತಿ ಮಾಡಿತೊ? ಕೆಪಿಎಸ್‌ಸಿ ಓದಿರುವ ಹನುಮಂತೇಗೌಡನ ಅರ್ಜಿಯ ಫೋಟೋಕಾಪಿಯಲ್ಲಿ ಫೋಟೋ ಇತ್ತು, ಆದರೆ ಅದ್ದೇಗೋ ಜಾರಿಬಿದ್ದಿದೆ ಎಂದಿಟ್ಟುಕೊಳ್ಳೋಣ. ಆದರೆ ಫೋಟೋ ಪಕ್ಕ ಅರ್ಜಿಯಲ್ಲಿ ಹನುಮಂತೇಗೌಡನ ಸಹಿಯೂ ಇಲ್ಲವಲ್ಲ! ಅರ್ಜಿ, ಫೋಟೋ ಎರಡರ ಮೇಲೆ ಬರುವಂತೆ ಸಹಿ ಹಾಕಬೇಕಲ್ಲ? ಅದನ್ನೂ ಮರೆತನೆ ಹನುಮಂತ?

ಅದಿರಲಿ, ಬರೀ ಫೋಟೋ ಕುರಿತು ಮಾತಾಡುತ್ತಿರುವ ಕೃಷ್ಣ ಹನುಮಂತರೇ, ಹನುಮಂತೇಗೌಡ 3A ಕೆಟಗರಿಯಿಂದ ಜಿ.ಎಂ.ಗೆ ಜಿಗಿದದ್ದು ಯಾಕೆ ಮತ್ತು ಹೇಗೆ? ಎಂಬುದಕ್ಕೆ ಏನು ಉತ್ತರಾನೇ ಕೊಡ್ತಿಲ್ಲವಲ್ಲ! ಹೀಗೆ ಜಿ.ಎಮ್.ಗೆ ಜಿಗಿದ ಇನ್ನೂ ಮೂವರು ಪತ್ರಿಕೆಗಳಿಗೆ ಸ್ಪಷ್ಟೀಕರಣ ನೀಡಿ, ತಮ್ಮ ಜಾತಿ ಪ್ರಮಾಣ ಪತ್ರ ಕಳೆದುಹೋಗಿತ್ತು ಎಂದಿದ್ದಾರೆ. ಅರೆ, ಏನಿದು ಬರೀ 3A ಕೆಟಗರಿಯವರ ಜಾತಿಪ್ರಮಾಣ ಪತ್ರಗಳಷ್ಟೇ ಕಳೆದುಹೋಗ್ತಾವಲ್ಲ?

ಇನ್ನು ಎಚ್.ಬಿ. ಪಾರ್ವತಿ ಹೇಳ್ತಾರೆ ಕೇಳಿ. "2001 ರ ಆಯ್ಕೆಪಟ್ಟಿಯಲ್ಲಿ ಅಂಕಗಳ ಆಧಾರದ ಮೇಲೆ ಜಿ.ಎಂ.ನಿಂದ ಆಯ್ಕೆಯಾದೆ, 2006 ರಲ್ಲಿ ಕೆಪಿಎಸ್‌ಸಿಯ 'ಹಿಂಬರಹ'ದ ಆಧಾರದ ಮೇಲೆ 3B ಜಾತಿ ಪ್ರಮಾಣಪತ್ರ ಪಡೆದು 3B ಯಲ್ಲಿ ಆಯ್ಕೆಯಾದೆ... ವಾಟ್ಸ್ ರಾಂಗ್?..."

ಹೌದ್ದಾದು ಪಾರ್ವತಿ ಮೇಡಮ್, ಆದರೆ 2001 ರಲ್ಲಿ ನಿಮಗೆ ಸಿಕ್ಕಿದ್ದು ಗ್ರೂಪ್ ಬಿ ಹುದ್ದೆ, 2006 ರಲ್ಲಿ ಪಡೆದದ್ದು ಗ್ರೂಪ್ ಎ ಹುದ್ದೆ! ಹೀಗೆ 'ಹಿಂಬರಹ'ದ ಪ್ರಭಾವದಿಂದ ಅದೆಷ್ಟು 'ಪಾರ್ವತಿ ಕಲ್ಯಾಣ' ಪ್ರಸಂಗಗಳು ನಡೆದಿವೆ ಕೃಷ್ಣ ಪರಮಾತ್ಮ?

2001 ರ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ



ಕೆಲಸ ಸಿಕ್ಕ ನಂತರ ತಹಸೀಲ್ದಾರರಿಂದ ಪ್ರಮಾಣ ಪತ್ರ ತಂದಿರುವುದು

ಎಚ್.ಬಿ. ಪಾರ್ವತಿ ಜಿ.ಎಂ. ಕೆಟಗರಿಯಲ್ಲಿದ್ದರು. ಇದು ಸತ್ಯ ಏಕೆಂದರೆ ಅರ್ಜಿಯಲ್ಲಿ 3B ಎಂದು ನಮೂದಿಸಿದ್ದರೂ ಜಾತಿ ಪ್ರಮಾಣ ಪತ್ರ ಲಗತ್ತಿಸಿರಲಿಲ್ಲ. ಜಾತಿ ಪ್ರಮಾಣಪತ್ರ ಪಡೆದದ್ದು ಮಾರ್ಚ್ 3, 2006 ರಂದು! ಕೆಪಿಎಸ್‌ಸಿ ಅಂತಿಮಪಟ್ಟಿ (ಗೆಜೆಟ್) ಪ್ರಕಟವಾದದ್ದು ಫೆಬ್ರವರಿ 28, 2006 ರಂದು! ಅಂದರೆ ಸಂದರ್ಶನದ ವೇಳೆ ಪಾರ್ವತಿ ಮೇಡಮ್ ಹತ್ತಿರ ಜಾತಿ ಪ್ರಮಾಣ ಪತ್ರ ಇರಲೇ ಇಲ್ಲ!

ಕೆಪಿಎಸ್‌ಸಿ ಕರ್ಮಕಾಂಡದಲ್ಲಿ ಬರೀ ಇಂತಹ ಪ್ರಕರಣಗಳೇ. ಜಿಎಂನಿಂದ 3Bಗೆ, 3A ನಿಂದ ಜಿಎಂಗೆ... ಆ ಮೂಲಕ ಸರ್ಕಾರಿ ಕೆಲಸಕ್ಕೆ! ಕೃಷ್ಣ ಲೀಲೆಗೆ ಕಡಿವಾಣ ಹಾಕುವವರಾರು?

-ಮಲ್ಲಿ

ಕೇಡಿ ಕುಟುಂಬ!

- ಆರು ಸಾವಿರದಷ್ಟು ಕಲರ್ ಟೀವಿ ಕೂಪನ್ನುಗಳು!
- ಐದು ಸಾವಿರ ಜನಕ್ಕೆ ತಲಾ ಐದು ಸಾವಿರದಂತೆ ಕೈಸಾಲ!
- ಒಂದೂವರೆ ಕೋಟಿ ರೂಪಾಯಿ ಮೊತ್ತದ ಚಿನ್ನದ ನಾಣ್ಯಗಳು!
- ಮೂರು ಸಾವಿರ ಮೊಬೈಲ್ ಫೋನುಗಳು!
- ಬ್ರೀಫ್‌ಕೇಸ್ ತುಂಬ ಸಾವಿರ ರೂಪಾಯಿಯ ಕಂತೆ ಕಂತೆ ನೋಟುಗಳು!

ಆರು ಸಾವಿರದಷ್ಟು ಕಲರ್ ಟೀವಿ ಕೂಪನ್ನುಗಳು!

ಐದು ಸಾವಿರ ಜನಕ್ಕೆ ತಲಾ ಐದು ಸಾವಿರದಂತೆ ಕೈಸಾಲ!

ಒಂದೂವರೆ ಕೋಟಿ ರೂಪಾಯಿಗಳ ಮೊತ್ತದ ಚಿನ್ನದ ನಾಣ್ಯಗಳು!

ಮೂರು ಸಾವಿರ ಮೊಬೈಲ್ ಫೋನುಗಳು! ಮತ್ತು ಮೂರು ಬ್ರೀಫ್‌ಕೇಸ್‌ಗಳ ತುಂಬ ಸಾವಿರ ರೂಪಾಯಿಯ ಕಂತೆ ಕಂತೆ ನೋಟುಗಳು!

ಒಬ್ಬ ಸಿದ್ಧರಾಮಯ್ಯನನ್ನು ಸೋಲಿಸಲು ಇದು ಕುಮಾರಸ್ವಾಮಿ ಸರ್ಕಾರ ಎತ್ತಿಟ್ಟ ಸಂಪತ್ತಿನ ಒಂದು ಭಾಗ ಮಾತ್ರ . ಇದಿಷ್ಟನ್ನೇ ಲೆಕ್ಕ ಹಾಕಿದರೆ ಅದೇ ಕನಿಷ್ಠ ಹದಿನೈದು ಕೋಟಿಯಾಗುತ್ತದೆ. ಇನ್ನು ಕಾರ್ಯಕರ್ತರ ಖರ್ಚು, ನಾಯಕರ ಓಡಾಟದ ಬಾಬತ್ತು ಮತ್ತು ಜಾಹಿರಾತು ಸಾಮಗ್ರಿಗಳ ಒಟ್ಟೂ ಮೊತ್ತವನ್ನು ಕೂಡಿಸಿದರೆ ಅದೇ ಇಪ್ಪತ್ತು ಕೋಟಿಗೆ ಮುಟ್ಟುತ್ತದೆ. ಇಷ್ಟೆಲ್ಲಾ ಖರ್ಚು ಮಾಡಿಯೂ ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಸಿದ್ಧರಾಮಯ್ಯ ಸೋಲದೇ ಹೋದರೆ?

"ಅದಕ್ಕೆ ಏನೇನು ಬೇಕೋ ಎಲ್ಲವನ್ನೂ ಮಾಡಿ. ಎಷ್ಟು ಖರ್ಚಾದರೂ ಸೈ!"

ಹಾಗೆಂದು ಪಿತಾಮಹ ದೇವೇಗೌಡರು ಫರ್ಮಾನು ಹೊರಡಿಸಿದ್ದೇ ತಡ, ಮುಖ್ಯಮಂತ್ರಿ ಕುಮಾರಸ್ವಾಮಿಯೇ ನೇರವಾಗಿ ಚಾಮುಂಡೇಶ್ವರಿ ಅಖಾಡಕ್ಕೆ ಧುಮುಕಿಬಿಟ್ಟರು.

ಒಬ್ಬ ನಾಯಕನ ವಿರುದ್ಧ ಇಡೀ ಸರ್ಕಾರವೇ ಯುದ್ಧಕ್ಕಿಳಿದ ರೀತಿಯಿತ್ತಲ್ಲ; ಬಹುಶಃ ಚಿಕ್ಕಮಗಳೂರಿನಲ್ಲಿ ಇಂದಿರಾಗಾಂಧಿಯ ವಿರುದ್ಧ ವೀರೇಂದ್ರ ಪಾಟೀಲ್ ಕಣಕ್ಕಿಳಿದಿದ್ದರ ನಂತರ ಕರ್ನಾಟಕ ಕಂಡ ಅತೀ ದೊಡ್ಡ ಚುನಾವಣಾ ಹಣಾಹಣಿಯೆಂದರೆ ಅದು ಚಾಮುಂಡೇಶ್ವರಿ ಕ್ಷೇತ್ರ. ಒಬ್ಬ ಮುಖ್ಯಮಂತ್ರಿ ಚುನಾವಣಾ ಆಯೋಗದಿಂದ ಛೀಮಾರಿ ಹಾಕಿಸಿಕೊಂಡ ನಂತರವೂ ನಡೆಸಿದ ಅಕ್ರಮಗಳ ಬಗ್ಗೆ ಬಹುಶಃ ಯಾರೂ ಸಾಕ್ಷ್ಯಾಧಾರ ಸಮೇತ ವಿವರಣೆ ಕೊಡುತ್ತಿಲ್ಲ.

ಒಂದು ಮೂಲದ ಪ್ರಕಾರ ಸಂದೇಶ್ ನಾಗರಾಜ್ ಒಡೆತನದ 'ದಿ ಪ್ರಿನ್ಸ್' ಹೋಟೆಲಿನಿಂದ ಬಟವಾಡೆಯಾದ ಬಣ್ಣದ ಟೀವಿಗಳ ಸಂಖ್ಯೆಯೇ ಆರು ಸಾವಿರ. ಇಂಥ ಒಂದು ಟೀವಿಯ ಬೆಲೆ ಕಮ್ಮಿಯೆಂದರೂ ಎಂಟು ಸಾವಿರ ರೂಪಾಯಿಗಳು. ಹಾಗಂದ ನೇರವಾಗಿ ಯಾರೂ ಟಿವಿ ಸೆಟ್ಟುಗಳನ್ನೊಯ್ದು ಕೊಟ್ಟಿಲ್ಲ. ಅದಕ್ಕೆಂದೇ ಕೂಪನ್ನುಗಳನ್ನು ಹಂಚಲಾಗಿದೆ. ವಿಶೇಷವಾಗಿ ವರುಣಾ ಹೋಬಳಿಯ ಹಳ್ಳಿಗಳಿಗೆ ಮಂತ್ರಿ ಎಚ್.ಡಿ. ರೇವಣ್ಣನವರ ಶಿಷ್ಯರು ಆಯಾ ಹಳ್ಳಿಗಳ ಪ್ರಮುಖ ಮನೆಗಳಿಗೆ ಇಂಥ ಕೂಪನ್ನುಗಳನ್ನು ಕೊಟ್ಟಿದ್ದಾರೆ.

ಕೆಲವು ಸಿಗರೇಟು ಪ್ಯಾಕಿನ ತುಂಡುಗಳಾದರೆ, ಇ... ಕೆಲವು ಜೆಡಿಎಸ್‌ನ ಬ್ಯಾಡ್ಜುಗಳಂತಿವೆ. ಆದರೆ ಅವು... ಹಿಂದೆ ಯಾವುದೋ ಸೀಲು ಹಾಕಿ ಅದರ ಮೇ... ಇನ್ನಾರದೋ ಸಹಿಯಿದೆ. ಇಂಥ ಆರು ಸಾ... ಕೂಪನ್ನುಗಳನ್ನು ಸಂದೇಶ್ ನಾಗರಾಜ್‌ರ ಹೋಟೇಲಿನಿಂ... ಆಯಾ ಹಳ್ಳಿಗಳಿಗೊಯ್ದು ಕೊಟ್ಟವನು ಯಾರು ಗೊ...

ನೆಲಮಂಗಲದ ಜೋಡಿ ಕೊಲೆಯ ಪ್ರಮು...

ಆಟಾಟೋಪ-ಅಟ್ಟಹಾಸ!

ಇದೇನಿದು, ಖಚಿತ ಗೆಲುವಿನ ಆರ್ಭಟವೋ ಅಥವಾ ಸಂಭವನೀಯ ಸೋಲಿನ ಸಂಕೇತವೋ?

ಈ ತಂದೆ-ಮಕ್ಕಳಿಬ್ಬರಿಗೂ ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆಯ ಅಂತಿಮ ಕ್ಷಣಗಳಲ್ಲೇನು ಯಾವುದಾದರೊಂದು ಭೂತ ಬಡಿದುಕೊಂಡಿದೆಯೆ? ಅವರಿಬ್ಬರ ಮೈಮನಸ್ಸುಗಳನ್ನು ದೆವ್ವಗಳು ಆಕ್ರಮಿಸಿ ಕೊಂಡಿವೆಯೆ?

ಅದೇಕೆ ಈ ಅಧಿಕಾರಾರೂಢ ರಾಜವಂಶದ "ಚಕ್ರವರ್ತಿ" ದೇವೇಗೌಡ್ರು, ಮತ್ತು ಅವರ ಸಿಂಹಾಸನಾಧೀಶ್ವರ 'ರಾಜಕುವರ' ಕುಮಾರಣ್ಣಗಳಿಬ್ಬರೂ ಚುನಾವಣಾ ಪ್ರಚಾರದ ಕ್ಲೈಮ್ಯಾಕ್ಸ್ ಹಂತದಲ್ಲಿ ಹೀಗೆ ಕಂಡಕಂಡವರ ಮೇಲೆಲ್ಲ ಎಗರಾಡುತ್ತ, ರೇಗಾಡುತ್ತ ರಂಪವೆಬ್ಬಿಸುತ್ತ ಬಂದದ್ದು?!

"ಆ ಚುನಾವಣಾ ಆಯೋಗದ ವೀಕ್ಷಕರೇನು ಕತ್ತೆ ಕಾಯ್ತಿದ್ದಾರೇನ್ರೀ?" ಎಂದು ಟಿವಿ ಕ್ಯಾಮರಾದೆದುರೇ ಆರ್ಭಟಿಸಿದರು ಚೀಫ್ ಮಿನಿಸ್ಟರ್ ಕುಮಾರಸ್ವಾಮಿ...

"ಮಿಸ್ಟರ್ ಪೀಟರ್... ಹೂ ಆರ್ ಯೂ ಮಿಸ್ಟರ್ ಪೀಟರ್... ವಾಟ್ ಬ್ಲಡಿ ಬಿಸಿನೆಸ್ ಯೂ ಹ್ಯಾವ್" ಎಂದಬ್ಬರಿಸಿದರು ಗಾಂಧಿ ಪ್ರತಿಮೆ ಬಳಿ ಏಕಾಏಕಿ ಧರಣಿ ಶುರುಮಾಡಿಕೊಂಡ ಮಾಜಿ ಪಿ.ಎಂ. ದೇವೇಗೌಡ್ರು....

"ಆ ಗವರ್ನರ್‌ಗೆ ಏನು ಗೊತ್ತು ಸರ್ಕಾರ ನಡೆಸೋದು ಏನೂಂತ? ಬರೀ ವಿಧಾನಸೌಧದ ಎ.ಸಿ. ರೂಮಿನಲ್ಲಿ ಕೂತುಕೊಂಡ್ರಷ್ಟೇ ಅಡ್ಮಿನಿಸ್ಟ್ರೇಷನ್ ಅಪ್ಲಿಕಬಲ್ ಆಗುತ್ತಾ?..." ಈ ಬಾರಿ ಗವರ್ನರ್ ಚತುರ್ವೇದಿಯವರ ವಿರುದ್ಧ ಬಹಿರಂಗವಾಗಿ ಹರಿಹಾಯ್ದರು ನಮ್ಮ ಯುವ ಮುಖ್ಯಮಂತ್ರಿ!

"ಈ ರಾಷ್ಟ್ರದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಹುದ್ದೆಯಲ್ಲಿದ್ದ ನಮ್ಮ ರಾಜ್ಯಪಾಲರಿಗೆ ಹೀಗೆ ಯಾವುದೋ ಪೇಪರ್ ರಿಪೋರ್ಟ್ ಓದಿ ಒಬ್ಬ ಚೀಫ್ ಮಿನಿಸ್ಟ್ರಿಗೆ ಬುದ್ಧಿವಾದ ಹೇಳೋ ಪತ್ರ ಬರೆಯೋದರ ಔಚಿತ್ಯ ಅರ್ಥವಾಗೊಲ್ವಾ?" ತನ್ನ ಮಗನ ರಕ್ಷಣೆಗೆ ಧಾವಿಸಿದ ಮಾಜಿ ಪ್ರಧಾನಿ ಅದೇ ರಾಜ್ಯಪಾಲರ ವಿರುದ್ಧದ ವಾಗ್ದಾಳಿಗೆ ತಮ್ಮದೂ ಒಂದಷ್ಟು ಬಾಣ-ಬಿರುಸುಗಳನ್ನು ಪ್ರಯೋಗಿಸಿದರು....

ಅಂದ್ರೆ, ಹಿಂದೊಮ್ಮೆ ಈ ರಾಷ್ಟ್ರದ, ತದನಂತರ ಇಡೀ ರಾಷ್ಟ್ರದ ಸರ್ವೋಚ್ಚ ಹುದ್ದೆಗಳನ್ನಲಂಕರಿಸಿದ್ದ ದೇವೇಗೌಡ್ರಿಗಾಗಲಿ ಅಥವಾ ವರ್ತಮಾನದಲ್ಲಿ ಸುವರ್ಣ ಕರ್ನಾಟಕದ ಮುಖ್ಯಮಂತ್ರಿ ಪದವಿಯನ್ನಲಂಕರಿಸಿರುವ ಕುಮಾರಣ್ಣನಿಗಾಗಲಿ ಚುನಾವಣಾ ಆಯೋಗ, ರಾಜ್ಯಪಾಲ ಅಥವಾ ಸಿಬಿಐನಂತಹ ಯಾವುದೇ ಸಂವಿಧಾನಾತ್ಮಕ ಸಂಸ್ಥೆಗಳಾಗಲಿ ಲೆಕ್ಕಕ್ಕೇ ಇಲ್ಲ... ಅವುಗಳನ್ನು ತಮ್ಮ ಬೇಕು-ಬೇಡಗಳಿಗನುಸಾರವಾಗಿ ಹಿಗ್ಗಾಮುಗ್ಗಾ ತೆಗಳಬಹುದು.... ಹೀನಾಮಾನವಾಗಿ ಹಂಗಿಸಬಹುದು... ಸಾರ್ವಜನಿಕರ ದೃಷ್ಟಿಯಲ್ಲಿ ಅವೆಲ್ಲವನ್ನೂ ಯಃಕಶ್ಚಿತ್ ಎಂಬಂತೆ ಲೇವಡಿ ಮಾಡಿಬಿಡಬಹುದು!!


ಭೇಷ್.... ಅಂತೂ ತಮ್ಮ ಅಧಿಕಾರ ದಾಹದ ಪರಾಕಾಷ್ಠೆಗೆ ಕೊಂಚವೇ ಕೊಂಚ ಅಡ್ಡಿಪಡಿಸಿದವರ್‍ಯಾರೇ ಇದ್ದರೂ ಅವರನ್ನೆಲ್ಲ ಈ ಸಿಎಮ್ಮು ಅಥವಾ ಅವರ ತಂದೆ ಮಾಜಿ ಪಿಎಮ್ಮು ಅಥವಾ ಅವರದೇ ಕುಟುಂಬದ ಮತ್ತೊಬ್ಬ ಕ್ಯಾಬಿನೆಟ್ ಮಿನಿಸ್ಟ್ರು ಹೀಗೆ ಯಾರು ಬೇಕಾದ್ರೂ ಬಹಿರಂಗವಾಗಿ ಬೈಯ್ಯಬಹುದು; ನಿಂದಿಸಬಹುದು; ಮೂದಲಿಸಬಹುದು... ಹೀಗೆಲ್ಲ ಮಾಡಿಯೂ ಏನೂ ಆಗದಿರುವಂತೆ ಸುರಕ್ಷಿತವಾಗಿ ಪಾರಾಗಲೂಬಹುದು...

ಅಂತೂ ಕರ್ನಾಟಕದ ರಾಜಕಾರಣದಲ್ಲಿ ಸಾರ್ವಜನಿಕ ಸಭ್ಯತೆ, ಶಿಷ್ಟಾಚಾರಗಳಿಗೆ ಸಂಬಂಧಿಸಿದಂತೆ ಈ ಪಾಳೇಗಾರಿಕೆ ಕುಟುಂಬದ ವಂಶಜರೆಲ್ಲ ಹೊಸ ಹೊಸ ಮಾದರಿಗಳನ್ನೇ ರಾಜ್ಯದ ಜನಸಾಮಾನ್ಯರೆದುರು ಪ್ರದರ್ಶಿಸತೊಡಗಿದ್ದಾರೆ ನೋಡಿ.

ತಮ್ಮ ನಡಾವಳಿಗಳನ್ನು ಟೀಕಿಸುವವರು, ತಮ್ಮ ಸಾರ್ವಜನಿಕ ವರ್ತನೆ, ಧೋರಣೆ ಹಾಗೂ ಮನೋಧರ್ಮವನ್ನು ವಿಮರ್ಶಿಸುವವರನ್ನೆಲ್ಲ ತಮ್ಮ ಕುಟುಂಬದ ಶತ್ರುಗಳೇ ಎಂದು ತೀರ್ಮಾನಿಸಿಬಿಡುವ, ತದನಂತರ ಅವರನ್ನು ಸಂಪೂರ್ಣವಾಗಿ ನಿರ್ನಾಮ ಮಾಡಲೇಬೇಕೆಂದು ಸಂಕಲ್ಪ ತೊಡುವ ಈ ಅಸುರೀ ಶಕ್ತಿಗಳು, ರಾಕ್ಷಸ ಪ್ರವೃತ್ತಿಗಳನ್ನು ಚಾಮುಂಡೇಶ್ವರಿಯ ಮತದಾರರು ಗೆಲ್ಲಿಸಿ ಉದ್ಧಾರವಾಗಬೇಕೆ?

"ನೀನು ಧೈರ್ಯವಾಗಿ ಸಿಪಾಯಿಯಂತೆ ಮುನ್ನುಗ್ಗು... ನಿನ್ನ ಹಿಂದೆ ನಾನಿದ್ದೇನೆ" ಎಂದು ಚುನಾವಣಾ ಪ್ರಚಾರ ಸಮರದ ಅಂತಿಮ ಘಟ್ಟದ ಬಹಿರಂಗ ಸಮರದಲ್ಲಿ ತಮ್ಮ ಸುಪುತ್ರ ಕುಮಾರಣ್ಣನ ಬೆನ್ನು ಚಪ್ಪರಿಸುತ್ತಾರೆ ದೇವೇಗೌಡ್ರು.....

"ಇದೀಗ ನನ್ನ ಮನಸ್ಸು ಹಗುರವಾಯ್ತು, ನನ್ನ ತಂದೆಯವರು ನನ್ನತ್ತೆ ಇದ್ದಾರೆಂದು ತಿಳಿದು ನನ್ನ ಜನ್ಮ ಸಾರ್ಥಕವಾಯ್ತು..." ಎಂದು ಅದೇ ವೇದಿಕೆಯಿಂದ ಪ್ರತಿಸ್ಪಂದಿಸುತ್ತಾರೆ ಕುಮಾರಣ್ಣನವರು!!



ಗಂಡಸಿಗೆ ಸೀರೆಯುಡಿಸಿ ಹೊರೆ ಹೊರಿಸಿರುವ ಕೋ-ಜಾ ಸರ್ಕಾರದ ಪಿತಾಶ್ರೀ

ಇಂತಹ ಪರಸ್ಪರ ಶಾಬ್ಬಾಸಗಿರಿಯ ಮೂಲಕವೇ ತಮ್ಮ ಕೌಟುಂಬಿಕ ಯಜಮಾನಿಕೆಯನ್ನು ಕರ್ನಾಟಕದ ಜನತೆಯ ಮುಂದೆ ಸಮರ್ಥಿಸಿಕೊಳ್ಳುತ್ತ ಸಾಗುವ ದಾರ್ಷ್ಟ್ಯ ಈ ಗೌಡಾ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆ... ಕಂಪನಿಯ ಮಾಲೀಕರದ್ದು.....

ಚಾಮುಂಡೇಶ್ವರಿ ಉಪಚುನಾವಣೆಯ ಅಧಿ... ಘೋಷಣೆಗಿಂತ ಬಹುಮುಂಚಿನಿಂದಲೇ ಅದನ್ನೊಂ... ತಮ್ಮ ರಾಜಕೀಯ ಪ್ರತಿಷ್ಠೆಯ ತಾಣವಾಗಿ ಪರಿಗಣಿಸಿ... ಬಂದ ದೇವೇಗೌಡ, ಕುಮಾರಣ್ಣ ಮತ್ತು ರೇ... ಗಳು ಇಡೀ ಕ್ಷೇತ್ರದುದ್ದಕ್ಕೂ ವಿವಿಧ ಜಾತಿ... ಪವರ್ ಬ್ರೋಕರುಗಳನ್ನು ಗುರುತಿಸುತ್ತ ಜನೋ...ದ್ಧಾರದ ಭ್ರಮೆ ಮೂಡಿಸುತ್ತ ಬಂದರು....

ನಾಯಕ (ಪರಿವಾರ) ಜನಾಂಗದ ಓ... ಗೆಂದೇ ಸುಮಾರು ಮೂರು ಕೋಟಿ ರೂ... ಗಳಷ್ಟು ಹಣವನ್ನು ತಲಾ ಐದು ಸಾವಿರ ... ಸಾಲ ನೀಡಿಕೆ ಯೋಜನೆಯ ರೂಪದಲ್ಲಿ ಕಳ್ಳ... ವ್ಯಾಪಾರ ಮಾಡಿದಂತೆ ವಿತರಿಸುತ್ತ ಬಂದ... ಆ ಜಾತಿಯ ಜನರ ಸಂಖ್ಯಾಬಾಹುಳ್ಯ... ಪ್ರದೇಶಗಳಲ್ಲಿ ಎರಡೂವರೆಯಿಂದ ಮೂ... ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾರ್ಯಕ್ರಮ... ಶಂಕುಸ್ಥಾಪನೆ, ಭೂಮಿಪೂಜೆಗಳನ್ನು ನೆರವೇ...ಸಿದರು.....

ಅದೇರೀತಿ ಗಣನೀಯ ಸಂಖ್ಯೆಯ ಬಲ... ದಲಿತರ ಯುವ ಜನತೆಯನ್ನು ಬುಟ್ಟಿಗೆ ... ಕೊಳ್ಳಲೆಂದು ಅವರಿಗೂ ಸ್ವಯಂ ಉದ್ಯೋ... ಕ್ಕೋಸ್ಕರ ಐದೈದು ಸಾವಿರ ರೂಪಾಯಿ ... ವಿತರಣೆಯ ಕನಸುಗಳನ್ನು ಬಿತ್ತುತ್ತ ಬಂದ...

ರೊಟೇಶನ್ ಆಧಾರದ ಮೇಲೆ ... ರಾತ್ರಿಯ ವೇಳೆ ಆಗಮಿಸಿ ಮೊದಲು ಲಿಂಗಾ...ತರ, ಆನಂತರ ದಲಿತರ, ತದನಂತರ ನಾ... ಜನಾಂಗದ ಗೃಹಸ್ಥರ ಮನೆಗಳಲ್ಲಿ ಮುಖ್ಯಮಂತ್ರಿ... ಊಟ-ವಾಸ್ತವ್ಯದ ಸಡಗರ ನಡೆಯಿತು... ಇನ್ನು ಸ್ವ... ಬಾಂಧವರಾದ ಒಕ್ಕಲಿಗರ ಪೈಕಿ ಯುವಕ... ಮಿಲಿಟೆಂಟ್ ಭಾವನೆಗಳನ್ನು ಹುಟ್ಟಿ ಹಾಕಿ ಅವರು... ಸಿದ್ಧರಾಮಯ್ಯನವರ ಕುರುಬ ಬಾಂಧವರ ಯುವಕ... ವಿರುದ್ಧ ಸನ್ನದ್ಧರಾಗುವಂತೆ ಪ್ರೇರೇಪಿಸುತ್ತ ಬಂದರು...

...ರೋಪಿ ಚೆತ್ತನಗೆರೆ ಸೀನ!

ಕೊಲೆ ಕೇಸಿನಲ್ಲಿ ಈತನನ್ನು ಇವತ್ತಿಗೂ ...ಮಂಗಲದ ಪೊಲೀಸರು ಹುಡುಕುತ್ತಿದ್ದಾರೆ. ಕೇಳಿದರ ...ತ ಕೈಗೆ ಸಿಗೋದೇ ಇಲ್ಲ ಎನ್ನುತ್ತಾರೆ. ಆದರೆ ಡಬ್ಬಲ್ ...ರ್ಡರ್ ಕೇಸಿನ ಮುಖ್ಯ ಆರೋಪಿ ಚೆತ್ತನಗೆರೆ ಸೀನ ...ಲ್ಲಿ ಮುಖ್ಯಮಂತ್ರಿ ಸಹೋದರ ಮಂತ್ರಿ ರೇವಣ್ಣನ ...ತೆ ವರುಣಾ ಹೋಬಳಿಯ ಮತದಾರರಿಗೆ ಉಚಿತ ...ವಿ ಕೂಪನ್ನುಗಳನ್ನು ಹಂಚುತ್ತಿದ್ದಾನೆ. ಆತ ಮತ್ತು ...ರೇವಣ್ಣ ಒಂದೇ ಕಾರಿನಲ್ಲಿ ಓಡಾಡುತ್ತಿದ್ದಾರೆ.

ಸಿದ್ದು ಮುಗಿಸಲು ದೇವೇಗೌಡರು ಯಾಪಾಟ ...ರ ಕೆಡಿಸಿಕೊಂಡಿದ್ದಾರೆಂದರೆ; ತನ್ನ ಹೊರತಾಗಿ ಇಡೀ

ಡಾ. ಸೋಮನಾಥ್

...ಮುಂಡೇಶ್ವರಿ ಕ್ಷೇತ್ರದ ಹೊಣೆಯನ್ನು ಬೇರೆ ...ರಾರಿಗೂ ವಹಿಸಲು ಅವರಿಗೆ ನಂಬಿಕೆ ಬರುತ್ತಿಲ್ಲ. ...ಮುಂಡೇಶ್ವರಿಯ ನಾಲ್ಕು ಹೋಬಳಿಗಳ ಪೈಕಿ ...ಕ್ಕಲಿಗರೇ ಹೆಚ್ಚಾಗಿರುವ ಕಸಬ ಹೋಬಳಿಯ ...ಸ್ತುವಾರಿಯನ್ನು ಮಂತ್ರಿ ಚೆನ್ನಿಗಪ್ಪನಿಗೆ ವಹಿಸಿ, ...ಲವಾಲದ ಇಡೀ ಜವಾಬ್ದಾರಿಯನ್ನೆಲ್ಲ ಸಾರಿಗೆ ಮಂತ್ರಿ ...ಲುವರಾಯಸ್ವಾಮಿಯ ತಲೆಗೆ ಕಟ್ಟಿದ್ದಾರೆ. ಲಿಂಗಾಯತರೇ ಹೆಚ್ಚಿರುವ ವರುಣಾ ಹೋಬಳಿಯನ್ನು ಮಗ ರೇವಣ್ಣನಿಗೂ, ಹಿಂದುಳಿದವರೇ ಅಧಿಕವಾಗಿದ್ದ ಜಯಪುರ ಹೋಬಳಿಯನ್ನು ಮತ್ತೊಬ್ಬ ಮಂತ್ರಿ ಡಿ.ಟಿ.ಜಯಕುಮಾರ್ ವಶಕ್ಕೆ ಕೊಟ್ಟರು.

ಒಂದೊಂದು ಹೋಬಳಿಗೂ ಒಬ್ಬೊಬ್ಬ ಮಂತ್ರಿ ಯೆಂದರೆ ಅದು ಕಮ್ಮಿಯ ತಾಕತ್ತಾ? ಇಂಥ ಪ್ರತಿಯೊಬ್ಬ ಮಂತ್ರಿಯ ಕೈಕೆಳಗೂ ಕನಿಷ್ಠ ಸಾವಿರ ಮಂದಿ ಕಾರ್ಯಕರ್ತರು. ಯಾರಿಗೆ ಎಷ್ಟು ದುಡ್ಡು ಬೇಕಾದರೂ ಅವನ್ನು ಒದಗಿಸುವುದು ಬಾಲಕೃಷ್ಣೇಗೌಡ. ಇನ್ನೂ ನಿಗೂಢವೆಂದರೆ ರೇವಣ್ಣನ ಮಡದಿ ಭವಾನಿಯವರು ಇಲ್ಲಿಗೆ ಎರಡು ತಿಂಗಳ ಹಿಂದೆಯೇ ಬೋಗಾದಿಯ ತಮ್ಮ ನೆಂಟರ ಮನೆಯಲ್ಲಿ ಠಿಕಾಣಿ ಹಾಕಿ ಇಡೀ ಕ್ಷೇತ್ರದ ಮಹಿಳೆಯರನ್ನೆಲ್ಲ ಹೇಗೆ ಬುಟ್ಟಿಗೆ ಹಾಕಿಕೊಳ್ಳಬೇಕೆಂಬ ಮಾಸ್ಟರ್‌ಪ್ಲಾನ್ ರೂಪಿಸಿಬಿಟ್ಟಿದ್ದರು.




ಸಿದ್ಧರಾಮಯ್ಯನವರನ್ನು ಸೋಲಿಸುವುದಕ್ಕಾಗಿ ದೇವರ ಮೊರೆ ಹೋಗಿರುವ ಕೇಡಿ ಕುಟುಂಬ

ತನ್ನ ವಿರುದ್ಧ ಬಲವಾದ ಅಭ್ಯರ್ಥಿಯೇ ಇಲ್ಲವೆಂದ ಮೇಲೆ ತನ್ನನ್ನು ಸೋಲಿಸುವುದೆಲ್ಲಿಂದ ಎಂಬುದು ಸಿದ್ದು ಲೆಕ್ಕಾಚಾರವಾಗಿತ್ತು. ಹಾಗೇ ಬೋಗಾದಿಯಲ್ಲಿ ಠಿಕಾಣಿ ಹೂಡಿದ ಭವಾನಿ ರೇವಣ್ಣ ಸದ್ದಿಲ್ಲದೇ ಆಜುಬಾಜಿನ ಹಳ್ಳಿಗಳ ಒಂದೊಂದೇ ಮನೆಗೆ ಭೇಟಿ ಕೊಟ್ಟು ಅರಿಶಿನ ಕುಂಕುಮದ ನೆಪದಲ್ಲಿ ಚಿನ್ನದ ಮೂಗುತಿಗಳನ್ನು ಹಂಚುತ್ತಾ ಬಂದರು!

ರಾಜ್ಯದ ಅಷ್ಟೂ ಮಂದಿ ಕಾಂಗ್ರೆಸ್ ನಾಯಕರು ಚಾಮುಂಡೇಶ್ವರಿಗೆ ಧಾವಿಸಿದ್ದರಾದರೂ ಅವರ್‍ಯಾರಿಗೂ ಏನು ಮಾಡಬೇಕೆಂಬುದೇ ಗೊತ್ತಿರಲಿಲ್ಲ. ಇಲ್ಲಿಯತನಕ ಜಿ.ಟಿ. ದೇವೇಗೌಡ, ಡಿ. ಬಸವೇಗೌಡರಂಥ ಒಕ್ಕಲಿಗ ಪುಡಾರಿಗಳನ್ನು ಮುಂದಿಟ್ಟುಕೊಂಡೇ ಚುನಾವಣೆ ನಡೆಸುತ್ತಿದ್ದ ಸಿದ್ಧರಾಮಯ್ಯನವರಿಗೆ ಈ ಬಾರಿ ಅವರೆಲ್ಲ ಕೈಕೊಟ್ಟದ್ದು ಇಡೀ ಕ್ಷೇತ್ರದ ಮಟ್ಟಿಗೆ ಹೊಸ ನೆಲೆಯನ್ನು ಆಶ್ರಯಿಸುವಂತಾಗಿತ್ತು. ಅದರಲ್ಲೂ ಒಕ್ಕಲಿಗರ ಪ್ರಾಬಲ್ಯದ ಬಹುತೇಕ ಹಳ್ಳಿಗಳೆಲ್ಲ ಡಿ. ಬಸವೇಗೌಡ ಮತ್ತು ಜಿ.ಟಿ. ದೇವೇಗೌಡರ ಹಿಡಿತದಲ್ಲಿದ್ದುದರಿಂದ ಭವಾನಿ ರೇವಣ್ಣ ಮನೆಮನೆಗೂ ಹೋಗಿ ಚಿನ್ನದ ಒಡವೆ ಕೊಟ್ಟು ಬರುವುದು ಸಲೀಸಾಯಿತು.

ಇದರ ಬೆನ್ನಲ್ಲೇ ಮುಖ್ಯಮಂತ್ರಿ ಕುಮಾರ ಸ್ವಾಮಿ ಸಂದೇಶ್‌ರ 'ದಿ ಪ್ರಿನ್ಸ್' ಲಾಡ್ಜಿನಲ್ಲಿ ಠಿಕಾಣಿ ಹೂಡಿ

(ಮುಂದಿನ ಪುಟಕ್ಕೆ)




ಚುನಾವಣೆಯ ಗಿಮಿಕ್: ಹೆಂಗಳೆಯರ ಮನಗೆಲ್ಲುವ ಪ್ರಯತ್ನದಲ್ಲಿ ರೇವಣ್ಣ ಮತ್ತು ಕುಮಾರಸ್ವಾಮಿ

ಸುತ್ತೂರು ಮಠ, ಆದಿಚುಂಚನಗಿರಿ ಮಠ, ...ಜಾವರ ಮಠ ಹಾಗು ಸೇಂಟ್ ಫಿಲೋಮಿನಾಸ್ ...ರ್ಚ್‌ಗಳಿಗೆಲ್ಲ ಭೇಟಿಯಿತ್ತು ಆಯಾ ಜಾತಿ ಜನಾಂಗಗಳ ...ಟು ಬ್ಯಾಂಕುಗಳಿಗೆ ನೇರವಾಗಿ ಸಿಗ್ನಲ್ ಕೊಡುತ್ತ ...ಂದರು ಈ ತಂದೆ-ಮಕ್ಕಳು! ಅಲ್ಲಿಗೆ ಈ ಉಪ ...ನಾವಣೆಯ ಅಜೆಂಡಾ ಎಂದರೆ ಕೇವಲ ಜಾತಿ ...ಟು ಬ್ಯಾಂಕುಗಳ ಶಿಕಾರಿಯಾಟ ಎಂಬ ಸನ್ನಿವೇಶ ...ರ್ಮಾಣ ಮಾಡಿಬಿಟ್ಟರು ಈ ಜಾತ್ಯತೀತ ಜನತಾದಳದ ...ಟುಂಬಪ್ರೇಮಿ ನಾಯಕರು....

ಇಂತಹ ಅಭಾಸಕರ ವರ್ತನೆಯಿಂದಾಗಿಯೇ ...ಂದ್ರೀಯ ಚುನಾವಣಾ ಆಯೋಗದ ವೀಕ್ಷಕರು ...ವೇಗೌಡ ಮತ್ತು ಕುಮಾರಸ್ವಾಮಿ ಹಾಗು ಅವರನ್ನೇ ...ನುಕರಿಸುತ್ತ ಸಾಗಿದ ಜೆಡಿಎಸ್‌ನ ಇತರ ಮಂತ್ರಿಗಳ ...ಗ್ಗೆ ಮುಖ್ಯ ಚುನಾವಣಾ ಆಯುಕ್ತರಿಗೆ ಪ್ರತಿಕೂಲ ...ರದಿ ಸಲ್ಲಿಸಬೇಕಾಗಿ ಬಂತು..... ಆಯುಕ್ತರಿಂದ ...ವರಿಗೆಲ್ಲ ಎಚ್ಚರಿಕೆಯ ನೋಟೀಸು ಜಾರಿಯಾಗುವುದು ...ನಿವಾರ್ಯವಾಗಿಬಿಟ್ಟಿತು.

ಇಷ್ಟೆಲ್ಲಾ ರಾದ್ಧಾಂತಗಳು ಮಾಧ್ಯಮಗಳಲ್ಲಿ ಬಿತ್ತರ ...ಗೊಂಡಿದ್ದರಿಂದಾಗಿಯೇ ರಾಜ್ಯಪಾಲ ಚತುರ್ವೇದಿ ...ಮುಖ್ಯಮಂತ್ರಿಯವರಿಗೇ ಪತ್ರ ಬರೆದು 'ಕಿವಿಮಾತು' ...ಳಬೇಕಾಗಿ ಬಂತು.... ಅಲ್ಲಿಂದಲೇ ಈ ತಂದೆ-ಮಗನ ...ಸಿಟ್ಟಿಗೇರಿದ್ದು... ಅಲ್ಲಿಂದಾಚೆಗೇ ಅವರಿಬ್ಬರ ಮಾತಿನ ...ಶೈಲಿಯು ಬದಲಾಗುತ್ತ ಸಾಗಿದ್ದು.... ಆ ಕ್ಷಣದಿಂದಲೇ ...ವರಿಬ್ಬರೂ ತಮ್ಮ ಅದುವರೆಗಿನ ಸಂಯಮ, ಸಭ್ಯತೆ, ...ಪ್ರಚಾರದ ಮುಖವಾಡವನ್ನು ಕಿತ್ತೊಗೆದು ತಮ್ಮ ...ಮುಖಭಾವ ಮತ್ತು ಸಿಂಡರಿಸಿಕೊಂಡ ಮುಖಾರವಿಂದದ ...ಸ್ವರೂಪ ದರ್ಶನ" ಮಾಡತೊಡಗಿದ್ದು....

ಅಂದಹಾಗೆ ದೇವೇಗೌಡ ಮತ್ತು ಕುಮಾರಸ್ವಾಮಿ [illegible] ಕಾಂಗ್ರೆಸ್ಸಿಗರು [illegible] ತಮ್ಮ ಮುಂಚೂಣಿ ನಾಯಕರುಗಳ [illegible] ...ಂಗಿತು.

[illegible]

ಅರ್ಭಟದೆದುರು ಕಾಂಗ್ರೆಸ್ಸಿನ ಧರಂಸಿಂಗ್, ಖರ್ಗೆ, ಮೊಯ್ಲಿ, ಪೂಜಾರಿ, ತೇಜಸ್ವಿನಿ, ಉಮಾಶ್ರೀ, ಅಂಬರೀಷ್‌ಗಳ ಸಾಮೂಹಿಕ ಕಲರವ ಯಾವುದೋ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಅಣುಕು ಯುದ್ಧದಂತೆ ಕಾಣುತ್ತಿತ್ತು... ಅವರೆಲ್ಲ ಹೈಕಮಾಂಡಿನ ಹೆಡ್‌ಮಿಸ್ಟ್ರೆಸ್ ಸೋನಿಯಾ ಗಾಂಧಿಯವರ ಮನಸ್ಸಂತೋಷಪಡಿಸಲಿಕ್ಕೆಂದೇ ಬಲವಂತದಿಂದ ಕಣಕ್ಕಿಳಿದ ನಕಲೀ ಪೈಲ್ವಾನರುಗಳಂತೆಯೇ ಅಂಗಸಾಧನೆ, ಕಂಠಶೋಷಣೆ ಮಾಡಿ ಮೈಸೂರಿನ ಪ್ರಚಾರಯಜ್ಞ ಮುಗಿಸಿಕೊಂಡು ಸ್ವಸ್ಥಾನಕ್ಕೆ ಮರಳಿದರು...

ಇನ್ನು ಜೆಡಿಎಸ್‌ನ ಗೌಡ-ಕುಮಾರಣ್ಣ ಅವರ ಮರ್ಜಿ ಕಾಯಲೆಂದೇ ಓಡಾಡಿಕೊಂಡಿದ್ದ ಮಿತ್ರಪಕ್ಷ ಬಿಜೆಪಿಯ ನಾಯಕತ್ರಯರಾದ ಯಡಿಯೂರಪ್ಪ ಈಶ್ವರಪ್ಪ ಮತ್ತು ಅನಂತಕುಮಾರರೆಲ್ಲ ದೇಹ ಮೈಸೂರಿನಲ್ಲಿ ಮನಸ್ಸು ಬಾಬಾಬುಡನ್‌ಗಿರಿಯ ದತ್ತಪೀಠದಲ್ಲಿ ಎಂಬಂತೆಯೇ ದ್ವಿಪಾತ್ರಾಭಿನಯದ ಯಾತನೆ ಅನುಭವಿಸಿದರು....

ಅಭಿವೃದ್ಧಿರಂಗದ ಅಧ್ವೈರ್ಯವೆಂದೇ ಬಿಂಬಿಸಲಾದ ಯಡಿಯೂರಪ್ಪ ಚುನಾವಣಾ ಪ್ರಚಾರದ ಅಂತಿಮ ಗಳಿಗೆಯಲ್ಲಿ ದೇವೇಗೌಡ ಮತ್ತು ಕುಮಾರಸ್ವಾಮಿಯವರ ಅರ್ಭಟಕ್ಕೆ ತದ್ವಿರುದ್ಧವಾದ ರಾಗವೆಳೆಯುತ್ತ "ಚುನಾವಣಾ ಆಯೋಗ ಅತ್ಯಂತ ನಿಷ್ಪಕ್ಷಪಾತದಿಂದ ತನ್ನ ಕೆಲಸ ಮಾಡಿಕೊಂಡು ಬಂದಿದೆ" ಎಂದು ಮಿಸ್ಟರ್ ರೇಮಂಡ್ ಪೀಟರ್ ಮತ್ತಿತರ ವೀಕ್ಷಕರುಗಳಿಗೆ ಮೆಚ್ಚುಗೆ ಪತ್ರ ನೀಡಿದ್ದು ಗಮನಾರ್ಹವಾಗಿತ್ತು!!

ಇಡೀ ಚುನಾವಣಾ ಸಮರದ ಕೇಂದ್ರಬಿಂದು ಸಿದ್ಧರಾಮಯ್ಯನವರ ವ್ಯಕ್ತಿತ್ವದಲ್ಲಿ ಕೂಡ ಒಂದು ಸೂಕ್ಷ್ಮವಾದ ಬದಲಾವಣೆ ಮೂಡಿತ್ತು.... ತಮ್ಮನ್ನು ಸಂದರ್ಶಿಸಲು ಬಂದ ಪತ್ರಕರ್ತರು, ಹಿತೈಷಿಗಳನ್ನೆಲ್ಲ ಸಿದ್ದು "ಸಾರ್, ಸಾರ್" ಎಂದು ಪ್ರೀತಿಯಿಂದ ಸಂಬೋಧಿಸುತ್ತ ಆತ್ಮೀಯತೆ ತೋರುತ್ತಿದ್ದರು...ಅವರ ಸಹಜ ಬಾಯುಮಾನವನ್ನು ಬಲ್ಲ ಧರಂಸಿಂಗರೇ ಈ ವಿಷಯ ತಿಳಿದು ಅಚ್ಚರಿಗೊಂಡರು. "ಅಲ್ರೀ ಅಂದಾ ನನಗೂ ಎಂದೂ 'ಸರ್' ಅಂದಿರ್‍ಲಿಲ್ಲ... ಈಗ ನಿಮಗೂ ಸಾರ್ ಅಂದರಾ... ವೇರಿಗುಡ್... ಗುಡ್ ಚೇಂಜ್..." ಎಂದು ಉದ್ಗಾರವೆಳೆದರು.

-ರವೀಂದ್ರ ರೇಶ್ಮೆ

ಬೋಗಾದಿಯ ಮುದಿರೌಡಿ ಕೃಷ್ಣಮಾದೇಗೌಡ

ಜೆಡಿಎಸ್ ಪುಂಡಾಟಿಕೆ ಬರುಬರುತ್ತ ಯಾವ ಮಟ್ಟಕ್ಕೆ ಹೋಯಿತೆಂದರೆ ದಾಸನಕೊಪ್ಪಲು ಗ್ರಾಮದಲ್ಲಿ ಸಿದ್ಧರಾಮಯ್ಯನವರ ಪರ ಪ್ರಚಾರಕ್ಕೆ ಬಂದಿದ್ದ ಶಾಸಕಿ ಮಲ್ಲಾಜಮ್ಮನವರನ್ನು ಮನೆಯೊಂದರಲ್ಲಿ ಕೂಡಿಹಾಕಲಾಯ್ತು. ಈ ಘಟನೆಯ ಹಿಂದಿದ್ದವನು ಬೋಗಾದಿಯ ಕೃಷ್ಣಮಾದೇಗೌಡ. ಹೊಳೆನರಸಿಪುರ ಮತ್ತು ಹಾಸನಗಳಿಂದ ಬಂದು ಬೋಗಾದಿಯ ಈತನ ಮನೆಯಲ್ಲಿ ಠಿಕಾಣಿ ಹೂಡಿದ್ದ ಪುಡಿರೌಡಿಗಳೇ ಸಂಯುಕ್ತ ಜನತಾದಳದ ಎ.ಎಸ್. ಗುರುಸ್ವಾಮಿಯನ್ನು ಊರೊಳಕ್ಕೆ ಬಿಡದೇ ಹೊರಗಟ್ಟಿದ್ದು. ಸಮಾಜವಾದಿ ಪಕ್ಷದ ಕರುಣಾಕರ್‌ರನ್ನೂ ಊರ ಹೆಬ್ಬಾಗಿಲಲ್ಲೇ ತಡೆದು ಹಿಮ್ಮೆಟ್ಟಿಸಲಾಯಿತು.



ಕುಮಾರಸ್ವಾಮಿ ಜೊತೆಯಲ್ಲಿ ರೌಡಿ ಕೃಷ್ಣಮಾದೇಗೌಡ

ಈ ಕೃಷ್ಣ ಮಾದೇಗೌಡನಿಗೆ ಭಯಂಕರ ಸಿನಿಮಾ ಹುಚ್ಚು. ಒಂದಾನೊಂದು ಕಾಲಕ್ಕೆ ಸಿದ್ಧರಾಮಯ್ಯ ಕ್ಯಾಕರಿಸಿ ಉಗಿದರೂ ಅದನ್ನು ಪ್ರಸಾದವೆಂಬಂತೆ ಕಣ್ಣಿಗೊತ್ತಿಕೊಳ್ಳುತ್ತಿದ್ದ ಈ ಕೃಷ್ಣಮಾದೇಗೌಡ ಒಂದಾನೊಂದು ಕಾಲದ ಫಿಲ್ಮ್ ಪ್ರೊಡ್ಯೂಸರ್. 'ತೂಗುವೆ ಕೃಷ್ಣನ' ಎಂಬ ಸಿನಿಮಾ ತೆಗೆದು ಆನಂತರ 'ಕೃಷ್ಣಾ ನೀಬೇಗನೇ ಬಾರೋ' ತೆಗೆದ. ಸಿನಿಮಾ ಹಿರೋಯಿನ್ನುಗಳ ಖಯಾಲಿಯ ಪಿತ್ಥ ನೆತ್ತಿಗೇರಿತ್ತು. ಈ ಎರಡು ಚಿತ್ರಗಳಲ್ಲದೇ ಇನ್ನೂ ಮೂರು ತೋಪು ಸಿನಿಮಾಗಳನ್ನು ಮಾಡಿ ಬರ್ಬಾದಾಗಿ ಫುಟ್‌ಪಾತಿಗೆ ಬಿದ್ದಾಗ ಈತನ ಕೈ ಹಿಡಿದದ್ದು ಸಿದ್ಧರಾಮಯ್ಯ. ಎಂಡಿಸಿಸಿ ಬ್ಯಾಂಕಿಗೆ ಸರಿಯಾಗಿ ಐದು ಕೋಟಿಯ ಉಂಡೆನಾಮ ಹಾಕಿದ ಈತ ಈಗ ತನ್ನನ್ನು ಕಾಪಾಡಿದ ಸಿದ್ದು ವಿರುದ್ಧವೇ ತಿರುಗಿ ಬಿದ್ದಿದ್ದಾನೆ.

ಒಬ್ಬ ಕೃಷ್ಣ ಮಾದೇಗೌಡನಷ್ಟೇ ಅಲ್ಲ ಜಿ.ಟಿ. ದೇವೇಗೌಡ, ಡಿ. ಬಸವೇಗೌಡ, [illegible] ತಮ್ಮ ಶಿವಣ್ಣ ಮುಂತಾದ ಒಕ್ಕಲಿಗರನ್ನೆಲ್ಲ ಮೇಲಕ್ಕೆ ಮೆರೆಸಿದ್ದು [illegible] ಗತಿಯಿಲ್ಲದಿದ್ದಾಗ ಜಾತಿ ಬರಲಿಲ್ಲ, ದೇವೇಗೌಡರೂ ಮೂಸಲಿಲ್ಲ, ಕಾಪಾಡಿದ್ದು ಸಿದ್ದು [illegible] ಬಂತಾ? ತಮ್ಮನ್ನು ಈ ಮಟ್ಟಕ್ಕೆ ಬೆಳೆಸಿದ ಸಿದ್ಧರಾಮಯ್ಯನವರ ವಿರುದ್ಧ ಇವರೇ [illegible] ಅದು ಸಿದ್ದು ದೌರ್ಭಾಗ್ಯವಲ್ಲದೇ ಮತ್ತೇನು?

ಕೇಡಿ ಕುಟುಂಬ!


(ಮುಂದಿನ ಪುಟಕ್ಕೆ)

ಎರಡನೇ ರೌಂಡ್ ಕಾರಸ್ಥಾನಕ್ಕಿಳಿದರು. ಒಂದೊಂದು ಹೋಬಳಿಗೂ ತಲಾ ಐನೂರು ಮೊಬೈಲುಗಳಂತೆ ವಿಚಿತ್ರ ಕೂಪನ್ನುಗಳನ್ನು ವಿತರಿಸಲಾಯಿತು. ಕೂಪನ್ನು ಕೊಟ್ಟು ನಿರ್ದಿಷ್ಟ ಅಂಗಡಿಗಳಿಂದಲೇ ಇಂಥ ಮೊಬೈಲುಗಳನ್ನು ಪಡೆಯತಕ್ಕದ್ದು!

ಯಾವ ಚಾಮುಂಡೇಶ್ವರಿಯಲ್ಲಿ ಜೆಡಿಎಸ್ ಹೇಳ ಹೆಸರಿಲ್ಲದಂತಾಗಿತ್ತೋ ಚುನಾವಣೆ ಸಮೀಪಿಸುತ್ತಿದ್ದಂತೆ ಒಕ್ಕಲಿಗರ ಪ್ರಾಬಲ್ಯದ ಕಳಸ್ತವಾಡಿ, ಲಕ್ಷ್ಮೀಪುರ, ನಾಗನಹಳ್ಳಿ, ಮೈದನಹಳ್ಳಿ, ಇಲವಾಲ, ಗುಂಜ್ಞಾಲ್ ಛತ್ರ, ಹೊಸಕೋಟೆ, ಆನಂದೂರು, ಛತ್ರಕೊಪ್ಪಲು, ಯಲಚಹಳ್ಳಿ ಮುಂತಾದ ಗ್ರಾಮಗಳಲ್ಲಿ ಜೆಡಿಎಸ್ ಕಚೇರಿಗಳು ಶುರುವಾದವು. ಇಂಥ ಹಳ್ಳಿಗಳಲ್ಲಿ ಜೆಡಿಎಸ್ ಕಚೇರಿ ಯಾರು ತೆರೆಯುತ್ತಾರೋ ಅಂಥವನಿಗೊಂದು ಮೋಟಾರ್ ಬೈಕ್ ಕೊಡುತ್ತೇವೆ ಎಂದು ಬಹಿರಂಗವಾಗಿ ಹೇಳಿಕೆ ಕೊಟ್ಟವನು ಜಿ.ಟಿ. ದೇವೇಗೌಡ. ನವೆಂಬರ್ 24ರ ಹೊತ್ತಿಗೆ ಮಂತ್ರಿ ಚೆನ್ನಿಗಪ್ಪ ಎಂಥ ಲಜ್ಜೆಗೇಡಿ ಕೃತ್ಯಕ್ಕೆ ಕೈಯಿಟ್ಟನೆಂದರೆ; ತನ್ನ ಪಟಾಲಂನ ಕಟ್ಟಿಕೊಂಡು ಹಳ್ಳಿಗೆ ಕಾಲಿಟ್ಟದ್ದೇ ತಡ ನೂರು ರೂಪಾಯಿಗಳ ನೋಟುಗಳನ್ನು ಎತ್ತಿ ಎತ್ತಿ ಎಸೆಯುತ್ತಿದ್ದ. ಹಾಗೇ ಚೆನ್ನಿಗಪ್ಪ ತೂರಿದ ನೋಟುಗಳನ್ನು ಜನ ಬಕಾರಿಗಳಂತೆ ಮುಗಿಬಿದ್ದು ಆಯ್ದುಕೊಳ್ಳುತ್ತಿದ್ದರು. ಈ ರೀತಿ ತೂರಿದ ನೋಟುಗಳನ್ನು ಬಾಚಕೊಳ್ಳಲು ಹೋಗಿ ಕಾಲುತುಳಿತಕ್ಕೆ ಸಿಕ್ಕಿದ ಹೆಂಗಸೊಬ್ಬಳು ಆಸ್ಪತ್ರೆಗೆ ದಾಖಲಾದಳು. ಚೆನ್ನಿಗಪ್ಪ ನೋಟುಗಳನ್ನು ತೂರುತ್ತಿದ್ದ ದೃಶ್ಯಾವಳಿಗಳ ಫೋಟೋಗಳು ಮೈಸೂರಿನ ಪತ್ರಿಕೆಗಳಲ್ಲಿ ಪ್ರಕಟಗೊಂಡವು.

ಅಲ್ಲಿಗೆ ಇಡೀ ಚಾಮುಂಡೇಶ್ವರಿಯ ಮತದಾರರ ಮನಸ್ಥಿತಿಯೇ ಬದಲಾಯಿತು. ಆವತ್ತಿನವರೆಗೆ ಅಪ್ಪಮಕ್ಕಳ ವಿರುದ್ಧ ಹಿಡಿಶಾಪ ಹಾಕುತ್ತಿದ್ದವರೂ ಕೂಡ ಚುನಾವಣಾ ಪ್ರಚಾರಕ್ಕೆ ಯಾರೇ ಬಂದರೂ ಎಷ್ಟು ದುಡ್ಡು ಕೊಡ್ತೀರಿ?' ಎಂದು ಬಾಯಿಬಿಟ್ಟು ಕೇಳಲಾರಂಭಿಸಿದರು. ಇತ್ತ ವರುಣಾ ಹೋಬಳಿಯ ಹಳ್ಳಿಗಳ ಮನೆಮನೆಗೆ ಭೇಟಿ ಕೊಟ್ಟು ರೇವಣ್ಣ ಒಂದೊಂದು ಮನೆಗೂ ಸಾವಿರ ರೂಪಾಯಿಗಳ ಹತ್ತತ್ತು ನೋಟುಗಳನ್ನು ಹರಿದು ಕೊಟ್ಟರು.

ಆದಕ್ಕೆ ತಕ್ಕಂತೆ ಬೆಂಗಳೂರಿನಿಂದ ಒಂದು ಹಿಂಡು ರೌಡಿಪಡೆ ಮೈಸೂರಿನ ಹಳ್ಳಿಗಳಲ್ಲಿ ಠಳಾಯಿಸತೊಡಗಿತು. ಈ ಪೈಕಿ ಸಮಸ್ತ ರೌಡಿಗಳ ನೇತೃತ್ವ ವಹಿಸಿದವನು ರೌಡಿ ಕಾಂತ ಉರ್ಫ್ ಶ್ರೀಕಾಂತ. ಈತನ ಜೊತೆ ಮುಲಾಮನ ಬಂಟರು, ಸುಂಕದಕಟ್ಟೆಯ ರಾಮ ಮತ್ತು ಲಕ್ಷ್ಮಣ ಎಂಬ ಹಂತಕ ಬ್ರದರ್ಸ್, ನೆಲಮಂಗಲದ ಜೋಡಿ ಹತ್ಯೆಯ ಮುಖ್ಯ ಆರೋಪಿ ಚಿತ್ರನಗೆರೆ ಶೀನ,



ಅಂಬರೀಶ್‌ರನ್ನು ಗೂಂಡಾಗುರು ಎಂದು ಬಿಂಬಿಸಲು ಹಳೆಯ ಸಿನಿಮಾ ಪೋಸ್ಟರ್

ಕಡಬಗೆರೆಯ ಪಾಯ್ಸನ್ ರಾಮ, ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಗ್ಯಾಂಗ್, ಆಂಜನಪ್ಪ ಗಾರ್ಡನ್ನಿನ ಹಂತಕ ಸಹೋದರರಾದ ಕುಟ್ಟಿ, ರಾಜಾ ಬಹಿರಂಗವಾಗಿಯೇ ದೇವೇಗೌಡರ ಸುತ್ತಮುತ್ತ ಗಸ್ತು ತಿರುಗುತ್ತಿದ್ದಾರೆ.

ಇಂಥ ರೌಡಿಗಳೆಲ್ಲರ ಉಸ್ತುವಾರಿ ನಿಭಾಯಿಸಿದ್ದು ಮಾಗಡಿ ಶಾಸಕ ಬಾಲಕೃಷ್ಣ ಮತ್ತು ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ಗೋಪಾಲಯ್ಯ!

ನವೆಂಬರ್ 28ರ ಹೊತ್ತಿಗೆ ಅರ್ಧ ಚಾಮುಂಡೇಶ್ವರಿ ಪೂರ್ತಿ ಜೆಡಿಎಸ್‌ಮಯವಾಗಿ ಹೋಗಿತ್ತು. ಅದರಲ್ಲೂ ಕೊಳ್ಳೇಗಾಲದ ಶಾಸಕ ಬಾಲರಾಜ್ ಎಂಥಾ ಅನಾಹುತಕಾರಿ ಕೃತ್ಯಕ್ಕಿಳಿದನೆಂದರೆ; ತಮಿಳುನಾಡಿನ ಕೊಯಂಬತ್ತೂರಿನಿಂದ ಕ್ವಾಲೀಸ್ ಗಾಡಿಯೊಂದರಲ್ಲಿ ಒಂದೂವರೆ ಕೋಟಿ ರೂಪಾಯಿ ಮೊತ್ತದ ಚಿನ್ನದ ನಾಣ್ಯಗಳನ್ನು ಹೊತ್ತು ತಂದು ಮೈಸೂರಿನಲ್ಲಿಳಿಸಿದ್ದ.

ಇತ್ತ ಕುಮಾರಣ್ಣ ಮತ್ತು ದೇವೇಗೌಡ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಚುನಾವಣಾ ಆಯೋಗದ ವಿರುದ್ಧ ಕಿಡಿಕಾರಿ ಎಲ್ಲರ ಗಮನವನ್ನು ಅತ್ತ ಸೆಳೆಯುತ್ತಿದ್ದರೆ; ಮೈಸೂರಿನ ಹಳ್ಳಿಗಳಲ್ಲಿ ಎಲ್ಲರ ಕೈಯಲ್ಲೂ ಚಿನ್ನದ ನಾಣ್ಯ ಇಟ್ಟಾಡುತ್ತಿತ್ತು. ಬಾಲರಾಜ್ ತರುತ್ತಿದ್ದ ಭಾರೀ ಮೊತ್ತದ ಚಿನ್ನದ ನಾಣ್ಯಗಳನ್ನು ಜಪ್ತಿ ಮಾಡಲು ಬಹುತೇಕ ಕಾಂಗ್ರೆಸ್ ಕಾರ್ಯಕರ್ತರು ಹೊಂಚುಹಾಕಿದ್ದರು. ಆಯೋಗಕ್ಕೂ ದೂರು ಕೊಟ್ಟಿದ್ದರು. ಆದರೂ ನಯಾಪೈಸೆಯ ಪ್ರಯೋಜನವಾಗಲಿಲ್ಲ.

ಜೆಡಿಎಸ್‌ಗೆ ಸೇರಿದ ಒಂದಷ್ಟು ಮದ್ಯದ ಲಾರಿಗಳು ಜಪ್ತಾದವು. ಎರಡೂ ಕಡೆಯವರ ನೂರಾರು ಕಾರುಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದರು. ಆದರೆ ಟೀವಿಗೆಂದು, ಮೊಬೈಲ್ ಫೋನಿಗೆಂದು ಕೊಟ್ಟ ಕೂಪನ್ನುಗಳನ್ನು ಯಾರು ತಾನೇ ಬಹಿರಂಗಪಡಿಸುತ್ತಾರೆ?

ಚುನಾವಣೆಗೆ ಇನ್ನೇನು ಮೂರು ದಿನ ಬಾಕಿಯಿದೆ ಎನ್ನುವಂತೆ ಆತನಕ ಸಿದ್ರಾಮಯ್ಯನವರ ಪರವಾಗಿದ್ದ ಹಿನಕಲ್ ಮತ್ತು ಅದರ ಸುತ್ತಮುತ್ತಲ ಗ್ರಾಮಸ್ಥರು ಕೂಡ ನಮಗೇನು ಲಾಭ? ಎನ್ನುವ ದುರಾಶೆಗೆ ಬಿದ್ದರು. ದೂರ ಎಂಬ ಗ್ರಾಮದ ದಲಿತರು ತಮ್ಮ ಎರಡೂವರೆ ಸಾವಿರದಷ್ಟು ಮತಗಳನ್ನು ಬಹಿರಂಗ ಹರಾಜಿಗಿಟ್ಟು ಯಾರು ದುಡ್ಡು ಕೊಡ್ತಾರೋ ಅವರಿಗೇ ನಮ್ಮ ಮತ ಎಂದು ಬಹಿರಂಗವಾಗಿ ಘೋಷಿಸಿಬಿಟ್ಟರು. ವಿಪರ್ಯಾಸವೆಂದರೆ ಅಲ್ಲಿಯತನಕ ಈ ಊರಿನ ದಲಿತರು ಸಿದ್ದರಾಮಯ್ಯನವರ ಬೆನ್ನಿಗಿದ್ದರು.

ಯಾವತ್ತು ಜನ ದುಡ್ಡಿನ ಹಿಂದೆ ಬಿದ್ದಿದ್ದಾರೆಂಬುದು ಖಾತರಿಯಾಯ್ತೋ ಮಂತ್ರಿ ಚೆನ್ನಿಗಪ್ಪನ ಪಟಾಲಂ ವಿನೂತನ ತಂತ್ರವೊಂದಕ್ಕೆ ಕೈಯಿಟ್ಟಿತು. ಅದೆಂದರೆ ಒಬ್ಬ ದಲಿತ ಮತದಾರ ಓಟು ಹಾಕದೆ ತನ್ನ ಗುರುತಿನ ಚೀಟಿ ಕೊಟ್ಟರೆ ಆತನಿಗೆ ಎರಡು ಸಾವಿರ ರೂಪಾಯಿಗಳ ಕ್ಯಾಷು!

ಕಸಬಾ ಹೋಬಳಿಯ ಚೆಲವತ್ತ ಮತ್ತು ಜನತಾನಗರ ಕಾಲೋನಿಗಳಲ್ಲಿ ಹೀಗೆ ಚೆನ್ನಿಗಪ್ಪನಿಂದ ತಲಾ ಎರಡು


ಕುರಿಯನ್ನು ಮುಂದಿಟ್ಟುಕೊಂಡು ಮತಗಳ ವ್ಯಾಪಾರ ಮಾಡುತ್ತಿರುವ ಸಚಿವ ಕಾಶಂಪುರ


ಜಾತಿಯನ್ನು ಮುಂದಿಟ್ಟುಕೊಂಡು ಚುನಾವಣಾ ಪ್ರಚಾರ[illegible] ಮಾಡುತ್ತಿರುವ ಡಿ.ಟಿ.ಜಯಕುಮಾರ್

ಸಾವಿರದಂತೆ ನಗದು ಪಡಕೊಂಡ ಅಷ್ಟೂ ದಲಿ[illegible] ಸಾರಾಸಗಟಾಗಿ ತಮ್ಮ ಗುರುತಿನ ಚೀಟಗಳನ್ನು ಚೆನ್ನಿ[illegible] ಬಂಟರ ಕೈಗಿತ್ತ ಘಟನೆ ನಡೆದದ್ದು ಡಿಸೆಂಬರ್ [illegible] ರಾತ್ರಿ. ಕಾಂಗ್ರೆಸ್ ಈ ಬಗ್ಗೆ ಆಯೋಗಕ್ಕೆ ದೂ[illegible] ಕೊಟ್ಟದೆಯಾದರೂ ಅದಕ್ಕೆ ಸಾಕ್ಷಿ ತಾನೇ ಎಲ್ಲಿತ್ತ[illegible]

ಒಬ್ಬ ಸಿದ್ದರಾಮಯ್ಯನನ್ನು ಸೋಲಿಸಲು ದ[illegible] ಗೌಡರು ಈ ಮಟ್ಟಕ್ಕಿಳಿಯಬೇಕೆ?


ಮತದಾರರನ್ನು ದುಡ್ಡುಕಾಸಿಗೆ ಜೊಲ್ಲು ಸುರಿ[illegible] ನಾಯಿಗಳಂತೆ ಪರಿಗಣಿಸಿದ ಮಣ್ಣಿನ ಮಕ್ಕಳಿಗೆ ವ[illegible] ಹೇಳುವವರ್‍ಯಾರು?

ಕಾಂಗ್ರೆಸ್ಸಿನವರಾಗಲಿ, ಸಿದ್ಧರಾಮಯ್ಯನವರ ಲಮ್ಮಾಗಲಿ ಇಲ್ಲಿ ಸಾಚಾಗಳಲ್ಲ ನಿಜ; ಆದರೆ ಅವ[illegible] ಅಂಥ ಹತಾಶೆಗೆ ತಂದವರ್‍ಯಾರು? ಓಟನ ಕ[illegible] ಸುರಿದ ದುಡ್ಡು ದೇವೇಗೌಡರ ಮನೆಯಿಂದ ತ[illegible] ಅಥವಾ ರಾಜ್ಯವನ್ನು ಕೊಳ್ಳೆ ಹೊಡೆದಿದ್ದಾ?

ಅಷ್ಟಕ್ಕೂ ಒಬ್ಬ ಸಿದ್ಧರಾಮಯ್ಯನನ್ನು ಸೋಲಿ[illegible] ಈ ಪಾಟ ದುಡ್ಡಾ?

ಈಶ್ವರಪ್ಪನ ರೂಂ ಬಾಡಿಗೆ ಬರೀ 24 ಸಾವಿರ!

ಗೌಡರ ಫ್ಯಾಮಿಲಿಯೇ ಲಂಗುಲಗಾಮಿಲ್ಲದೇ ದುಡ್ಡು ಚೆಲ್ಲುತ್ತಿರುವಾಗ ಇನ್ನು ಅವರ ಪಾರ್ಟ್‌ನರ್ ಬಜೆಪಿಗಳು ಕೈಕಟ್ಟಿ ಕೂತರೆ ಹೇಗೆ?



ಅದಕ್ಕೆಂದೇ ಬಜೆಪಿ ನಾಯಕ ಮಂತ್ರಿ ಈಶ್ವರಪ್ಪ ಎಂಥಾ ಘನಕಾರ್ಯಕ್ಕಿಳಿದರೆಂದರೆ ಲಾಟರಿ ಮಂತ್ರಿ ರಾಮಚಂದ್ರಗೌಡರ ಮೂಲಕ ಲಕ್ಕಿ ಜಾಕ್‌ಪಾಟ್ ಆನ್‌ಲೈನ್ ಖದೀಮರಾದ ಖಲೀಲ್- ಮಾರ್ಟಿನ್ ಜೋಡಿಯಿಂದ ಎರಡು ಕೋಟಿಯಷ್ಟು ಗಂಟು ತರಿಸಿದ್ದೇ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲಿನಲ್ಲಿ ಠಿಕಾಣಿ ಹಾಕಿದ್ದಾರೆ. ಶಾಸಕ ಶಂಕರಲಿಂಗೇಗೌಡರನ್ನು ಜೊತೆ ಹಾಕಿಕೊಂಡು ಹೋದ ಮನೆಗೆಲ್ಲ ಸಾವಿರ ರೂಪಾಯಿಯ ಒಂದೊಂದೇ ನೋಟನ್ನು ಎಳೆದೆಳೆದು ಕೊಟ್ಟಿದ್ದಾರೆ.

ಇನ್ನು ತಾನು ಮಾಮೂಲಿ ಹೋಟೆಲುಗಳಲ್ಲಿ ಉಳಕೊಂಡರೆ ಹೇಗೆ? ಅದಕ್ಕೊಂದು ಲಲಿತ ಮಹಲ್ ಪ್ಯಾಲೇಸಿನ ರಾಯಲ್ ಸೂಟನ್ನೇ ಆಯ್ದುಕೊಂಡ ಈಶ್ವರಪ್ಪ ಅದರ ಒಂದು ದಿನದ ಬಾಡಿಗೆಯೆಂದು ಪಾವತಿ ಮಾಡಿದ್ದು ಬರೀ ಇಪ್ಪತ್ನಾಲ್ಕು ಸಾವಿರ ರೂಪಾಯಿಗಳು ಮಾತ್ರ.

ಈ ಹಿಂದೆ ರಾಜೀವ್‌ಗಾಂಧಿ, ಜಯಲಲಿತಾ ಥರದವರು ಮೈಸೂರಿಗೆ ಬಂದಾಗಷ್ಟೇ ಉಳಿದುಕೊಳ್ಳುತ್ತಿದ್ದ ಸೂಟದು. ಯಾರೋ ಕೇಳಿದ್ದಕ್ಕೆ 'ಅಲ್ರೀ ಆ ದಿನೇಶ್ ಗುಂಡೂರಾವ್ ದಿನಕ್ಕೆ 8 ಸಾವಿರ ರೂಪಾಯಿಯ ರೂಮಲ್ಲಿ [illegible] 23 ಸಾವಿರದ ಸೂಟಲ್ಲಿ [illegible]?' ಎಂದರಂತೆ!

[illegible] ಕುರುಡು ಕಾಂಚಾಣದ ಲೀಲೆ!

ರಾಜಶೇಖರ ಮೂರ್ತಿಯ ಬಗಣಿಗೂಟ!

ಅದು ದೇವೇಗೌಡರ ಮೇಲಿನ ಮುನಿಸೋ, ಒಳಗಿದ್ದೇ ಕತ್ತು ಕುಯ್ಯುವ ಸಂಚೋ ಅಥವಾ ತಮ್ಮ ದೈನೇಸಿ ಸ್ಥಿತಿಯ ಬಗೆಗಿನ ಅಸಂತುಷ್ಟಿಯೋ ಗೊತ್ತಿಲ್ಲ, ಪ್ರಾರಂಭದಲ್ಲಿ ಸರಸ್ವತಿಪುರಂನ ಚುನಾವಣಾ ಪ್ರಚಾರದ ಕಚೇರಿಯ ಉದ್ಘಾಟನೆಗೆ ಬಂದವರು ಒಂದೇ ಒಂದು ಮಾತನ್ನೂ ಆಡದೇ ವಾಪಸ್ಸಾದ ಲಿಂಗಾಯತರ ಅಧಿಪತಿ ರಾಜಶೇಖರಮೂರ್ತಿ ಇಡೀ ಚಾಮುಂಡೇಶ್ವರಿ ಚುನಾವಣೆಯುದ್ದಕ್ಕೂ ಏಕೋ ನಿಗೂಢವಾಗಿಯೇ ಉಳಿದುಬಿಟ್ಟರು.

ಆವರ ಎರಡನೇ ಮತ್ತು ಕೊನೆಯ ಬಾರಿಗೆ ಚುನಾವಣಾ ಕಣದಲ್ಲಿ ಕಾಣಿಸಿದ್ದು ಡಿಸೆಂಬರ್ 1ರ ಶುಕ್ರವಾರದ ಅಂತಿಮ ಸಭೆಯಲ್ಲಿ ಮಾತ್ರ. ವೇದಿಕೆಯ ಮೇಲೆ ಸಾಕ್ಷಾತ್ ದೇವೇಗೌಡರೇ ಪವಡಿಸಿದ್ದರು. ಪಕ್ಕದಲ್ಲೇ ಮಗ ಮುಖ್ಯಮಂತ್ರಿ ಕುಮಾರಸ್ವಾಮಿ, ಡಿ. ಮಂಜುನಾಥ್, ಚೆಲುವ, ಚೆನ್ನಿಗ, ಜಯಕುಮಾರ್, ಭಾರತಿ ಶಂಕರ್, ಎ.ಆರ್. ಕೃಷ್ಣಮೂರ್ತಿ ಮುಂತಾದವರೆಲ್ಲ ಲಗುಬಗೆಯಿಂದ ಬಂದಾಗಲೂ ರಾಜಶೇಖರಮೂರ್ತಿ ಮಾತ್ರ ಒಂದೂವರೆ ಗಂಟೆ ತಡವಾಗಿ ಬಂದರು.

ಸಭೆಯಲ್ಲಿ ಏನಾದರೂ ಮಾತಾಡಬೇಕಲ್ಲ? ಕೊನೆಯ ಸಭೆಯಲ್ಲಾದರೂ ನಾಯಕರು ಸುದೀರ್ಘವಾಗಿ ಮಾತಾಡುತ್ತಾರೆಂಬ ಎಲ್ಲರ ನಿರೀಕ್ಷೆಯೇ ತಲೆಕೆಳಕಾಗಿತ್ತು, 'ಮಹಾಜನಗಳೇ ಶಿವಬಸಪ್ಪ ತುಂಬಾ ಒಳ್ಳೇ ಮನುಷ್ಯ, ಪ್ರಾಮಾಣಿಕ ಮತ್ತು ಸಜ್ಜನ. ದಯಮಾಡಿ ಅವನನ್ನೇ ಗೆಲ್ಲಿಸಬೇಕು ಅಂಥ ಕೇಳ್ಕೋತೀನಿ!'

ಬರೇ ಮೂರು ವಾಕ್ಯದಲ್ಲಿ ಇಷ್ಟು ಅಂದಿದ್ದು ಬಿಟ್ಟರೆ ರಾಜಶೇಖರಮೂರ್ತಿ ಮಹಾಶಯ ಕಾಂಗ್ರೆಸ್ ವಿರುದ್ಧವಾಗಲಿ, ಸಿದ್ಧರಾಮಯ್ಯ ವಿರುದ್ಧವಾಗಲಿ; ಒಂದೇ ಒಂದು ಶಬ್ದ ಕೂಡ ಮಾತಾಡಲೇ ಇಲ್ಲ. ಭಾಷಣ ಮುಗಿಸಿ ಒಂದೇ ಒಂದು ನಿಮಿಷ ಕೂಡ ನಿಲ್ಲದೇ ಹೊರಟುಬಿಟ್ಟರು. ಹೋಗುವ ಮುನ್ನ ದೇವೇಗೌಡರಿಗಾಗಲಿ, ಮುಖ್ಯಮಂತ್ರಿ ಕುಮಾರಸ್ವಾಮಿಗಾಗಲಿ; ಸಣ್ಣದೊಂದು ವಿಷ್ ಕೂಡ ಮಾಡಲಿಲ್ಲ.



ಹೋಗಲಿ ಚುನಾವಣಾ ಪ್ರಚಾರದಲ್ಲಾದರೂ ಸಕ್ರಿಯವಾಗಿದ್ದರಾ ಅಂದರೆ ಅದೂ ಇಲ್ಲ, ನಜರ್‌ಬಾದ್‌ನ 'ಜಿಂಜರ್' ಹೋಟೆಲಿನಲ್ಲಿ ಮೂರ್ತಿ ಠಿಕಾಣಿ ಹೂಡಿದ್ದಾರಾದರೂ ಅಲ್ಲಿಗೆ ದೇವೇಗೌಡರಾದಿಯಾಗಿ ಯಾವುದೇ ಯಃಕಶ್ಚಿತ್ ಜೆಡಿಎಸ್ ಕಾರ್ಯಕರ್ತನೂ ಬಂದಿಲ್ಲ. ಒಂದೇ ಒಂದು ಹ[illegible] ಮೂರ್ತಿ ಭೇಟಿ ಕೊಟ್ಟಿಲ್ಲ. ಹಾಗೊಮ್ಮೆ ಯಾರಾದ[illegible] ಲಿಂಗಾಯತ ಪುಢಾರಿಗಳು ಗತಿಗೆಟ್ಟು ಅವರ ಸ[illegible] ಕೇಳಲು ಹುಡಕ್ಕೊಂಡು ಬಂದರೆ 'ಏನ್ರೀ [illegible] ಚುನಾವಣೆ ಏನ್ರೀ? ಆ ದ್ಯಾವೇಗೌಡ ಈ [illegible] ದುಡ್ಡನ್ನು ಅದೆಲ್ಲಿಂದ ತರ್ತಿದ್ದಾನೋ ನಾಕ[illegible] ಸತ್ಯವಾಗ್ಲೂ ನನ್ ಕೈಲಂತೂ ಆಗ್ತಿರಲಿಲ್ಲಪ್ಪ[illegible] ಎಂದು ಹೇಳಿದ್ದಾರೆ. ಅಲ್ಲಿಗೆ ಮೂರ್ತಿ[illegible] ಅಸಹನೆ ಎಂಥವರಿಗೂ ಅರ್ಥವಾಗಲೇಬೇ[illegible]

ಡಿಸೆಂಬರ್ 1ರ ಜೆಡಿಎಸ್ ಪ್ರ[illegible] ಸಭೆಗೆ ಕಮ್ಮಿಯೆಂದರೂ 50 ಸಾವಿರ [illegible] ಬರುತ್ತಾರೆಂಬ ನಿರೀಕ್ಷೆ ದೇವೇಗೌಡರಿ[illegible] ಅದರಲ್ಲೂ ಅಪಾರ ಸಂಖ್ಯೆಯಲ್ಲಿ ಮ[illegible] ಅಭಿಮಾನಿಗಳಿರುತ್ತಾರೆಂದೇ ನಂಬಿದ್ದರು. [illegible] ಬಂದದ್ದು ಮಾತ್ರ ಬರೇ ಹತ್ತು ಸಾವಿರ ಮ[illegible] ಒಂದೂವರೆ ಗಂಟೆ ತಡವಾಗಿ ಬಂದು [illegible] ಮೂರು ವಾಕ್ಯದಲ್ಲಿ ತಮ್ಮ ಭಾಷಣ ಮ[illegible] ವಾಪಸ್ಸಾದ ಮೂರ್ತಿಗಿಂತ ದೇವೇಗೌ[illegible] ಬೇರೆ ಶತ್ರುಗಳು ಬೇಕೆ?

ಒಂದು ಮೂಲದ ಪ್ರಕಾರ ವ[illegible] ಹೋಬಳಿಯ ಬಹುಪಾಲು ಲಿಂಗಾಯತ[illegible] ಈ ಹೊತ್ತಿಗಾಗಲೇ ಬನ್ನಿಪೇಟೆ [illegible] ಸೋಮಣ್ಣ ಕಾಂಗ್ರೆಸ್ಸಿನತ್ತ ಸೆಳೆದಾಗಿತ್ತು. [illegible] ಬಸಪ್ಪ ಲಿಂಗಾಯತನಾದರೂ ಆತ ಗ[illegible] ರಬ್ಬರ್‌ಸ್ಟ್ಯಾಂಪ್ ಎಂಬುದು ಲಿಂಗಾಯತ[illegible] ಅರ್ಥವಾಗಿತ್ತು.

ಸಿದ್ಧುಗೆ ಅಂಟಿದ ಜಾತಿ ಶಾಪ

ನೆನ್ನೆ ನಡುವಿನ ಎಲ್ಲ ಹೋರಾಟ ಜಗಳ ಕೊನೆಯಾಗುವುದು ಜಾತಿ ನಿಂದನೆಯಿಂದ. ಈ ಚಾಮುಂಡೇಶ್ವರಿ ಚುನಾವಣೆಯಲ್ಲಿ ನಡೆದಿರುವುದು ಅದೆ. ಜಾತಿ ಮನಸ್ಸಿನಿಂದ ಪತ್ರಕರ್ತರೂ ಹೊರತಾಗಿಲ್ಲ ಎಂಬುದಕ್ಕೊಂದು ಉದಾಹರಣೆ ಎಂದರೆ ಸಿದ್ದರಾಮಯ್ಯನ ಮನೆ ಸುತ್ತ ಇದ್ದ ಜನಗಳನ್ನು ನೋಡಿದ ಪತ್ರಕರ್ತನೊಬ್ಬ "ನೋಡಿ, ಸಿದ್ಧರಾಮಯ್ಯನ ಮನೆ ಸುತ್ತ ಬರೀ ಕುರುಬರೇ ಮುತ್ತಿಕೊಂಡಿದ್ದಾರೆ" ಎಂದ. ಆತನ ಉದ್ಗಾರಕ್ಕೆ ನಗಬೇಕೊ ಅಳಬೇಕೊ ತಿಳಿಯಲಿಲ್ಲ. ಏಕೆಂದರೆ ಯಾವುದೋ ಊರಿಂದ ಬಂದಿರುವ ಈ ಪತ್ರಕರ್ತ ಸಿದ್ಧರಾಮಯ್ಯನ ಮನೆ ಸುತ್ತ ಇದ್ದ ಜನಗಳನ್ನು ನೋಡಿದ ಮೂರೇ ನಿಮಿಷಕ್ಕೆ ಅವರೆಲ್ಲಾ ಕುರುಬರೆಂದು ಗ್ರಹಿಸಿದ್ದು ಅಚ್ಚರಿ ಮೂಡಿಸುವಂತಿತ್ತು. ಆತ ಮುಂದುವರಿದು, ಇಂತವನ್ನೆಲ್ಲಾ ಸಿದ್ಧರಾಮಯ್ಯ ಅವಾಯ್ಡ್ ಮಾಡಬೇಕೆಂದು ಸಲಹೆ ಕೊಟ್ಟ. ವಾಸ್ತವವಾಗಿ ಅಲ್ಲಿದ್ದ ಬಹುತೇಕ ಜನ ದಲಿತ ಸಂಘರ್ಷ ಸಮಿತಿಯವರೆಂದು ನಂತರ ತಿಳಿಯಿತು. ಅವರ ಬಣ್ಣ ಆಕಾರವನ್ನು ನೋಡಿದ ಪತ್ರಕರ್ತನ ಜಾತಿ ಮನಸ್ಸು ಅವರೆಲ್ಲಾ ಕುರುಬರೆಂದು ಗ್ರಹಿಸಿತ್ತು. ಪ್ರಗತಿ ಪರ ಮನಸ್ಸಿನವರೆಂದು ತಾವೇ ಹೇಳಿಕೊಳ್ಳುವ ಪತ್ರಕರ್ತರ ಕತೆಯೇ ಹೀಗಾದ ಮೇಲೆ ಇನ್ನು ದೇವೇಗೌಡರ ಪಡೆ ಜಾತಿ ವಿಷಯ ತೆಗೆದು ಹೋರಾಡುತ್ತಿರುವುದರಲ್ಲಿ ಯಾವ ಅಚ್ಚರಿಯೂ ಇಲ್ಲ.

ಸಿದ್ಧರಾಮಯ್ಯ ಹಾಕಿದ ತರೀಕೆರೆ ಅಭ್ಯರ್ಥಿಗೆ ಕುರುಬರೇ ಓಟಾಕದೆ ಸೋಲಿಸಿದ್ದಾರೆ. ಅಂದಮೇಲೆ ಕುರುಬರು ಸಿದ್ಧರಾಮಯ್ಯನ ಹಿಂದಿದ್ದಾರೆ ಎಂಬ ಮಾತು ಸತ್ಯಕ್ಕೆ ದೂರವಾದ ಸಂಗತಿ ಎಂದು ದೇವೇಗೌಡರೇ ಸಿದ್ಧರಾಮಯ್ಯ ಜೆಡಿಎಸ್ ತೊರೆದಾಗ ಹೇಳಿದ್ದರು. ಆದರೆ ಅದೇ ದೇವೇಗೌಡರು "ಚಾಮುಂಡೇಶ್ವರಿಯಲ್ಲಿ ಇಡೀ ಕುರುಬ ಸಮುದಾಯ ಸಿದ್ಧರಾಮಯ್ಯನ ಬೆನ್ನಿಗಿದ್ದು ಕೆಲ ಊರುಗಳಿಗೆ ನಮ್ಮವರನ್ನು ಬಿಡುತ್ತಿಲ್ಲ" ಎಂದಿದ್ದಾರೆ. ಅದೇ ಕುಮಾರಸ್ವಾಮಿ "ಕುರುಬ ಯುವಕರು ನಮ್ಮೊಡನಿದ್ದಾರೆ" ಎಂದಿದ್ದಾರೆ. ಕುಮಾರಸ್ವಾಮಿಯ ಈ ಮಾತಿನಲ್ಲಿ ಎಷ್ಟು ಸತ್ಯಾಂಶವಿದೆ ಎಂದರೆ ಪೊಲೀಸರಿಗೆ ಬೇಕಾದ ಕೆಲವು ಕುರುಬ ಹುಡುಗರೆಲ್ಲಾ ಕುಮಾರಸ್ವಾಮಿ ಹಿಂದಿದ್ದಾರೆ.



ಕುರುಬರಿಗೆ ತಡವಾಗಿಯಾದರೂ ಒಬ್ಬ ದೇವೇಗೌಡನಂತಹ ನಾಯಕ ಸಿಕ್ಕಿದ್ದಾನೆ. ಏಕೆಂದರೆ ಸಿದ್ಧರಾಮಯ್ಯ ತಯಾರಾದದ್ದೇ ದೇವೇಗೌಡರ ಗರಡಿಯಲ್ಲಿ. ಸಿದ್ಧರಾಮಯ್ಯನ ಸುತ್ತಮುತ್ತ ಮನೆ ಹತ್ತಿರ ಕುರುಬರು ಮುತ್ತಿಕೊಂಡರೆ ಅದರಲ್ಲಿ ಅಚ್ಚರಿಪಡುವಂತಹದ್ದೇನೂ ಇಲ್ಲ. ಒಂದು ವೇಳೆ ಅನ್ಯಜಾತಿಯವರು ಏನಾದರೂ ಅಂದುಕೊಂಡಾರೆಂಬ ಜಾಗೃತ ಮನಸ್ಸಿನಿಂದ ಕುರುಬರು ಸಿದ್ಧರಾಮಯ್ಯನಿಂದ ದೂರ ಇರುವುದಾದರೆ ಅದೆಷ್ಟು ಸರಿ. ಇಂತಹ ಮೂರ್ಖ ಪತ್ರಕರ್ತರಿಗೆ ಅಂಬರೀಷ್ ಸರಿಯಾದ ಉತ್ತರ ಕೊಡುತ್ತ ಹೋಗುತ್ತಿದ್ದರು. ಅಂಬರೀಷ್ ಪ್ರಕಾರ "ಸಿದ್ಧರಾಮಯ್ಯ ದೇವೇಗೌಡರ ಜೊತೆಯಲ್ಲಿ ಇರುವವರೆಗೂ ಸೆಕ್ಯುಲರ್ ನಾಯಕನಾಗಿದ್ದ ಆದರೆ ದೇವೇಗೌಡರಿಂದ ದೂರ ಹೋದ ಕ್ಷಣದಿಂದಲೇ ಜಾತಿವಾದಿಯಾಗಿ ಬರೀ ಕುರುಬರ ಲೀಡರ್ ಆದ. ಇದ್ದೇಗೇ ಸಾಧ್ಯ? ಒಂದು ವೇಳೆ ಸಿದ್ಧರಾಮಯ್ಯನಲ್ಲಿ ಅಂತಹ ಜಾತಿ ಬುದ್ಧಿ ತೀವ್ರವಾಗಿದ್ದರೆ 25 ವರ್ಷಗಳಿಂದ ಎಲ್ಲ ಜಾತಿ ಜನಗಳಿರುವ ಅದರಲ್ಲೂ ಲಿಂಗಾಯತರು, ಒಕ್ಕಲಿಗರು ಅಧಿಕ ಸಂಖ್ಯೆಯಲ್ಲಿರುವ ಚಾಮುಂಡೇಶ್ವರಿಯಲ್ಲಿ ಹೇಗೆ ಗೆಲ್ಲುತ್ತಿದ್ದರು?"

ಸಾಮಾನ್ಯ ರಾಜಕಾರಣಿಯಂತೆ ಕಾಣುವ ಅಂಬರೀಷ್ ಪ್ರಬುದ್ಧನಂತೆ ಮಾತನಾಡಿದರೆ, ಎಲ್ಲಾ ಸಿದ್ಧಾಂತವನ್ನು ಅರೆದು ಕುಡಿದ ಪತ್ರಕರ್ತರು ಕ್ಷುದ್ರವಾಗಿ ಯೋಚಿಸುತ್ತಾರೆ. ಕುರುಬರು ಸಾರಾ ಸಗಟು ಓಟು ಮಾಡಿಕೊಂಡು ತಮ್ಮ ಜಾತಿ ಅಭ್ಯರ್ಥಿಗಳನ್ನು ಗೆಲ್ಲಿಸಿ ಕೊಳ್ಳುವ ಸ್ಥಿತಿ ಇಡೀ ರಾಜ್ಯದ ಯಾವ ಕ್ಷೇತ್ರದಲ್ಲೂ ಇಲ್ಲ. ಬೇಕಾದರೆ ಅವರಿವರನ್ನು ಗೆಲ್ಲಿಸಿ ಕೊಡಬಲ್ಲರಷ್ಟೇ. ಈ ಸತ್ಯ ಮನಗಂಡೇ ದೇವೇಗೌಡರು ಒಲ್ಲೈಸಿಕೊಂಡು ಬಂದರು. ಈಗಂತೂ ಅವರು ನೇರ ಬಿಜೆಪಿ ಗರ್ಭಗುಡಿಯೆಡೆಗೆ ಹೆಜ್ಜೆ ಹಾಕುತ್ತಿರುವುದರಿಂದ [illegible] ರಂತಹ ಜಾತಿಗಳ ಅಗತ್ಯವಿಲ್ಲ. ಆ ಕಾರಣಕ್ಕೆ [illegible] ಜಾತಿ ಸಮರದ ಮಾತನಾಡುತ್ತಿದ್ದಾರೆ. ಇಂತಹ ಮಾತುಗಳನ್ನು ನಂಬುವ ಪತ್ರಕರ್ತರು ಗಮನಿಸಬೇಕಾದುದೇನೆಂದರೆ ಯಾವುದೇ ಮಾಹಿತಿಗಳ ಶೋಧನೆಯಲ್ಲಿ ಕಿಂಚಿತ್ ಜಾತಿ, ಪ್ರದೇಶ ಇತ್ಯಾದಿ ಭಾವುಕ ಸಂಗತಿಗಳ ಕಡೆ ವಾಲಿದರೆ ಸತ್ಯ ಗೋಚರಿಸುವುದಿಲ್ಲ. ತುಂಬಾ ಸೂಕ್ಷ್ಮಗೊಳ್ಳುತ್ತಿರುವ ಈ ಸಮಯದಲ್ಲಿ ಕೈಲಿ ಪೆನ್ನಿಡಿದಿರುವ ಜನ ಬಹಳ ಎಚ್ಚರಿಕೆಯಿಂದ ಯೋಚಿಸಿ ತೀರ್ಮಾನಿಸಬೇಕಾಗುತ್ತದೆ.

ಸದ್ಯದ ಪರಿಸ್ಥಿತಿ ಹೇಗಿದೆ ಎಂದರೆ ಕುವೆಂಪು ದಶಕಗಳ ಹಿಂದೆ ಹೇಳಿದ ಮಾತು ಇಂದು ಸಂಭವಿಸತೊಡಗಿದೆ. "ಈ ದೇಶ ಅಧಿಕಾರಶಾಹಿ ಮತ್ತು ಬಂಡವಾಳಶಾಹಿ ಹಾಗು ಪುರೋಹಿತಶಾಹಿಗಳ ಕೈಗೆ ಸಿಕ್ಕಿದರೆ ಇದರ ಕತೆ ಮುಗಿದಂತೆಯೇ" ಎಂದಿದ್ದರು. ಈಗ ದೇವೇಗೌಡರ ಕೈಗೆ ಅಧಿಕಾರಶಾಹಿ ಸಿಕ್ಕಿದೆ. ಅವರ ಇಡೀ ಕುಟುಂಬ ಬಂಡವಾಳಶಾಹಿಗಳಾಗಿದ್ದಾರೆ. ಈಗವರು ಪುರೋಹಿತಶಾಹಿಗಳ ಸಖ್ಯ ಬೆಳೆಸಿದ್ದಾರೆ. ಸದ್ಯದ ಕರ್ನಾಟಕ ತುಂಬ ಅಪಾಯಕರ ಸ್ಥಿತಿಯಲ್ಲಿದೆ. ಇಂತಹ ಸಮಯದಲ್ಲಿ ಜವಾಬ್ದಾರಿಯಿರುವ ಪತ್ರಕರ್ತರು ವಿಷಯಗಳನ್ನು ಸಂಗ್ರಹಿಸುವಾಗ ಎಚ್ಚರಿಕೆಯಿಂದ ವರ್ತಿಸಬೇಕು.

-ವರದಿಗಾರ

ದ್ವೇಷದ ಗುರು

ಒಬ್ಬ ಇತಿಹಾಸಜ್ಞನಿಗೆ ಇರುವ ಆವಶ್ಯಕ ಕರ್ತವ್ಯ ಏನೆಂದರೆ ಇತಿಹಾಸದ ಮೇಲೆ ಒಳ್ಳೆಯ ಪರಿಣಾಮ ಬೀರಿದ ವ್ಯಕ್ತಿಗಳನ್ನು ಗುರುತಿಸುವುದು ಮಾತ್ರವಲ್ಲದೇ ಇತಿಹಾಸದ ಮೇಲೆ ಅಹಿತಕರ ಪರಿಣಾಮ ಬೀರಿದವರ ಬಗ್ಗೆ ಕೂಡಾ (ಕೆಲವೊಮ್ಮೆ) ಬರೆಯುವುದು. ಅಹಿತಕರ ಪರಿಣಾಮ ಬೀರಿದ ಇಂಥಾ ಓರ್ವ ವ್ಯಕ್ತಿಯೇ ಹಿಂದೂ ಪ್ರತಿಪಾದಕ ಎಮ್.ಎಸ್.ಗೋಲ್ವಲ್ಕರ್. ಈ ವರ್ಷ ಇವರ ಜನ್ಮಶತಾಬ್ದಿಯನ್ನು ಇವರ ಹಿಂಬಾಲಕರು ಆಚರಿಸುತ್ತಿದ್ದಾರೆ.

1906ರ ಫೆಬ್ರವರಿಯಲ್ಲಿ ಜನಿಸಿದ ಗೋಲ್ವಲ್ಕರ್, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಕಲಿಕೆ ಮುಗಿಸಿ ಸ್ವಲ್ಪ ಕಾಲ ಅಲ್ಲಿಯೇ ಬೋಧಕರಾಗಿ ಕೆಲಸ ಮಾಡಿದರು. (ಹೀಗಾಗಿ ಅವರ ಹೆಸರಿಗೆ 'ಗುರು' ಎಂಬ ನಾಮಧೇಯದ ಸೇರ್ಪಡೆಯಾಯಿತು. ಮುಂದೆ ಬೋಧಕ ವೃತ್ತಿಯನ್ನು ತ್ಯಜಿಸಿದ ಮೇಲೂ ಅವರು ಈ ನಾಮಧೇಯವನ್ನು ಉಳಿಸಿಕೊಂಡರು) ತದನಂತರ ಓರ್ವ ವಿದ್ಯಾರ್ಥಿಯಾಗಿ ಆರ್.ಎಸ್.ಎಸ್. ಸೇರಿ, ಅದರ ಸಂಸ್ಥಾಪಕರಾದ ಡಾ.ಕೆ.ಬಿ.ಹೆಡ್ಗೆವಾರ್‌ರನ್ನು ಆಕರ್ಷಿಸುವುದರಲ್ಲಿ ಸಫಲರಾದರು. 1940ರಲ್ಲಿ ಡಾ.ಕೆ.ಬಿ. ಹೆಡ್ಗೆವಾರ್ ನಿಧನರಾದಾಗ ಗೋಲ್ವಲ್ಕರ್ ಆರ್.ಎಸ್.ಎಸ್.ನ ಸರಸಂಘಚಾಲಕರಾದರು. ತಮ್ಮ ನಿಧನದವರೆಗೂ, ಸುಮಾರು 30 ವರ್ಷಕಾಲ ಅದರ ಮುಖ್ಯಸ್ಥರಾಗಿ ಮುಂದುವರಿದಿದ್ದರು.

ಶಕ್ತಿ, ಉತ್ಸಾಹಗಳಿಂದ ತುಂಬಿದ, ಕ್ರಿಯಾಶೀಲ ಗೋಲ್ವಲ್ಕರ್ ಅವರ ನೇತೃತ್ವದಲ್ಲಿ ಆರ್.ಎಸ್.ಎಸ್.ನ ಸಾಮರ್ಥ್ಯ ಹಾಗೂ ಪ್ರಭಾವಗಳು ಅಭಿವೃದ್ಧಿಯಾಗುತ್ತಲೇ ಹೋಯಿತು. ಅವರ ಚಿಂತನೆಗಳು "ಬಂಚ್ ಆಫ್ ಥಾಟ್ಸ್" ಎನ್ನುವ ಪುಸ್ತಕದಲ್ಲಿ ವ್ಯಕ್ತವಾಗಿವೆ. ಈ ಚಿಂತನೆಗಳನ್ನು ದೇಶದ ವಿವಿಧ ಆರ್.ಎಸ್.ಎಸ್.ನ ಶಾಖೆಗಳಿಗೆ ಅವರು ನೀಡಿದ ಭಾಷಣಗಳಿಂದ ಸಂಗ್ರಹಿಸಲಾಗಿದೆ. ಈ ಪುಸ್ತಕದ ಪ್ರಕಾರ, ಈ ದೇಶದ ಮೇಲೆ ವಿಶೇಷವಾದ ಹಕ್ಕುಳ್ಳ ಸಮಾಜ ಎಂದರೆ ಅದು ಕೇವಲ ಹಿಂದೂಸಮಾಜ ಮಾತ್ರ. ಪ್ರಜಾತಾಂತ್ರಿಕ ವ್ಯವಸ್ಥೆಯು ಭಾರತೀಯ ಸಂಸ್ಕೃತಿಗೆ ಪರಕೀಯವಾದ ವ್ಯವಸ್ಥೆ ಎಂದು ಅದು ಜರೆಯುತ್ತದೆ ಮತ್ತು ಮನುವಿನಶಾಸ್ತ್ರವನ್ನು [illegible] ಮನುವನ್ನು ಜಗತ್ತಿನ ಪ್ರಥಮ, ಅತ್ಯಂತ [illegible] ಹಾಗೂ ಶ್ರೇಷ್ಠ ಕಾನೂನಿನ ಜನಕ ಎನ್ನುತ್ತದೆ. ಈ ಪುಸ್ತಕದ ಕೊನೆಯ ಕೆಲವು ಅಧ್ಯಾಯಗಳು [illegible] ಮತ್ತದರ [illegible] ಮತದ [illegible], [illegible] ಕೊಂಡಾಡುತ್ತವೆ. ಇದು, ಮುಂದಿನ ಅಧ್ಯಾಯಗಳಲ್ಲಿ ಉಲ್ಲೇಖವಾಗಿರುವ, ಹಿಂದೂಗಳಾಗಿ [illegible] ದೌರ್ಭಾಗ್ಯಕ್ಕೆ ಒಳಗಾದ, ಇತರ [illegible] "ರಾಕ್ಷಸ"ರೆಂದು ಚಿತ್ರಿಸುವುದರ [illegible] ಒಂದು ಹೆಜ್ಜೆ. ಗೋಲ್ವಲ್ಕರ್ ಬರೆಯುತ್ತಾರೆ "ದೇಶದ ಭದ್ರತೆಗೆ ಹೊರಗಿನ ಆಕ್ರಮಣಕಾರರಿಗಿಂತಲೂ ಹೆಚ್ಚಿನ ಆಪತ್ತು ಇರುವುದು ಒಳಗಿರುವ ವಿರೋಧಿಗಳಿಂದ. ಮೂರು ಮುಖ್ಯ ಆಂತರಿಕ ಆಪತ್ತುಗಳೆಂದರೆ 1. ಮುಸ್ಲಿಮರು 2. ಕ್ರೈಸ್ತರು 3. ಕಮ್ಯೂನಿಸ್ಟರು" ಎಂದು ಪಟ್ಟಿ ಮಾಡುತ್ತಾರೆ. ಮುಂದಿನ ಒಂದು ದೊಡ್ಡ ಅಧ್ಯಾಯದಲ್ಲಿ ಈ ಮೂರೂ ಗುಂಪುಗಳ ರಾಷ್ಟ್ರ ಪ್ರೇಮವನ್ನು ಪ್ರಶ್ನಿಸುತ್ತಾ ಇವುಗಳು ಮುಂದೆ ಭಾರತದ ಮೇಲೆ ಆಕ್ರಮಣವಾದ ಉದ್ದೇಶವನ್ನು ಹೊಂದಿವೆ ಎನ್ನುತ್ತಾರೆ.


1948ರ ಜನವರಿ 30 ರಂದು ನಾಥೂರಾಮ್ ಗೋಡ್ಸೆ ಗಾಂಧೀಜಿಯವರನ್ನು ಗುಂಡಿಟ್ಟು ಕೊಂದ. ಈ ಕೊಲೆ ಮಾಡುವ ಸಮಯದಲ್ಲಿ ಅವನು ಆರ್.ಎಸ್.ಎಸ್.ನ ಸದಸ್ಯನಾಗಿರಲಿಲ್ಲವಾದರೂ ಅದಕ್ಕೆ ಮೊದಲು ಆರ್.ಎಸ್.ಎಸ್.ನ ಸದಸ್ಯನಾಗಿದ್ದ. ಅಂದಿನ ಪತ್ರಿಕೆಗಳಲ್ಲಿ ವರದಿಯಾದ ಪ್ರಕಾರ, ಗಾಂಧೀಜಿಯ ಹತ್ಯೆಯ ಸುದ್ದಿ ತಿಳಿದೊಡನೇ ಆರ್.ಎಸ್.ಎಸ್.ನ ಸದಸ್ಯರುಗಳು ಸಿಹಿ ಹಂಚಿಕೊಂಡು ಸಂಭ್ರಮಿಸಿದ್ದರು. *(ಮಂಗಳೂರಿನಲ್ಲೂ ಸಿಹಿ ಹಂಚುವ ಈ ಕಾರ್ಯಕ್ರಮ ನಡೆದಿತ್ತು.- ಅನುವಾದಕ)* ಪ್ರತಿಬಂಧಕ ಕ್ರಮವಾಗಿ ಗೋಲ್ವಲ್ಕರ್ ಮತ್ತು ಇತರ ಆರ್.ಎಸ್.ಎಸ್. ಕಾರ್ಯಕರ್ತರನ್ನು ಬಂಧಿಸಿ ಜೈಲಿಗೆ ತಳ್ಳಲಾಯಿತು.

ಇವಿಷ್ಟು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ವಿಚಾರ.

ಆದರೆ ಇಂದು, ಈಗ ಲಭ್ಯವಿರುವ ಕೆಲವು ರಹಸ್ಯ ದಾಖಲೆಗಳಲ್ಲಿರುವ ಮಾಹಿತಿಗಳ ಪ್ರಕಾರ, ಗಾಂಧಿಯ ಹತ್ಯೆಯಲ್ಲಿ ಆರ್.ಎಸ್.ಎಸ್.ನ ನೇರ ಭಾಗಿತ್ವ ಇರದಿದ್ದರೂ ಅದರ ನಾಯಕತ್ವ ಅಂಥದ್ದೊಂದು ಘಟನೆಗೆ ವಿರೋಧಿಯಾಗಿರಲಿಲ್ಲ ಎಂಬುದು ಗಮನಾರ್ಹ.

ಗೋಲ್ವಲ್ಕರ್ 1947ರ ಡಿಸೆಂಬರ್ 6 ರಂದು ನವದೆಹಲಿಯಿಂದ ಅನತಿ ದೂರದಲ್ಲಿರುವ ಗೋವರ್ಧನ್ ಎಂಬ ಊರಿನಲ್ಲಿ ಆರ್.ಎಸ್.ಎಸ್. ಕಾರ್ಯಕರ್ತರ ಸಭೆಯೊಂದನ್ನು ಕರೆದರು. ಈ ಸಭೆಯ ಪೊಲೀಸ್ ವರದಿ ಹೇಳುವಂತೆ "ಜನರನ್ನು ಭಯಭೀತರನ್ನಾಗಿಸಿ ಅವರ ಮೇಲೆ ನಿಯಂತ್ರಣ ಸಾಧಿಸುವುದರ ಕುರಿತು ಕಾಂಗ್ರೆಸ್‌ನ ಕೆಲವು ಧುರೀಣರನ್ನು ಕೊಲೆಗೈಯುವ ವಿಧಾನಗಳೇನು" ಎಂಬ ಕುರಿತು ಈ ಸಭೆಯಲ್ಲಿ ಚರ್ಚಿಸಲಾಯಿತು. ಭಾಗಶಃಗಿಯೂ ಈ ದೇಶದಲ್ಲಿ ಎಂದೋ ಭಯೋತ್ಪಾದನೆಯನ್ನು ಹುಟ್ಟುಹಾಕಿ ಈಗಲೂ ಅದನ್ನು ಮುಂದುವರಿಸಿಕೊಂಡು ಬರುತ್ತಿರುವವರು ಯಾರೆಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೇ?- ಅನುವಾದಕ)

ಇದಾದ ಎರಡು ದಿನಗಳ ನಂತರ ಗೋಲ್ವಲ್ಕರ್ ನವದೆಹಲಿಯ ರೋಹ್ತಕ್ ರೋಡ್ ಕ್ಯಾಂಪಿನಲ್ಲಿ ನೆರೆದ ಸಾವಿರಾರು ಮಂದಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತಾಡಿದರು. ಈ ಸಭೆಯಲ್ಲಿದ್ದ ಪೊಲೀಸ್ ವರದಿಗಾರ ದಾಖಲಿಸಿದಂತೆ "ಆರ್.ಎಸ್.ಎಸ್.ನ ಮುಖಂಡ ಹೇಳಿದರು - ಪಾಕಿಸ್ತಾನವನ್ನು ನಾಶಮಾಡುವ ತನಕ ಸಂಘವು ಅವಿಶ್ರಾಂತವಾಗಿ ಕಾರ್ಯಾಚರಿಸುವುದು. ನೆಹರೂ ಸರ್ಕಾರವಾಗಲೀ ಅಥವಾ ಇತರ ಯಾವುದೇ ಸರ್ಕಾರವಾಗಲಿ ನಮಗೇನಾದರೂ ಅಡ್ಡಿಪಡಿಸಿದರೆ ನಾವು ಅವರನ್ನೂ ಮುಗಿಸಿಬಿಡುವೆವು... ಈ ಲೋಕದ ಯಾವ ಶಕ್ತಿಯೂ ಮುಸ್ಲಿಮರನ್ನು ಹಿಂದುಸ್ತಾನದಲ್ಲಿ ಉಳಿಸಿಕೊಳ್ಳಲಾರದು. ಅವರು (ಮುಸ್ಲಿಮರು) ಈ ದೇಶವನ್ನು ಬಿಟ್ಟು ತೊಲಗಬೇಕಾಗುತ್ತದೆ. ಮತ್ತೂ ಕೂಡಾ ಅವರನ್ನು ಇಲ್ಲಿಯೇ ಉಳಿಸಿಕೊಂಡರೆ ಅದರ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕಾಗುತ್ತದೆ ಹೊರತು ಹಿಂದುಸಮಾಜವಲ್ಲ. ಹಿಂದುಗಳನ್ನು ದಾರಿ ತಪ್ಪಿಸಲು ಮಹಾತ್ಮ ಗಾಂಧಿಗೆ ಇನ್ನು ಮುಂದೆ ಸಾಧ್ಯವಿಲ್ಲ. ನಮ್ಮ ವಿರೋಧಿಗಳನ್ನು ತಕ್ಷಣ ಸ್ತಬ್ಧಗೊಳಿಸುವ ಕಾರ್ಯವಿಧಾನಗಳು ನಮ್ಮಲ್ಲಿ ಲಭ್ಯವಿವೆ."



ಇದಾದ ಆರು ವಾರಗಳಲ್ಲಿ ಮಹಾತ್ಮಗಾಂಧಿಯ ಹತ್ಯೆ ನಡೆಯಿತು; ಗೋಲ್ವಲ್ಕರ್ ಮತ್ತವರ ಸಂಗಡಿಗರನ್ನು ಬಂಧಿಸಿ ಕಾರಾಗೃಹಕ್ಕೆ ಕಳುಹಿಸಲಾಯಿತು. ಒಂದು ವರ್ಷದ ಬಳಿಕ ಸನ್ನಡತೆಯ ಮುಚ್ಚಳಿಕೆ ಬರೆದುಕೊಟ್ಟ ನಂತರವೇ ಅವರನ್ನೆಲ್ಲ ಬಿಡುಗಡೆ ಮಾಡಲಾಯಿತು. ಆದರೂ ಅವರು ತಮ್ಮ ನಿಲುವುಗಳಿಗೆ ಪಟ್ಟು ಬಿಡದ ಬದ್ಧತೆಯನ್ನು ಉಳಿಸಿಕೊಂಡಿದ್ದರು. ಗೋಲ್ವಲ್ಕರ್ ಸ್ವತಃ ವಾದಿಸುತ್ತಾರೆ: "ಈ ನೆಲದಲ್ಲಿ ಹಿಂದುಗಳೇ ಒಡೆಯರು. ಪಾರ್ಸಿಗಳು ಮತ್ತು ಯಹೂದಿಗಳು ಇಲ್ಲಿನ ಅತಿಥಿಗಳು ಮತ್ತು, ಮುಸ್ಲಿಮರು ಹಾಗೂ ಕ್ರೈಸ್ತರು ದರೋಡೆಕೋರರು. ಹೀಗಿರುವಾಗ ಇವರೆಲ್ಲರಿಗೂ ಈ ದೇಶದ ಮೇಲೆ ಸಮಾನ ಹಕ್ಕು ಹೇಗೆ ಸಾಧ್ಯ?" ಎಂದು ದುರುದ್ದೇಶಪೂರಿತವಾಗಿ ಕೇಳುತ್ತಾರೆ.

ಗೋಲ್ವಲ್ಕರ್ ಮುಸ್ಲಿಮರು, ಕ್ರೈಸ್ತರು, ಕಮ್ಯೂನಿಸ್ಟ್ ಮತ್ತಿತರರನ್ನು ಈ ದೇಶಕ್ಕೆ ಗಂಡಾಂತರ ಎಂದೇ ಕಾಣುತ್ತಿದ್ದರು. ಆದರೆ ಉಳಿದೆಲ್ಲ ಭಾರತೀಯರು ಗೋಲ್ವಲ್ಕರ್ ಮತ್ತು ಅವರಂಥವರನ್ನು "ನಮ್ಮ ಈ ಜಾತ್ಯತೀತ ದೇಶಕ್ಕೆ ದೊಡ್ಡ ಅಪಾಯ" ಎಂದೇ ಭಾವಿಸುತ್ತಿದ್ದರು. 1956 ರಲ್ಲಿ ಮುಂಬಯಿಯ ಪತ್ರಕರ್ತ ಡಿ.ಎಫ್. ಕರಕ ಎಂಬವರು ಇದೇ ಶಿರೋನಾಮೆಯಲ್ಲಿ ಗೋಲ್ವಲ್ಕರ್ ಬಗ್ಗೆ ಒಂದು ಲೇಖನವನ್ನು ಬರೆದರು. ಕರಕ ಆಗಿನ ಪ್ರಧಾನಮಂತ್ರಿಗಳ ವಿರುದ್ಧವೂ ನಿರ್ಭೀತವಾಗಿ ಟೀಕೆ ಮಾಡುತ್ತಿದ್ದವರು. ಆ ಲೇಖನದಲ್ಲಿ ಕರಕ ಹೇಳಿದರು, "ಈ ಆರ್.ಎಸ್.ಎಸ್.ನ ಮುಖಂಡನ ಯೋಚನೆಗಳೆಲ್ಲ ಬರೀ ಹಿಂದೂ ಇಂಡಿಯಾವನ್ನೇ ಕುರಿತಾಗಿವೆ..... ನಮ್ಮ ಮತ್ತು ಪ್ರಧಾನಿಗಳ ನಡುವೆ ಭಿನ್ನಾಭಿಪ್ರಾಯಗಳೇನೇ ಇದ್ದರೂ ಒಂದು ವಿಷಯದ ಬಗ್ಗೆ ನಾವೆಲ್ಲರೂ ಅವರೊಂದಿಗೆ ದೃಢವಾಗಿ ನಿಲ್ಲುವ ಅಗತ್ಯವಿದೆ; ಅದೇನೆಂದರೆ - ನಮ್ಮದೊಂದು ಜಾತ್ಯತೀತ ರಾಷ್ಟ್ರವಾಗಿದೆ ಮತ್ತು ಹಿಂದೂ, ಮುಸ್ಲಿಂ, ಪಾರ್ಸಿ, ಕ್ರೈಸ್ತ ಮತಕ್ಕೆ ಸೇರಿದ ನಾವೆಲ್ಲರೂ ನಮ್ಮ ಸಂವಿಧಾನವು ಕೊಡ ಮಾಡಿದ ಮತೀಯ ಸ್ವಾತಂತ್ರ್ಯವನ್ನು ಆರ್.ಎಸ್.ಎಸ್.ನ ಬಲಿಪೀಠದಲ್ಲಿ ಬಲಿಯಾಗಲು ಬಿಡಕೂಡದು. ಇದೇ ಆರ್.ಎಸ್.ಎಸ್. ಎಂಬ ಸಂಸ್ಥೆಯಿಂದಲೇ ಬಂದೋರ್ವ ಮನುಷ್ಯನು ಮಹಾತ್ಮ ಗಾಂಧಿಯವರನ್ನು ಕೊಲೆಗೈದಿದ್ದಾನೆ."


ಇದನ್ನು ಕರಕರು ಬರೆದದ್ದು ಆರ್.ಎಸ್.ಎಸ್. ಗೋಲ್ವಲ್ಕರ್‌ರ 50ನೇ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ. ಈ ವರ್ಷ ಆರ್.ಎಸ್.ಎಸ್. ಗೋಲ್ವಲ್ಕರ್‌ರ 100ನೇ ಹುಟ್ಟುಹಬ್ಬವನ್ನು ಆಚರಿಸುತ್ತ ಇರುವಾಗ ಕರಕರು ಅಂದು ಬರೆದದ್ದನ್ನು ದೃಢೀಕರಿಸಿ ಸಹಮತ ವ್ಯಕ್ತಪಡಿಸುವುದೇ ನಾವು ಮಾಡಬೇಕಾಗಿರುವ ಕೆಲಸ.

ಗೋಲ್ವಲ್ಕರ್ ದ್ವೇಷದ ಗುರುವಾಗಿದ್ದರು; ತನ್ನ ಜೀವನದುದ್ದಕ್ಕೂ ಇತರರಿಗೆ ಕೇಡೆಣಿಸುವ, ಮತ್ತು - ಜವಹರ್‌ಲಾಲ್ ನೆಹರೂ ಅದ್ಭುತವಾಗಿ ಹೇಳಿದಂತೆ - ಭಾರತವನ್ನು "ಹಿಂದೂ ಪಾಕಿಸ್ತಾನ"ವನ್ನಾಗಿ ಪರಿವರ್ತಿಸುವ [illegible] ಕಾರ್ಯಾಚರಿಸಿದರು. ಆ ಯೋಜನೆಗೆ ಇನ್ನೂ ಜಯ [illegible]

[illegible]

[illegible] ಸುರೇಶ್ [illegible]

ಚಿತ್ರದುರ್ಗ: ಸಮಾಜಕಲ್ಯಾಣ ಇಲಾಖೆ ತಿಂದು ತೇಗುತ್ತಿರುವ ಬಾಲಕೃಷ್ಣ



ಇಲಾಖೆಯನ್ನು ಹಳ್ಳಹಿಡಿಸಿದ ಬಾಲಕೃಷ್ಣ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಗಡದ್ದಾಗಿ ಉಣ್ಣಲು ಕುಂತಿದ್ದ ಎಚ್.ಆರ್. ಬಾಲಕೃಷ್ಣ ಊರು ಬಿಡುವ ಲಕ್ಷಣಗಳು ಕಾಣಿಸುತ್ತಿವೆ. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾಗಿದ್ದ ಈತ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ತಿಂಗಳೊಪ್ಪತ್ತಿಗೆ ಕಚೇರಿಯನ್ನು ಫಿಷ್ ಮಾರ್ಕೆಟ್ಟಿನಂತೆ ಪರಿವರ್ತಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ.

ಕೆಲವೇ ತಿಂಗಳ ಹಿಂದೆ ಪ್ರಭಾರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಗಡದ್ದಾಗಿ ಉಣ್ಣಲು ಕುಂತಿದ್ದ ಎಚ್.ಆರ್. ಬಾಲಕೃಷ್ಣ ಊರು ಬಿಡುವ ಲಕ್ಷಣಗಳು ಕಾಣಿಸುತ್ತಿವೆ. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾಗಿದ್ದ ಈತ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ತಿಂಗಳೊಪ್ಪತ್ತಿಗೆ ಕಚೇರಿಯನ್ನು ಫಿಷ್ ಮಾರ್ಕೆಟ್ಟಿನಂತೆ ಪರಿವರ್ತಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ತನ್ನ ಅಧಿಕಾರ ವ್ಯಾಪ್ತಿ ಏನು? ಅಧೀನ ನೌಕರರ ಕೆಲಸ ಏನು? ಯಾವ ಕೆಲಸ ಯಾವಾಗ ಮಾಡಬೇಕು? ಯಾವುದಕ್ಕೆ ಆದ್ಯತೆ ನೀಡಬೇಕು ಎಂಬಂತಹ ಸಾಮಾನ್ಯ ತಿಳಿವಳಿಕೆಯೂ ಈತನಿಗಿಲ್ಲ, ಅಸಲಿಗೆ ಈತನಿಗೆ ಕಚೇರಿಯ ಕೆಲಸವೆಂದರೆ ಅಲರ್ಜಿ.


ಹಾಸ್ಟಲ್ ವ್ಯವಹಾರಗಳು, ಡೀಲಿಂಗುಗಳಲ್ಲಿ ಪಳಗಿರುವ ಪ್ರಥಮ ದರ್ಜೆ ಗುಮಾಸ್ತನೊಬ್ಬನನ್ನು ಸದಾ ಜೊತೆಗಂಟಿಸಿಕೊಂಡು ಶಾಲಾ-ಕಾಲೇಜು ಹಾಸ್ಟಲು ವಾರ್ಡನ್ನುಗಳ ಬೆನ್ನತ್ತಿ ಪರ್ಸೆಂಟೇಜ್ ವಸೂಲಿ ಮಾಡುವುದನ್ನೇ ಕಾಯಕವಾಗಿಸಿಕೊಂಡಿದ್ದಾನೆ. ಡಿಸ್ಟಿಕ್ಟ್ ಇನ್‌ಛಾರ್ಜ್ ಆಗಿರುವುದರಿಂದ ಎಲ್ಲಾ ತಾಲ್ಲೂಕುಗಳಿಂದ ಸೇರಿ ಲಕ್ಷಾಂತರ ರೂ. ಕಮಾಯಿ ಬರುತ್ತದೆ. ಇನ್ನು ಲೋನು-ಸಬ್ಸಿಡಿ ಸ್ಕೀಮುಗಳು ಇತ್ಯಾದಿ ಬಾಬ್ತಿನ ಕಮಾಯಿ ಬೇರೆ. ಇಂಥ ದಂಧೆಯಿಂದ ಗಳಿಸಿದ್ದರಲ್ಲಿ ಹಿರಿಯೂರಿನಲ್ಲಿ ಹದಿನೈದಿಪ್ಪತ್ತು ಲಕ್ಷ ರೂ. ಮೌಲ್ಯದ ಮನೆ ಕಟ್ಟಿಸಿಕೊಂಡಿದ್ದಾನೆ. ಹಿರಿಯೂರು-ಶಿರಾ ಮಧ್ಯೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಐದಾರು ಎಕರೆ ಜಮೀನು ಅಭಿವೃದ್ಧಿಪಡಿಸುತ್ತಿದ್ದಾನೆ. ಹೆದ್ದಾರಿ ಬದಿಯಲ್ಲಿ ಡಾಬಾ ಟೀ ಶಾಪುಗಳನ್ನು ಹಾಕಿಕೊಳ್ಳಲು ಅವಕಾಶ ಕೊಟ್ಟು ತಿಂಗಳಿಗೆ ಹದಿನೈದು ಇಪ್ಪತ್ತು ಸಾವಿರ ಪೀಕುತ್ತಾನೆ. ಶ್ರೀಮತಿ ಹಿರಿಯೂರಿನ ತಾಲ್ಲೂಕಿನಲ್ಲಿ ಮೂರು ಶಾಲಾ ಹಾಸ್ಟಲುಗಳನ್ನು ನಡೆಸುತ್ತಿದ್ದಾರೆ ಅಲ್ಲೂ ಸಹ ಹದಿನೈದಿಪ್ಪತ್ತು ಸಾವಿರ ಆದಾಯ. ಸಾಕ್ಷಾತ್ ಪತಿ ದೇವರೇ ಡಿಸ್ಟಿಕ್ಟ್ ಇನ್‌ಚಾರ್ಜ್ ಆಗಿರುವಾಗ ಈಯಮ್ಮನಿಗೆ ಅಡ್ಡಿಪಡಿಸೋರು ಯಾರು? ಇಷ್ಟೆಲ್ಲಾ ಆದಾಯವಿರುವ ಬಾಲಕೃಷ್ಣನ ನೆಮ್ಮದಿಗೆ ಇನ್ನೇನು ಬೇಕು.

ಬಾಲಕೃಷ್ಣನ ಹಿನ್ನೆಲೆ

ವೆಲ್‌ಫೇರ್ ಇನ್ಸ್‌ಪೆಕ್ಟರ್ ಆಗಿ ಇಲಾಖೆಗೆ ವಕ್ಕರಿಸಿಕೊಂಡ ಬಾಲಕೃಷ್ಣ ಜಗಳೂರು, ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ ಮತ್ತೆ ಚಿತ್ರದುರ್ಗ- ಹೀಗೆ ರೌಂಡ್ ಅಪ್ ಮಾಡಿದ್ದಾನೆ. ಮ್ಯೂಸಿಕಲ್ ಛೇರ್ ಶೈಲಿಯ ಈ ಸುತ್ತಾಟದಲ್ಲಿ ಬಾಲಕೃಷ್ಣ ಪಳಗಿದ್ದಾನೆ. ತಾನು ಕೆಲಸ ಮಾಡಿದಲ್ಲೆಲ್ಲಾ ತನ್ನ ಖತರ್‌ನಾಕ್ ಕಾರ್ಯಶೈಲಿಯಿಂದ ಕುಖ್ಯಾತಿ ಪಡೆದಿದ್ದಾನೆ. ಇದಕ್ಕೆ ತಕ್ಕಂತೆ ರಾಜಕಾರಣಿಗಳ ಬಾಲ ಹಿಡಿಯುವುದು, ಸಮಯ ಬಂದರೆ ಕಾಲು ಹಿಡಿಯುವುದು, ಸಂಘ-ಸಂಸ್ಥೆಗಳ ಮುಖಂಡರು, ಪತ್ರಕರ್ತರನ್ನು ಓಲೈಸುವುದು.... ಹೀಗೆ ಎಲ್ಲವನ್ನೂ ಕರಗತ ಮಾಡಿಕೊಂಡಿದ್ದಾನೆ.

ಕಚೇರಿ ಮೂರಾಬಟ್ಟೆಯಾಯ್ತು

ಯಾವಾಗ ಬಾಲಕೃಷ್ಣ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾಗಿ ವಕ್ಕರಿಸಿದನೋ ಇಡೀ ಕಚೇರಿಯೆಂಬುದು ಮೂರಾಬಟ್ಟೆಯಾಯ್ತು. ಯಾರು ಯಾವಾಗ ಬೇಕಾದರೂ ಬರಬಹುದು. ಹೇಗಾದರೂ ಕೆಲಸ ಮಾಡಬಹುದು. ತನಗೆ ಬರಬೇಕಾದ ಕಮಾಯಿ ಬಂದರೆ ಧನ್ಯ. ಯಾವ್ಯಾವುದೋ ಊರಿನಲ್ಲಿ ಕೆಲಸ ಮಾಡುತ್ತಿದ್ದ ಏಳು ಜನ ಡಿ ಗ್ರೂಪ್ ನೌಕರರು ಬ್ರೋಕರ್‌ಗಿರಿ ಮಾಡಿಕೊಂಡಿದ್ದರೆಂದರೆ ಬಾಲಕೃಷ್ಣನ ಕಾರ್ಯವೈಖರಿ ಹೇಗಿದ್ದಿರಬಹುದು ಸುಮ್ಮನೆ ಊಹಿಸಿಕೊಳ್ಳಿ.



ಕಳೆದ ಫೆಬ್ರವರಿಯಲ್ಲಿ ಕಚೇರಿಗೆ ದಿಢೀರ್ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಅಮರನಾರಾಯಣ ಈತನ ಕಾರ್ಯವೈಖರಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಕಚೇರಿಯಲ್ಲಿ ಅನಧಿಕೃತ ವ್ಯಕ್ತಿಗಳು ಕಾರ್ಯನಿರ್ವಹಿಸುವುದು, ವಿದ್ಯಾರ್ಥಿವೇತನ ನೀಡಿಕೆಯಲ್ಲಿ ತಾರತಮ್ಯ, ವಿಶೇಷ ಘಟಕ ಯೋಜನೆಯಡಿ ನಿರ್ದಿಷ್ಟ ಫಲಾನುಭವಿಯ ಹೆಸರೇ ಇಲ್ಲದೇ ಖಾಲಿ ಆದೇಶಕ್ಕೆ ಸಹಿ ಮಾಡಿರುವುದು ಸೇರಿದಂತೆ ಇಲಾಖೆಯಲ್ಲಿನ ಆಡಳಿತಾತ್ಮಕ ವೈಫಲ್ಯದ ದಿಗ್ದರ್ಶನವೇ ಆಗಿತ್ತು. ಜಿಲ್ಲಾಧಿಕಾರಿಗಳ ವಿಚಾರಣೆಯ ಸಂದರ್ಭದಲ್ಲಿ ಪೂರ್ತಿ ವಿಡಿಯೋ ಚಿತ್ರೀಕರಣ ಮಾಡಲಾಗಿತ್ತು.

ಫೆಬ್ರವರಿ ಕೊನೇ ವಾರದಲ್ಲಿ ನಡೆದ ಜಿಲ್ಲಾ ಪಂಚಾಯ್ತಿ ಸಾಮಾನ್ಯ ಸಭೆಯಲ್ಲಿ ಬಾಲಕೃಷ್ಣನ ಎಪಿಸೋಡೆ ಗಂಟೆಗಳ ಸಮಯವನ್ನು ತಿಂದು ಹಾಕಿತು. ಆಗ ಸಮಾಜ ಕಲ್ಯಾಣಾಧಿಕಾರಿಯಾಗಿದ್ದ ಮಲ್ಲಿಕಾರ್ಜುನ್ ಬಾಲಕೃಷ್ಣನನ್ನು ನಿರ್ಲಜ್ಜವಾಗಿ ಸಮರ್ಥಿಸಿಕೊಂಡಿದ್ದ. ಆದರೆ ಈತ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಈತನ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕೆಂಬ ತೀರ್ಮಾನ ಆಗೇ ಹೋಯಿತು.

ಶಿಸ್ತುಕ್ರಮವೆಂಬ ನಾಟಕ

ಬಾಲಕೃಷ್ಣನ ಕಾರ್ಯವೈಖರಿಯ ಬಗ್ಗೆ ತನಿಖೆ ಮಾಡಿದ ಜಿಲ್ಲಾ ಪಂಚಾಯ್ತಿ ಆಡಳಿತ ವಿಭಾಗದ ಡಿ.ಎಸ್. ಹಾಗೂ ತಾಲ್ಲೂಕು ಇ.ಓ.ರವರು ಪ್ರಾಥಮಿಕ ತನಿಖಾ ವರದಿಯಲ್ಲಿ ನೌಕರರ ಬೇಜವಾಬ್ದಾರಿತನ, ಅಸಡ್ಡೆ ಕರ್ತವ್ಯ ನಿರ್ಲಕ್ಷ್ಯದಿಂದಾಗಿ ಕಚೇರಿಯ ಆಡಳಿತ ಅಸ್ತವ್ಯಸ್ತಗೊಂಡಿದೆಯೆಂದು ದಾಖಲಿಸಿದರು. ಈ ವರದಿ ಆಧರಿಸಿ ಜಿ.ಪಂ., ಸಿಇಓ ನಾರಾಯಣಸ್ವಾಮಿ ಈ ಬಗ್ಗೆ ಆದೇಶವೊಂದನ್ನು ಹೊರಡಿಸಿ (ಆದೇಶ ನಂ: ಜಿಪ: ಆ(3) ಸಿಸಿಐ: ಸಿಆರ್2:6-7, ದಿ 22.6.06) ಎಚ್.ಆರ್. ಬಾಲಕೃಷ್ಣ ಮತ್ತು ಬಾಲಕೃಷ್ಣನಿಗೆ ವಸೂಲಿ ದಂಧೆಯಲ್ಲಿ ಸಾಥ್ ನೀಡುತ್ತಿರುವ ಪ್ರಥಮ ದರ್ಜೆ ಗುಮಾಸ್ತನೊಬ್ಬನದೂ ಸೇರಿದಂತೆ ವಾರ್ಷಿಕ ಬಡ್ತಿಯೊಂದನ್ನು ತಡೆಹಿಡಿದು ದಂಡನೆ ವಿಧಿಸಿದ್ದರು. ಬಾಲಕೃಷ್ಣನ ದಂಧೆಗಳ ವರಸೆಗಳನ್ನು ನೋಡಿದ್ದವರು ಒಂದಿಷ್ಟು ಸಮಾಧಾನ ಪಟ್ಟುಕೊಂಡಿದ್ದರು.

ವೀರಣ್ಣ ಹೋದ ಬಾಲಕೃಷ್ಣ ಬಂದ

ಮಲ್ಲಿಕಾರ್ಜುನ್ ಮಾತ್ರ ಇಲಾಖೆಗೆ ಹೋಗುತ್ತಿದ್ದಂತೆ ಹಿಂದೆ ಚಿತ್ರದುರ್ಗದಲ್ಲಿ ಬಿಸಿಎಂ ಆಫೀಸರ್ ಆಗಿದ್ದ ವೀರಣ್ಣ ಲಕ್ಷಾಂತರ ಖರ್ಚು ಮಾಡಿಕೊಂಡು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯಾಗಿ ಬಂದು ಕುಳಿತಿದ್ದ. ಈತನೇನೂ ಸಾಚಾ ಅಲ್ಲವಾದರೂ ಕಚೇರಿಯ ಆಡಳಿತಾತ್ಮಕ ವಿಚಾರಗಳಲ್ಲಿ ಒಂದಿಷ್ಟು ಬಿಗಿ ನಿಲುವುಗಳನ್ನು ತೆಗೆದುಕೊಂಡಿದ್ದ. ಮಧ್ಯವರ್ತಿಗಳನ್ನು ಕಛೇರಿಯ ಮೆಟ್ಟಲು ಹತ್ತದಂತೆ ನೋಡಿಕೊಂಡಿದ್ದ. ಇದು ಸಮಾಜ ಕಲ್ಯಾಣ ಇಲಾಖೆಯನ್ನೇ ಆದಾಯದ ಮೂಲಗಳನ್ನಾಗಿರಿಸಿಕೊಂಡಿದ್ದ ಅಬ್ಬೆಪಾರಿಗಳ ಕಣ್ಣನ್ನು ಕೆಂಪಗಾಗಿಸಿತ್ತು. ಅಷ್ಟರಲ್ಲೇ ಸ್ಫೂರ್ತಿ ಇನ್ಫೋಟೆಕ್‌ನ ಶೆಟ್ಟಿ ಕಂಪ್ಯೂಟರ್ ತರಬೇತಿಯ ಶಿಷ್ಯವೇತನ ಬಿಡುಗಡೆಗೆ ಲಂಚ ಕೇಳಿದ್ದನೆಂದು ದೂರು ನೀಡಿ ವೀರಣ್ಣನನ್ನು ಆತನ ಮನೆಯಲ್ಲೇ ಲೋಕಾಯುಕ್ತರಿಂದ ಟ್ರ್ಯಾಪ್ ಮಾಡಿಸಿದ.



ಕೈಹಿಡಿದ ನಾರಾಯಣಸ್ವಾಮಿ

ಅತ್ತ ವೀರಣ್ಣ ಮನೆಗೆ ಹೋಗುತ್ತಿದ್ದಂತೆ ಚುರುಕಾದ ಬಾಲಕೃಷ್ಣ ಶಾಸಕ ತಿಪ್ಪಾರೆಡ್ಡಿ ಹಾಗೂ ಆಂಜನೇಯರ ಬಳಿ ಹೋಗಿ ತನಗೇ ಇನ್‌ಛಾರ್ಜ್ ವಹಿಸಿಕೊಡುವಂತೆ ದುಂಬಾಲು ಬಿದ್ದ. ಅಲ್ಲಿಂದ ಜಿಲ್ಲಾ ಪಂಚಾಯ್ತಿ ಸಿಇಓ ನಾರಾಯಣಸ್ವಾಮಿ ಕಾಲಿಗೆ ಬಿದ್ದು ತನಗೇ ಇನ್‌ಛಾರ್ಜ್ ಕೊಡಬೇಕೆಂದು ಭಿನ್ನವಿಸಿಕೊಂಡ. ಇದಕ್ಕೆ ಮಾಡಬೇಕಾದ ವ್ಯವಸ್ಥೆಯನ್ನು ಮಾಡಿದ. ನಿವೃತ್ತಿಯ ದಿನಗಳನ್ನೆದುರಿಸುತ್ತಿರುವ ನಾರಾಯಣಸ್ವಾಮಿ ಕೈಬಿಟ್ಟಾರೆಯೇ? ಜೊತೆಗೆ ಕುಲಬಾಂಧವ ಬೇರೆ. ತಕ್ಷಣ ತಥಾಸ್ತು ಅಂದೇಬಿಟ್ಟರು.

ಬೇಜವಾಬ್ದಾರಿ ಆಡಳಿತ ನಿರ್ವಹಣೆಯ ಕಾರಣಕ್ಕಾಗಿ ಶಿಸ್ತುಕ್ರಮಕ್ಕೊಳಗಾಗಿದ್ದ ತಾಲ್ಲೂಕು ಮಟ್ಟ[...] ಅಧಿಕಾರಿಯೊಬ್ಬನಿಗೆ ತಿಂಗಳೊಪ್ಪತ್ತಿಗೆ ಜಿಲ್ಲಾ ಸಮಾ[ಜ] ಕಲ್ಯಾಣಾಧಿಕಾರಿಯ ಇನ್‌ಚಾರ್ಜ್ ಕೊಡುವಂತ[ಹ] ಭಂಡತನ ಪ್ರದರ್ಶಿಸಿದರು. ಇನ್‌ಚಾರ್ಜು ವಹಿಸಿಕೊ[ಂಡ] ಬಾಲಕೃಷ್ಣ ತಾಲ್ಲೂಕು ಕಚೇರಿಯಲ್ಲಿ ನಡೆಸುತ್ತಿದ್ದಂ[ತ] ಅದ್ವಾನಗಳನ್ನೇ ಇಲ್ಲೂ ರಿಪೀಟ್ ಮಾಡಿದ. ಹೋದ[ಲ್ಲಿ] ಬಂದಲ್ಲಿ 'ನಾನು ಸಿಎಂ ಪಿಎಗೆ ಒಂದು ಲಕ್ಷ ಕೊಟ್ಟಿದ್ದಿ[ನಿ] ಮಾರ್ಚ್ ಮುಗಿಯುವವರೆಗೂ ಡಿಸ್‌ಚಾರ್ಜ್ ಮಾಡೋಲ್ಲ, ಶಾಸಕ ಆಂಜನೇಯರಿಗೆ ಎರಡು [...] ಕೊಟ್ಟಿದ್ದೀನಿ. ಯಾರೇನೂ ಮಾಡ್ಕೊಳ್ಳೋಕಾಗಲ್ಲ ಅಂ[...] ತೌಡು ಕುಟ್ಟತೊಡಗಿದ. ಈ ನಡುವೆ ಶಿಸ್ತುಕ್ರಮ[ದ] ಕಾರಣಕ್ಕೆ ತಡೆಹಿಡಿಯಲಾಗಿದ್ದ ವಾರ್ಷಿಕ ಬಡ್ತಿಯ[ನ್ನು] ಮಂಜೂರು ಮಾಡಿದ ಜಿಲ್ಲಾ ಪಂಚಾಯ್ತಿ ಸಿ[ಇಓ] ನಾರಾಯಣಸ್ವಾಮಿ ಈ ಬಗ್ಗೆ ತನಿಖೆ ನಡೆಸಿದ್ದ ಅಧಿ[...] ಅಧಿಕಾರಿಗಳಿಗೇ ಮುಜುಗರ ಉಂಟು ಮಾಡಿದ[್ದಾರೆ.] ಮೇಲಾಗಿ ಬಾಲಕೃಷ್ಣನ ಮೇಲಿನ ಶಿಸ್ತುಕ್ರಮ[ದ] ತೀರ್ಮಾನ ಜಿಲ್ಲಾ ಪಂಚಾಯ್ತಿ ಸಾಮಾನ್ಯ ಸಭೆಯ[ದ್ದಾ]ಗಿತ್ತು. ಈಗ ಜಿಲ್ಲಾ ಪಂಚಾಯ್ತಿ ಸಭೆಯ ಗಮ[ನಕ್ಕೆ] ತಾರದೇ ಬಡ್ತಿ ಮಂಜೂರಾತಿ ಮಾಡಿರುವುದು [...] ಜಿಲ್ಲಾ ಪಂಚಾಯ್ತಿ ಸದಸ್ಯರಲ್ಲೂ ತೀವ್ರ ಅಸಮಾಧಾ[ನಕ್ಕೆ] ಕಾರಣವಾಗಿದೆ.

ಬಾಲಕೃಷ್ಣನ ಪ್ರವರದ ಮಾಹಿತಿಗಳು-ದೂರು[ಗಳು] ಸಮಾಜ ಕಲ್ಯಾಣ ಸಚಿವ ಬಾಲಚಂದ್ರ ಜಾರಕಿಹೊ[ಳಿ] ವರೆಗೂ ಹೋಗಿವೆ. ಕೆಲ ಜೆಡಿಎಸ್ ಮುಖಂ[ಡರು] ಈ ಬಗ್ಗೆ ಪತ್ರ ಬರೆದಿದ್ದಾರೆ. ಇದ[ರ] ನಂತರ ಸಚಿವರ ಸೂಚನೆಯ ಮೇ[ರೆಗೆ] ಮೊನ್ನೆ ಇಲಾಖೆಯ ಕಾರ್ಯ[...] ವೈಖರಿಯ ತನಿಖೆಗಾಗಿ ಬಂ[ದಿದ್ದ] ಇಲಾಖೆಯ ಜಂಟಿ ನಿರ್ದೇಶ[ಕರು] ಬಾಲಕೃಷ್ಣನ ಪೂರ್ತಿ ಜಾತಕವ[ನ್ನು] ಕೊಂಡೊಯ್ದಿದ್ದಾರೆ. ಬಾಲಕೃ[ಷ್ಣನ] ಮುಖ ಪೂರ್ತಿ ಹರಳೆಣ್ಣೆ ಕುಡಿದ[...] ಅಲ್ಲಿಗೆ ರಾಂಗ್ ಸಿಗ್ನಲ್ಲೇನೋ [...] ದಂತಾಗಿದೆ. ತನ್ನ ಸರ್ವೀಸು ಪೂ[ರ್ತಿ] ಜಿಲ್ಲೆಯಲ್ಲೇ ಸುತ್ತಾಡಿ ಸೇವೆ ಮ[...] ಬಲಿತುಕೊಂಡಿರುವ ಬಾಲಕೃಷ್ಣನಿಗೆ ತನ್ನನ್ನು [...] ಎತ್ತಿ ಹಾಕುತ್ತಾರೋ ಎಂಬ ಆತಂಕ ಬೆನ್ನೇ[...] ಹೇಗಾದರೂ ಈ ಬೀಸುವ ದೊಣ್ಣೆಯಿಂದ ತಪ್ಪಿಸಿಕೊ[ಳ್ಳ]ಬೇಕೆಂಬ ಕಂಡಕಂಡವರ ಕಾಲಿಗೆಬಿದ್ದು ಅಲ[...] ಕೊಳ್ಳುತ್ತಿದ್ದಾನೆ.

ಏನಾದರೇನಂತೆ ಬಾಲಕೃಷ್ಣ ಎತ್ತಂಗಡಿಯಾ[ಗುವ] ಸಾಧ್ಯತೆಗಳೇ ಹೆಚ್ಚಾಗಿವೆ.

-ವರದಿಗ[ಾರ]

ಪರಾವಲಂಬಿಗಳು-ಮಧ್ಯವರ್ತಿಗಳ ಅಡ್ಡೆ

ಚಿತ್ರದುರ್ಗ ಸಮಾಜ ಕಲ್ಯಾಣ ಇಲಾಖೆಯ ಕಚೇರಿಯೆಂಬುದು ಇಂದು ಪರಾವಲಂಬಿಗಳು, ಮಧ್ಯವರ್ತಿಗಳು, ಪುಂಡುಪೋಕರಿಗಳ ಅಡ್ಡೆಯಂತಾಗಿದೆ. ಪ್ರತಿದಿನ ಏಳೆಂಟು ಜನರ ಲೆಕ್ಕದಲ್ಲಿ ನಾಲ್ಕೈದು ಬ್ಯಾಚುಗಳು ಯಾವಾಗಲೂ ಕಚೇರಿ ಮತ್ತು ಅದರ ಆಸುಪಾಸಿನಲ್ಲೇ ತಿರುಗುತ್ತವೆ. ಎಂತೆಂಥದೋ ಹಾಳು-ಮೂಳು ಸ್ಕೀಮುಗಳು, ಸಬ್ಸಿಡಿಗಳು, ಲೋನುಗಳನ್ನು ಕೊಡಿಸುವ ನೆಪದಲ್ಲಿ ಈ ಬ್ಯಾಚಿನ ಪಡ್ಡೆಗಳು ಕಚೇರಿಗೆ ಎಡತಾಕುವ ಸಾರ್ವಜನಿಕರ ಬೆನ್ನು ಹತ್ತುತ್ತಾರೆ. ನಾವು ದಲಿತ ಸಂಘರ್ಷ ಸಮಿತಿಯ ಆಅ.. ಬಣ ಎಂದೊಬ್ಬರು ಹೇಳಿದರೆ ಮಗದೊಬ್ಬರು ನಾವು ಇ..ಈ. .. ಬಣ ಅಂತಾ ಹೇಳುತ್ತಾರೆ. ಈ ನಡುವೆ ಸ್ವಯಂಘೋಷಿತ ದಲಿತ ಮುಖಂಡರು ಬೇರೆ. ಚಿತ್ರದುರ್ಗ ನಗರದ ಹಲವಾರು ಬಡಾವಣೆಗಳಿಂದ ಬರುವ ಈ ಪಡ್ಡೆಗಳಿಗೆ ಸಮಾಜ ಕಲ್ಯಾಣ ಇಲಾಖೆಯೇ ಆದಾಯದ ಮೂಲ. ಕಚೇರಿಯಲ್ಲಿ ಕೆಲಸ ಮಾಡುವ ಖಾಯಂ ನೌಕರರು ಕೂಡಾ ಇವರಷ್ಟು ನೀಟಾಗಿ, ರೆಗ್ಯುಲರ್ ಆಗಿ ಕಚೇರಿಗೆ ಬರುವುದಿಲ್ಲ. ಟ್ರಿಮ್ ಆಗಿ ಡ್ರೆಸ್ ಮಾಡಿಕೊಂಡು, ಕೈಯಲ್ಲೊಂದು ಮೊಬೈಲ್ ಹಿಡಿದು, ಸೀನ್ ಕ್ರಿಯೇಟ್ ಮಾಡಲಿಕ್ಕೊಂದು ಟೀಮ್ ಆಗಿ ಜಮಾವಣೆಯಾಗಿ ಕಾರ್ಯಾಚರಣೆಗಿಳಿಯುತ್ತಾರೆ. ಸಮಾಜ ಕಲ್ಯಾಣ ಕಚೇರಿ ಬಳಿ ಸುಮ್ಮನೆ ನಿಂತು ನೋಡಿದರೆ ನಿಮಗೆ ಈ ಮಹಾಶಯರ ಪೂರ್ವಾಪರಗಳು ಸಿಗುತ್ತವೆ.


ನಾವು ತಿಪ್ಪಾರೆಡ್ಡಿ ಕಡೇರು (ಅಣ್ಣಾವ್ರ ಕಡೇರು), ಆಂಜನೇಯನ ಕಡೇರು, ನಾವು ದಲಿತ್ ಲೀಡರ್ಸ್... ಹೀಗೆ ಯಾವ್ಯಾವುದೋ ಹಿನ್ನೆಲೆ ಹೇಳಿಕೊಂಡು ಕಚೇರಿಗೆ ವಕ್ಕರಿಸುತ್ತಾರೆ. ಬಾಲಕೃಷ್ಣ ಬಂದಾಗಿನಿಂದ ಈ ಪಡ್ಡೆಗಳಿಗೆ ಬೇರೆ ಕೆಲಸವೇ ಇದ್ದಂತಿಲ್ಲ, ಆರಾಮಾಗಿ ಕಚೇರಿಯಲ್ಲೇ ಕುಳಿತು, ಪೇಪರು ಓದಿ, ಸಾಧ್ಯವಾದರೆ ಬಿಟ್ಟಿ ಫೋನು ಮಾಡಿ ಸಂಜೆಯ ಹೊತ್ತಿಗೆ ಅವರವರ ಶಕ್ತ್ಯಾನುಸಾರ ಗುಂಜಿಕೊಂಡು ಹೊರಡುತ್ತಾರೆ. ನಿಮಗೆ ಕುಡಿಯುವ ಅಭ್ಯಾಸವಿದ್ದು ಬಾರ್‌ಗೆ ಹೋಗುವವರಾದರೆ ಅಲ್ಲೂ ಈ ಬ್ಯಾಚುಗಳು ಸಿಗಬಹುದು. ಮರುದಿನ ಬೆಳಿಗ್ಗೆ ನೀವು ಯಾವುದಾದರೂ ಕೆಲಸದ ನಿಮಿತ್ತ ಶಾಸಕ ತಿಪ್ಪಾರೆಡ್ಡಿಯವರ ಮನೆಗೋ, ಶಾಸಕ ಆಂಜನೇಯರವರ ಮನೆಗೋ ಹೋದರೆ ಇದೇ ಬ್ಯಾಚುಗಳ[ನ್ನು] ಕಾಣುತ್ತೀರಿ.

ಹಿಂದೆ ಸಮಾಜ ಕಲ್ಯಾಣಾಧಿಕಾರಿಯಾ[ಗಿದ್ದ] ಮಲ್ಲಿಕಾರ್ಜುನ ಎಂಬಾತ ತನ್ನ ಮಾತೃ ಇಲಾ[ಖೆಗೆ] ಹೋಗಲು ಇಷ್ಟವಿಲ್ಲದೇ ಇಲಾಖೆಯ[ಲ್ಲೇ] ಉಳಿದುಕೊಳ್ಳಲು ಹರಸಾಹಸಪಟ್ಟ. ಇದೇ ಬ್ಯಾಚು[...] ಸಾರ್ ನಾವು ಅದನ್ನು ತಡೀತೀವಿ. ಮಿನಿಸ್ಟ್ರಿಗೆ ಪ್ರೆ[ಷರ್] ಹಾಕ್ತೀವಿ ಅಂತಾ ಬೆಂಗಳೂರಿಗೆ ಕರೆದುಕೊಂ[ಡು] ಹೋಗಿ ವಾರಗಟ್ಟಲೇ ಲಾಡ್ಜುಗಳಲ್ಲಿ ರೂಂ ಮ[ಾಡಿ]ಕೊಂಡು, ಹೊಟ್ಟೆ ಬಿರಿಯುವಂತೆ ತಿಂದು-ಕುಡಿ[ದು] ಮಜಾ ಉಡಾಯಿಸಿದ್ದವು.

ಸಮಾಜ ಕಲ್ಯಾಣಕ್ಕೆ ಎಷ್ಟೆಲ್ಲಾ ಆಯಾಮುಗ[ಳು] ಅಲ್ಲವೇ?

ಹೈಸ್ಕೂಲ್ ಶಿಕ್ಷಕರೇ ಕಾಪಿ ಹೊಡೆದರು!

ಪರೀಕ್ಷೆ ಬರೆಯುವಾಗ ಕೆಲವು ವಿದ್ಯಾರ್ಥಿಗಳು ಕಾಪಿ ಹೊಡೆದು ಸಿಕ್ಕಿಬೀಳುವುದು ಒಂದು ಮಾಮೂಲಿ ಸಂಗತಿ. ಆದರೆ ಶಿಕ್ಷಕರಾಗುವವರು ಅದೇ ಹೀನ ಕೆಲಸ ಮಾಡಿದರೆ, ಅದಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳೇ ಲಂಚ ಪಡೆದು ಕಾಪಿ ಮಾಡಲು ಅವಕಾಶ ನೀಡಿದರೆ ಅದಕ್ಕೆ ಏನು ಮಾಡಬೇಕು?



ಮೊನ್ನೆ ನವೆಂಬರ್ 25-26 ರಂದು ಕರ್ನಾಟಕದಾದ್ಯಂತ ಹೈಸ್ಕೂಲ್ ಶಿಕ್ಷಕರ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆದವು. ಒಟ್ಟು 4300 ಹುದ್ದೆಗಳಿಗೆ ರಾಜ್ಯಾದ್ಯಂತ ಅಂದಾಜು ಮೂವತ್ತೆರಡು ಸಾವಿರ ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಿದ್ದರು. ರಾಜ್ಯದ 32 ಶೈಕ್ಷಣಿಕ ಜಿಲ್ಲೆಗಳಲ್ಲಿ ನಡೆದ ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬಿಜಾಪುರ, ಗುಲ್ಬರ್ಗಾ, ಉಡುಪಿ, ತುಮಕೂರು, ಹಾಸನ ಹಾಗೂ ಮಂಡ್ಯ ಪರೀಕ್ಷಾ ಕೇಂದ್ರಗಳಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆ.

ಪರೀಕ್ಷೆ ನಡೆವ ಹಿಂದಿನ ದಿನವೇ ಪ್ರಶ್ನಪತ್ರಿಕೆ ಬಂಡಲ್ ಒಡೆದು ಜೆರಾಕ್ಸ್ ಮಾಡಿಸಿ ಐದು ಸಾವಿರದಿಂದ ಐವತ್ತು ಸಾವಿರ ರೂಪಾಯಿವರೆಗೆ ಮಾರಿರುವುದು, ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್ ಬಳಕೆ, ಕೊಠಡಿ ಮೇಲ್ವಿಚಾರಕರೇ ಹಣ ಪಡೆದು ಕಾಪಿ ಹೊಡೆಯಲು ಅವಕಾಶ ನೀಡಿರುವ ನೂರಾರು ಘಟನೆಗಳು ನಡೆದಿವೆ. ಕಷ್ಟಪಟ್ಟು ಓದಿ, ಪ್ರಾಮಾಣಿಕವಾಗಿ ಪರೀಕ್ಷೆ ಬರೆಯುತ್ತಿದ್ದ ಸಾವಿರಾರು ಹುಡುಗರ ಎದುರೇ ಇವೆಲ್ಲಾ ಅನಾಚಾರಗಳು ನಡೆದಿವೆ. ಬಿಜಾಪುರ ಕೇಂದ್ರದಲ್ಲಿ ಪರೀಕ್ಷೆ ಬರೆದ ಅಂತಾ ಒಬ್ಬ ವಿದ್ಯಾರ್ಥಿ ಸಿಂಧಗಿ ತಾಲ್ಲೂಕಿನ ತಂಗಡಗಿಯ ಶಂಕರನಿಂಗ ಹೊಳಿ ನೊಂದುಕೊಂಡು ವಿಷ ಕುಡಿದು ಸತ್ತಿದ್ದಾನೆ. ಬಿಜಾಪುರದ ಇನ್ನೊಬ್ಬ ಅಭ್ಯರ್ಥಿ ನಿಂಗಯ್ಯ ಮಠ ಆತ್ಮಹತ್ಯೆಗೆ ಯತ್ನಿಸಿ ಈಗ ಸಾವುಬದುಕಿನ ನಡುವೆ ಸೆಣಸಾಡುತ್ತಿದ್ದಾನೆ.

ಈ ಪರೀಕ್ಷಾ ಅಕ್ರಮಗಳ ಬಗ್ಗೆ ಬಿಜಾಪುರ, ಧಾರವಾಡ, ತುಮಕೂರುಗಳಲ್ಲಿ ಈಗಾಗಲೇ ಪ್ರತಿಭಟನೆಗಳು ಆರಂಭವಾಗಿವೆ.

ಭ್ರಷ್ಟ ಡಿಡಿಪಿಐ ಹಿರೇಮಠ

ಬಿಜಾಪುರದ ಸರ್ಕಾರಿ ಬಾಲಕ-ಬಾಲಕಿಯರ ಪ್ರೌಢಶಾಲೆ ಹಾಗೂ ಶ್ರೀ ಸಿದ್ದೇಶ್ವರ ಹೈಸ್ಕೂಲ್‌ಗಳು ಪರೀಕ್ಷಾ ಕೇಂದ್ರಗಳಾಗಿದ್ದು ಜಿಲ್ಲಾ ಡಿಡಿಪಿಐ ಹಿರೇಮಠ ಅವರದ್ದೇ ಸಮಗ್ರ ಉಸ್ತುವಾರಿಯಾಗಿತ್ತು. ಆದರೆ ಹಿರೇಮಠ ಮತ್ತವರ ಸಿಬ್ಬಂದಿ ಈ ಅವಕಾಶ ಬಳಸಿಕೊಂಡು ದುಡ್ಡು ಹೊಡೆಯಲು ಮೊದಲೇ ಪ್ಲಾನ್ ಮಾಡಿಕೊಂಡಿದ್ದರೆಂಬುದಕ್ಕೆ ಈಗ ಸಾಕ್ಷಿಗಳು ದೊರೆತಿವೆ.

ನವೆಂಬರ್ 25 ರ ಶನಿವಾರ ಬೆಳಿಗ್ಗೆ ಸಾಮಾನ್ಯ ಜ್ಞಾನದ ಮೊದಲ ಪರೀಕ್ಷೆ ಶುರುವಾದಾಗ ಅಭ್ಯರ್ಥಿಗಳಿಗೆ ಆಶ್ಚರ್ಯ ಕಾದಿತ್ತು. ಕೊಠಡಿ ಮೇಲ್ವಿಚಾರಕರು ಎಕ್ಸಾಂ ರೂಂನಲ್ಲೇ ಪ್ರಶ್ನಪತ್ರಿಕೆ ಬಂಡಲ್ ಓಪನ್ ಮಾಡಬೇಕೆಂಬ ನಿಯಮವಿದ್ದರೂ ಅವರು ಮೊದಲೇ ಓಪನ್ ಆಗಿದ್ದ ಬಂಡಲ್‌ನೊಳಗಿಂದ ಪ್ರಶ್ನಪತ್ರಿಕೆ ತೆಗೆದು ಹಂಚಿದ್ದಾರೆ.

ಈ ಬಂಡಲ್‌ಗಳನ್ನು ಓಪನ್ ಮಾಡಿದವರ್‍ಯಾರು?

ಕೆಲವು ಅಭ್ಯರ್ಥಿಗಳು ಇದನ್ನು ಗಮನಿಸಿ ಗಲಾಟೆ ಮಾಡಿದರೂ ರೂಂ ಸೂಪರ್‌ವೈಸರ್‌ಗಳು ಕೇರ್ ಮಾಡಿಲ್ಲ. ಹಕೀಕತ್ತೇನೆಂದರೆ ಡಿಡಿಪಿಐ ಹಿರೇಮಠರ ಭದ್ರ ಕಸ್ಟಡಿಯಲ್ಲಿರಬೇಕಿದ್ದ ಈ ಪ್ರಶ್ನಪತ್ರಿಕೆ ಬಂಡಲ್ ಹಿಂದಿನ ದಿನವೇ ಓಪನ್ ಆಗಿ ಜೆರಾಕ್ಸ್ ಆಗಿತ್ತು. ಜೆರಾಕ್ಸ್ ಮಾಡಿಸಿಕೊಂಡಿದ್ದ ಶಿಕ್ಷಣ ಇಲಾಖೆಯ ಭ್ರಷ್ಟ ನೌಕರರು ತಮಗೆ ಗೊತ್ತಿದ್ದ ಅಭ್ಯರ್ಥಿಗಳಿಗೆ ರಾತ್ರೋರಾತ್ರಿ ಹುಡುಕಿಕೊಂಡು ಹೋಗಿ ಐವತ್ತು ಸಾವಿರದವರೆಗೂ ಹಣ ಕಿತ್ತು ಪ್ರಶ್ನೆಪತ್ರಿಕೆ ಮಾರಿಕೊಂಡಿದ್ದಾರೆ. ಇದು ಮಾರನೇ ದಿನದ ಬೆಳಗ್ಗೆಯವರೆಗೂ ಮುಂದುವರೆದಿದೆ. ಕಾಸು ಕೊಟ್ಟು ಪ್ರಶ್ನೆಪತ್ರಿಕೆ ಪಡೆದವರು ಖರ್ಚಾದ ಹಣ ವಾಪಸ್ ಪಡೆಯಲು ಮತ್ತೂ ಹಲವರಿಗೆ ಮಾರಿದ್ದಾರೆ. ಇನ್ನೂ ಕೆಲವರು ಉತ್ತರ ಗಳನ್ನು ರೆಡಿ ಮಾಡಿ ಐದು ಸಾವಿರದಂತೆ ಮಾರಿಕೊಂಡಿದ್ದಾರೆ.



ಮದನಗೋಪಾಲ್

ಹಾಗಾಗಿ ಎಸ್‌ಎಸ್ ಹೈಸ್ಕೂಲ್ ಹಾಗೂ ಸರ್ಕಾರಿ ಹೈಸ್ಕೂಲಿನಲ್ಲಿ ಶನಿವಾರ ಪರೀಕ್ಷೆ ಶುರುವಾಗುವ ಮೊದಲೇ ಕೆಲವು ಅಭ್ಯರ್ಥಿಗಳ ಮುಖದಲ್ಲಿ ಗೆಲುವಿನ ಕಳೆನಗೆ ಕಾಣುತ್ತಿತ್ತು.

ಡಿಡಿಪಿಐ ಹಿರೇಮಠ ಮತ್ತವರ ಸಿಬ್ಬಂದಿ ವಸೂಲಾದ ಕಾಸು ಹಂಚಿಕೊಳ್ಳುತ್ತಾ ಇದ್ದಾಗ ಪರೀಕ್ಷಾ ಕೊಠಡಿಗಳಲ್ಲಿ ಇನ್ನಷ್ಟು ಅಧ್ವಾನಗಳು ಶುರುವಾಗಿದ್ದವು.

ಮೊಬೈಲ್ ಫೋನ್ ಬಳಕೆ ಅದರಲ್ಲೊಂದು. ಸಿದ್ಧೇಶ್ವರ ಹೈಸ್ಕೂಲ್ ಸೆಂಟರಿನಲ್ಲಿ ಕೆಲವು ಅಭ್ಯರ್ಥಿಗಳು ರಾಜಾರೋಷವಾಗಿ ಮೊಬೈಲ್ ಫೋನ್ ಬಳಸಿ ಹೊರಗಿನವರಿಂದ ಉತ್ತರಗಳನ್ನು ಕೇಳಿ ಬರೆದಿದ್ದಾರೆ. ಅಷ್ಟೇ ಅಲ್ಲ, ಇಡೀ ಪರೀಕ್ಷಾ ಕೇಂದ್ರವೇ ಸಂತೆಯಾಗಿ ಯಾರ್‍ಯಾರೋ ಹೊರಗಿನವರೆಲ್ಲಾ ಓಡಾಡಿದ್ದಾರೆ. ಅಲ್ಲೆಲ್ಲಾ ಪೊಲೀಸ್ ಕಾವಲು ವ್ಯವಸ್ಥೆ ಆಗಿರಲಿಲ್ಲ. ಇದನ್ನೆಲ್ಲಾ ಗಮನಿಸಿದ ಬೀರಪ್ಪ ಬಂಡೆಪ್ಪ ಬಿರಾದಾರ, ಶಿವಾನಂದ ಬಿ. ನಂದ್ಯಾಳ, ಗೋವಿಂದ ಕುಂಬಾಪುರ, ನಿಂಗಯ್ಯ ಮಠ ಮುಂತಾದ ಅಭ್ಯರ್ಥಿಗಳು ಸ್ಥಳದಲ್ಲೇ ಪ್ರತಿಭಟಿಸಿದರೂ ರೂಂ ಸೂಪರ್‌ವೈಸರ್‌ಗಳು ನಿರ್ಲಕ್ಷಿಸಿದ್ದಾರೆ. ಇಷ್ಟಕ್ಕೂ ಅರ್ಹತೆ ಇರದವರನ್ನೇ ರೂಂ ಸೂಪರ್‌ವೈಸರ್‌ಗಳಾಗಿ ನೇಮಿಸಿದ್ದರು ಮಹಾನುಭಾವ ಡಿಡಿಪಿಐ ಹಿರೇಮಠ. ನಾಲ್ಕಾರು ತಿಂಗಳಿಂದ ಕಷ್ಟಪಟ್ಟು ಓದಿ ಪರೀಕ್ಷೆಗೆ ರೆಡಿಯಾಗಿ ಬಂದಿದ್ದ ಸಾವಿರಾರು ಜನ ಈ ಪರೀಕ್ಷಾ ಅಕ್ರಮಗಳನ್ನು ಕಣ್ಣಾರೆ ಕಂಡು ಹತಾಶರಾಗಿದ್ದಾರೆ. ನಿಂಗಯ್ಯ ಮಠ ಹಾಗೂ ಶಂಕರನಿಂಗ ಹೊಳಿ ವಿಷ ಸೇವಿಸಿದ್ದಾರೆ. ಕೊನೆಗೆ ಶಿಕ್ಷಣ ಇಲಾಖೆಯ ಭ್ರಷ್ಟತನಕ್ಕೆ ಶಂಕರನಿಂಗನ ಸಾವೂ ಸಾಕ್ಷಿಯಾಗಿದೆ.

ತುಮಕೂರಿನಲ್ಲೂ ಅಕ್ರಮ

ತುಮಕೂರು ಹಾಗೂ ಮಧುಗಿರಿ ಎಂಬ ಎರಡು ಶೈಕ್ಷಣಿಕ ಜಿಲ್ಲೆಗಳಿರುವ ತುಮಕೂರಿನಲ್ಲಿ ಈ ಬಾರಿ ವ್ಯಾಪಕ ಪರೀಕ್ಷಾ ಅಕ್ರಮಗಳು ನಡೆದಿವೆ. ಮಧುಗಿರಿಯ ಡಿಡಿಪಿಐ ಸದಾಶಿವಮೂರ್ತಿ ಕೈವಾಡದಿಂದಾಗಿ ಪ್ರಶ್ನೆ ಪತ್ರಿಕೆಗಳು ಲೀಕ್ ಆಗಿದ್ದಲ್ಲದೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸೆಂಟರ್‌ನಲ್ಲೂ ಇದೇ ಕತೆ. ಅಲ್ಲಿನ ಡಿಡಿಪಿಐ ಗಂಗಾಧರಗೌಡ ಡಿಸೆಂಬರ್ 1 ರಂದು ನಿವೃತ್ತನಾಗುವವನಿದ್ದ. ಹಾಗಾಗಿ ಹೋಗುವ ಮೊದಲು ಸಾಕಷ್ಟು ಗೆಬರಿಗೊಂಡು ಹೋಗಲು ನಿರ್ಧಾರ ಮಾಡಿಕೊಂಡೇ ಇವನು ಪ್ರಶ್ನೆ ಪತ್ರಿಕೆ ಒಡೆದು ಮನಬಂದ ರೇಟಿಗೆ ಮಾರಿಕೊಂಡಿದ್ದಾನೆ.


ಇವರೆಲ್ಲರೊಂದಿಗೆ ಆಯಾ ಪರೀಕ್ಷಾ ಸೆಂಟರ್‌ಗಳ ಮೇಲ್ವಿಚಾರಕರೂ ಕೆಳಹಂತದ ಸಿಬ್ಬಂದಿಯೂ ಕೈಗೂಡಿಸಿ ಈ ಮಟ್ಟದ ಅನ್ಯಾಯ ಅಕ್ರಮಗಳನ್ನು ನಡೆಸಿರುವುದು ಮೇಲು ನೋಟಕ್ಕೆ ಸಾಬೀತಾಗಿದೆ. ಉನ್ನತ ಶಿಕ್ಷಣ ಸಚಿವ ಬಸವರಾಜ ಹೊರಟ್ಟಿ ಹಾಗೂ ಆಯುಕ್ತರಾದ ಮದನ್ ಗೋಪಾಲ್ ಕೂಡಲೇ ಈ ಬಗ್ಗೆ ತನಿಖೆ ಮಾಡಿಸಿ ಭ್ರಷ್ಟ ಅಧಿಕಾರಿಗಳನ್ನು ಶಿಕ್ಷಿಸಬೇಕಿದೆ, ಇಲ್ಲದಿದ್ದರೆ ಪ್ರಾಮಾಣಿಕರು ಹಾಗೂ ಬುದ್ಧಿವಂತ ಅಭ್ಯರ್ಥಿಗಳು ಇದೇ ಇಲಾಖೆ ಬಗ್ಗೆ ನಂಬಿಕೆ ಕಳೆದುಕೊಳ್ಳುತ್ತಾರಷ್ಟೇ.

-ಬಿಳಿದಾಳೆ ಈಶ

ಶಹಾಪುರ: ಸ್ವಕುಳಸಾಳಿ ಸಮಾಜ ಬಹಿಷ್ಕಾರ ಎಂಬ ಅನಿಷ್ಟ

ಶಹಾಪುರದ ಸ್ವಕುಳಸಾಳಿಗಳಿಗೆ ಬಹಿಷ್ಕಾರ ಎಂಬ ಭೂತ 16 ವರ್ಷಗಳಿಂದ ಕಾಡುತ್ತಲೇ ಇದೆ. ಹಿಂದುಳಿದ ಈ ಸಮಾಜದ ಮೇಲೆ ಬಹಿಷ್ಕಾರದ ತೂಗುಗತ್ತಿ ಆಡಿಸುತ್ತಿರುವವರು ಅದೇ ಸಮಾಜದ ಪಾಳೆಗಾರಿ ಮನಸ್ಸಿನ ಹಿರಿಯರು.

ಸಮಾಜದ ಸಭೆಗೆ ಬರಲಿಲ್ಲವೆಂಬ ಕ್ಷುಲ್ಲಕ ಕಾರಣವೊಡ್ಡಿ ಘಂಟೆಪ್ಪ ಗುಂಡೇನವರ್ ಎನ್ನುವವರಿಗೆ ಬಹಿಷ್ಕಾರ ಹಾಕಲಾಗಿದೆ. ಸಮಾಜದವರ್‍ಯಾರಾದರೂ ಘಂಟೆಪ್ಪನ ಮನೆಗೆ ಹೋದರೆ ಅವರಿಗೂ ಬಹಿಷ್ಕಾರ ಹಾಕುತ್ತಾರಂತೆ. ಇಂತಹ ಅಮಾನವೀಯ, ಅಸಹ್ಯ ಪದ್ಧತಿಯ ಹಿಂದೆ ಇರುವ ಕ್ರಿಮಿಗಳೆಂದರೆ ಸ್ವಕುಳಸಾಳಿ ಸಮಾಜ ಸಂಘದ ಅಧ್ಯಕ್ಷ ಮಲ್ಲೇಶಪ್ಪ ದಂಡು, ಉಪಾಧ್ಯಕ್ಷ ಮಲ್ಲಯ್ಯ ಕೆ. ಫಿರಂಗಿ, ಕಾರ್ಯದರ್ಶಿ ವಿಶ್ವನಾಥ್ ಎನ್. ರಘುಂಗಳೀ. 30 ವರ್ಷಗಳಿಂದ ಸಮಾಜವನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡಿರುವ ಈ ದುಷ್ಟರು ತಮ್ಮ ಸುತ್ತಲೂ ಹೊಗಳುಭಟ್ಟರನ್ನು ಇಟ್ಟುಕೊಂಡು ದರ್ಪ ಮೆರೆಯುತ್ತಿದ್ದಾರೆ. ಬಹಿಷ್ಕಾರ ರದ್ದು ಮಾಡಿ, ಸಮಾಜದ 'ಒಳಗೆ' ಮತ್ತೆ ಕರೆದುಕೊಳ್ಳಲು 10 ರಿಂದ 50 ಸಾವಿರದವರೆಗೂ ಹಣ ಪೀಕುತ್ತಾರೆ. ಬಡವರು ಸಾಲಸೋಲ ಮಾಡಿಯಾದರೂ ಈ ಪಾಪಿಗಳಿಗೆ ಹಣ ನೀಡಲೇಬೇಕು.




ಮಲ್ಲಯ್ಯ

[illegible]

ಕಳೆದ ವರ್ಷ ಸಂಗಣ್ಣ ಎಂಬಾತನಿಗೆ ಬಹಿಷ್ಕಾರ ಹಾಕಿದ್ದರು. 2005, ಜುಲೈ 12 ರಂದು ಆತನ ಮಗು ಸತ್ತಾಗ ಶವಸಂಸ್ಕಾರಕ್ಕೆ ಸಮಾಜದ ಯಾರೂ ಹೋಗದಂತೆ ಮಲ್ಲೇಶಪ್ಪ, ಮಲ್ಲಯ್ಯ, ವಿಶ್ವನಾಥರು ತಡೆದು ಕ್ರೌರ್ಯ ಮೆರೆದಿದ್ದರು. ಮಗುವಿನ ತಾಯಿ ಅಧ್ಯಕ್ಷ, ಉಪಾಧ್ಯಕ್ಷರ ಕಾಲಿಗೆ ಬಿದ್ದು ಬೇಡಿಕೊಂಡಿದ್ದೂ ಉಪಯೋಗವಾಗಲಿಲ್ಲ. ಕೊನೆಗೆ ಸಮಾಜದ ಇಬ್ಬರು ಮಾನವಂತರು ಮುಂದೆ ಬಂದು ಶವಸಂಸ್ಕಾರಕ್ಕೆ ನೆರವಾಗಿದ್ದರು. ಇಂತಹ ಅನಿಷ್ಟ ಪದ್ಧತಿ ವಿರೋಧಿಸಿದ ಕಾರಣಕ್ಕೆ ಸುರೇಶ್ ಫಿರಂಗಿ ಎಂಬಾತನ ಮೇಲೂ ಬಹಿಷ್ಕಾರ ಹಾಕಲಾಗಿತ್ತು. ಸುರೇಶನ ಮದುವೆಯೇ ನಿಂತುಹೋಗುವ ಪರಿಸ್ಥಿತಿ ಬಂದಿತ್ತು. ಕೊನೆಗೆ ಆತ ದಂಡ ತೆತ್ತು 'ಮುಕ್ತ'ನಾಗಬೇಕಾಯ್ತು.

ಇಲ್ಲಿವರೆಗೂ ಸುಮಾರು 18 ಕುಟುಂಬಗಳು ಈ ಬಹಿಷ್ಕಾರದ ಕುತಂತ್ರಕ್ಕೆ ಬಲಿಯಾಗಿವೆ. ಪಂಡಿತಪ್ಪ ಫಿರಂಗಿ, ರಾಮಚಂದ್ರ ಪ್ರಧಾನಪ್ಪ, ಗುರುನಾಥ ಪ್ರಧಾನಪ್ಪ, ಶಂಕರ ಪ್ರಧಾನಪ್ಪ, ಸುಮಿತ್ರಾ ಬಾಯಿ ಚಿಲ್ಲಾಳ್ ಮುಂತಾದವರೆಲ್ಲ ನಲುಗಿ ಹೋಗಿ, ಅವಮಾನ ಅನುಭವಿಸಿದ್ದಾರೆ.



ವಿಶ್ವನಾಥ್


ಬಹಿಷ್ಕಾರ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಪ್ರಥಮ ದರ್ಜೆ ನ್ಯಾಯಾಲಯದಿಂದ ಸಮಾಜದ ಮುತ್ಸಾಳ ಮುಖಂಡರಿಗೆ ಸಮನ್ಸ್ ಜಾರಿಯಾಗಿದೆ. ಮಲ್ಲೇಶಪ್ಪ ದಂಡು, ಮಲ್ಲಯ್ಯ ಫಿರಂಗಿ, ವಿಶ್ವನಾಥ್ ರಘುಗಳ ಜೊತೆಗೆ ಮಹೇಂದ್ರ ಮಿರ್ಜಿ, ಚಿಲ್ಲಾಳ್, ಸಿದ್ದಪ್ಪ ಕೆಂಧೂಳಿ ಮುಂತಾದ ಮಾನಗೇಡಿಗಳು ನ್ಯಾಯಾಲಯಕ್ಕೆ ಅಲೆಯುತ್ತಿವೆ. ನ್ಯಾಯಾಲಯ ಈ ಪಾಳೆಗಾರರಿಗೆ ಸರಿಯಾಗಿ ಪಾಠ ಕಲಿಸುವುದೆಂಬ ನಿರೀಕ್ಷೆ ಸ್ವಕುಳಸಾಳಿಗಳದ್ದು.

ಭಗವಾನ್ ಜೇಷ್ಠೇಶ್ವರನ ಪೂಜೆ ಮಾಡುವ ಸುಮಾರು 180 ಸ್ವಕುಳಸಾಳಿ ಕುಟುಂಬಗಳು ಸದಾ ಬಡತನದಲ್ಲೇ ಜೀವನ ಸಾಗಿಸುತ್ತಾ ಬಂದಿವೆ. ನೇಕಾರಿಕೆ ಇವರ ಪಾಲಿಗೆ ನೇಣಾದಾಗಿನಿಂದ, ಒಂದಿಷ್ಟು ಕುಟುಂಬಗಳು ಮಹಾರಾಷ್ಟ್ರಕ್ಕೆ ಕೆಲಸ ಅರಸಿಹೋಗಿವೆ. ಇಂತಹ ಅಸಹಾಯಕರ ಮೇಲೆ ಅದೇ ಸಮಾಜದ ದುಷ್ಟರು ಬಹಿಷ್ಕಾರ ಹಾಕುತ್ತಾ, ಬಹಿಷ್ಕಾರ ರದ್ದಿಗೆ ದುಡ್ಡು ಬಾಚುತ್ತಿದ್ದಾರೆ. ಸಮಾಜದ ವಿದ್ಯಾವಂತರು ... ಕುತಂತ್ರಿ ಲೀಡರುಗಳಿಗೆ ಪಾಠ ...

-ವರವಿಗಾ:

ಕರಡಿ ಎತ್ತಂಗಡಿಗೆ ಜೆಡಿಎಸ್‌ನಲ್ಲಿ ಗುಡುಗುಡು...

ಈಗ ಬಡಿದಾಡುವ ಸರದಿ ಕೊಪ್ಪಳ ಜೆಡಿಎಸ್‌ನದು ಅಂತಾ ಕಾಣುತ್ತೆ. ಅಲ್ಲಿ ಚಾಮುಂಡೇಶ್ವರಿ ಬೈ ಎಲೆಕ್ಷನ್ ಮುಗಿಯುವುದೊಂದೇ ಬಾಕಿ, ಇಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷಗಿರಿಗಾಗಿ ಶುರುವಾಗಲಿದೆ ಕೈಟೋ ಫೈಟು!



ಸಂಗಣ್ಣ ಕರಡಿ

ಬಳ್ಳಾರಿಯ ಜಿಂದಾಲ್ ವಿಮಾನ ನಿಲ್ದಾಣದಲ್ಲಿ ಕಾಂಗ್ರೆಸ್ಸಿಗರು ಬಡಿದಾಡಿದರು, ನಗರ ಬಿಜೆಪಿ ಅಧ್ಯಕ್ಷರ ಆಯ್ಕೆಯಲ್ಲೂ ಬಡಿದಾಟ ನಡೆದುಹೋಯ್ತು. ಈಗ ... ಸೀನ್ ಸೃಷ್ಟಿಸಲು ಜೆಡಿಎಸ್‌ನ ಜಿಲ್ಲಾ ನಾಯಕರು ರೆಡಿ ಆಗುತ್ತಿದ್ದಾರೆ.

ಈಗಿನ ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿಗೆ ... ಕೊಡಲು ಸಕಲ ತಯ್ಯಾರಿ ಆರಂಭವಾಗಿದೆ. ಒಮ್ಮೆ ಪಕ್ಷೇತರನಾಗಿ, ಇನ್ನೊಮ್ಮೆ ಸಂಯುಕ್ತ ದಳದ ಅಭ್ಯರ್ಥಿಯಾಗಿ ಎಂಎಲ್‌ಎ ಗಿರಿ ... ಮಾಡಿದ ಕರಡಿ, ಪ್ಯಾಟ್ರಿಕ್ ತಪ್ಪಿಸಿಕೊಳ್ಳ... ಬಿಜೆಪಿ ಸೇರಿ ಮುಗ್ಗರಿಸಿಬಿದ್ದಿತ್ತು. ... ಸರ್ಕಾರವಿದ್ದಾಗ ವಿದ್ದೆ ... ಸಂಗಣ್ಣ, ಕುಮಾರಸ್ವಾಮಿ ... ಇಕ್ಬಾಲ್ ಅನ್ಸಾರಿ ... ಅದನಂತರ ಸರ್ಕಾರಿ ಶಾಸಕನಂತೆ ... ಅನ್ಸಾರಿಯನ್ನು ಓವರ್‌ಟೇಕ್ ಮಾಡಲು ... ಇವತ್ತು ಕರಡಿ ಸಂಗಣ್ಣನ ಎತ್ತಂಗಡಿಗೆ ...

ಪಕ್ಷ ಸಂಘಟನೆ ಮಾಡೋ ಕರಡಿ ಎಂದರೆ ತನ್ನ ... ಪದಾಧಿಕಾರಿಗಳಾಗಿಸಿ, ಹಿರಿಯರಾದ ಎಂ.ವಿ. ಪಾಟೀಲ್, ಮಹಾಂತಯ್ಯ ಮಠ, ಕೆ. ಶರಣಪ್ಪ, ವಿರುಪಾಕ್ಷಪ್ಪ ಅಗಡಿಯವರನ್ನೆಲ್ಲ ಹೊರಗಿಟ್ಟುಬಿಟ್ಟಿತು ಕರಡಿ. ಕರಡಿಯ ಕರಾಮತ್ತು ಬಲ್ಲ ಅನ್ಸಾರಿ ವಿಧಾನಸೌಧದಲ್ಲಿ ಕರಡಿಗೆ ವ್ಯಾಲ್ಯೂ ಇಲ್ಲದಂತೆ ಮಾಡಿಬಿಟ್ಟ. ಕರಡಿ ಹೇಳಿದ ಯಾವ ಕೆಲಸವೂ ಆಗಲೇ ಇಲ್ಲ.



ಅನ್ಸಾರಿ

ಅನ್ಸಾರಿ ಮೇಲೆ ಜಾತಿ ರಾಜಕಾರಣದ ಆರೋಪ ಹೊರಿಸಿ, ಜಿಲ್ಲಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ 'ಕರಡಿ ಬಾಬಾ' ಸಂಗಣ್ಣನ ಕುರಿತು ದೇವೇಗೌಡರ ಮುಂದೆ ಪ್ರಸ್ತಾಪಿಸಿದ ಅನ್ಸಾರಿ 'ಒಂದೋ ನಾನಿರಬೇಕು, ಇಲ್ಲಾ ಕರಡಿಯೇ ಕುಣಿಯುತ್ತಿರಬೇಕು' ಎಂದು ಸೆಟಗೊಂಡುಬಿಟ್ಟಿದ್ದ. ಆಗ ಕರಡಿಯ ಗುರು ಎಂ.ಪಿ. ಪ್ರಕಾಶ್ ಸಹ ಅನ್ಸಾರಿ ಪರ ನಿಂತರು. ಪಕ್ಷ ಬೆಳವಣಿಗೆಗೆ ಸಿಮೆಂಟು, ಕಲ್ಲು-ಗಿಲ್ಲು ಒದಗಿಸುತ್ತಿರುವುದೇ ಅನ್ಸಾರಿಯಾದ್ದರಿಂದ ಕರಡಿಯ ಕುಣಿತಕ್ಕೆ ಕಡಿವಾಣ ಬಿತ್ತು. ಎರಡು ಬಾರಿ ಶಾಸಕನಾಗಿದ್ದ ಕರಡಿ ಸಂಗಣ್ಣ ಒಬ್ಬ ಸಾಮಾನ್ಯ ನೌಕರನನ್ನು ಕೂಡ ಟ್ರಾನ್ಸ್‌ಫರ್ ಮಾಡಿಸಲಾಗದೇ ಹತಾಶೆಗೊಂಡುಬಿಟ್ಟ.



ಕೊಪ್ಪಳ ಸೇರಿದಂತೆ ಏಳೆಂಟು ಜಿಲ್ಲೆಗಳ ಜಿಲ್ಲಾಧ್ಯಕ್ಷರನ್ನು ಬದಲಾಯಿಸುವುದಾಗಿ ದೇವೇಗೌಡ ಹೇಳಿದಾಗಿನಿಂದಲೇ ಇಲ್ಲಿ ಸ್ಪರ್ಧೆ ಶುರುವಾಗಿದೆ. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ವಿ. ಪಾಟೀಲ್, ಮಾಜಿ ಶಾಸಕ ಕೆ. ಶರಣಪ್ಪರು ಅಖಾಡಕ್ಕೆ ಇಳಿದಿದ್ದಾರೆ. ಈಗ ಅಧ್ಯಕ್ಷರಾಗುವವರಿಗೆ ಅನ್ಸಾರಿ ಕೃಪೆ ಇರಲೇಬೇಕು. ಈ ಸಲವೂ ಲಿಂಗಾಯತರ ಪಾಲಿಗೆ ಹೋಗಲಿರುವಂತಿದೆ ಅಧ್ಯಕ್ಷಗಿರಿ.

ಹತಾಶನಾಗಿರುವ ಕರಡಿ ಸಂಗಣ್ಣ ತಿರುಗಿ ಬಿಜೆಪಿಗೆ ಹೋದರೂ ಅಲ್ಲಿ ಕವಡೆ ಕಿಮ್ಮತ್ತೂ ಸಿಗುವುದಿಲ್ಲ ಹಾಗೂ ಅದರಿಂದ ಕರಡಿಗೆ ಹಾನಿಯೇ ಹೆಚ್ಚು. ಇನ್ನು 'ಬಂ'ರ ಸೈಕಲ್ ಪಾರ್ಟಿಗೆ ಹೋದರೆ, ನೂರರ ಲೆಕ್ಕದಲ್ಲಿ ಮತಗಳು ಸಿಗುತ್ತವಷ್ಟೇ. ಅಧ್ಯಕ್ಷನ ಸೀಟು ಹೋದರೂ ಪರವಾಗಿಲ್ಲ ಸದ್ಯ ನ್ಯೂಟ್ರಲ್ ಆಗಿದ್ದು ಇಲೆಕ್ಷನ್ ವೇಳೆ ಧನ್ ಅಂತಾ ಇಂಡಿಪೆಂಡೆಂಟ್ ಕ್ಯಾಂಡಿಡೇಟ್ ಆಗಿ ಬಡಿದೋದೆ ವಾಸಿ ಎನ್ನುತ್ತಿವೆ ಕರಡಿಯ ಫಾಲೋಯರ್ಸ್. ಕರಡಿ ಮೊದಲು ಶಾಸಕನಾಗಿದ್ದೇ ಇಂಡಿಪೆಂಡೆಂಟಾಗಿ. 'History repeats' ಎಂದು ಕರಡಿಯನ್ನು ರೈಲು ಹತ್ತಿಸುತ್ತಿವೆ ಹಿಂಬಾಲಕ ಕೋತಿಗಳು! ಇವೆಲ್ಲದರ ನಡುವೆ ಜನ ಮಾತ... ಬಿಜೆಪಿ ... ಬಡಿದಾಟ ... ಜೆಡಿಎಸ್‌ನವರು ... ಎಂದು ...

-ವರವಿಗಾ:



ಕರಾವಳಿಯಲ್ಲಿ ಕೋಮುವಾದ

ಸೂರ್ಯ ಮತ್ತೆ ಹುಟ್ಟಬೇಕು

ದ.ಕ.ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುಳ್ಯದಿಂದ ಭಟ್ಕಳದವರೆಗೆ ತಾಳ್ಮೆ, ಪ್ರೀತಿ, ಶಾಂತಿ, ಸಹಬಾಳ್ವೆ ಹುಡುಕಿದರೂ ಸಿಗುವುದಿಲ್ಲ. ಈ ಪ್ರದೇಶದ ಯಾವುದೇ 'ಓದಿದ' ವ್ಯಕ್ತಿಯ ಪ್ರತಿಕ್ರಿಯೆ ಕಂಡರೆ 'ಮುಸಲ್ಮಾನ' ಎಂಬುದು ಮನುಷ್ಯರಿಗೆ ಸಂಬಂಧಿಸಿದ್ದು ಅನ್ನುವುದನ್ನೇ ಒಪ್ಪುವುದಿಲ್ಲ. ಇಲ್ಲಿಯ ಶಿಕ್ಷಕರು, ಸಾಧಾರಣ ಆಟೋ ಡ್ರೈವರ್, ಫಿಟ್ಟರ್, ಪೊಲೀಸ್ ಪೇದೆಗಳ ಮಾತಿನ ಧಾಟಿಯೇ ಹಾಗಾಗಿ ಹೋಗಿದೆ.


ಕರಾವಳಿ ಕರ್ನಾಟಕ ನೈಸರ್ಗಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಮೃದ್ಧ ಪ್ರದೇಶ ನಿಜವಿರಬಹುದು. ಆದರೆ ಮನುಷ್ಯನಿಗೆ ಇವಿಷ್ಟೇ ಸಾಲದು. ಬದುಕಿನ ಜೀವಸೆಲೆಯಾದ ಶಾಂತಿ ಪ್ರೀತಿಗೆ ಇಲ್ಲಿ ಬರಗಾಲ ಬಂದಿದೆ. ಹಲ್ಲೆ ಮತ್ತು ಹಿಂಸೆಯನ್ನು ಸ್ಫುರಿಸುವ ಕೋಮುವಾದಕ್ಕೆ ಅನಕ್ಷರತೆ ಮತ್ತು ಅನಾಗರಿಕತೆ ಕಾರಣ ಎನ್ನುವ ವಿಚಾರ ಚಾಲ್ತಿಯಲ್ಲಿತ್ತು, ಆದರೆ ಭಾರತೀಯ ಕೋಮುವಾದ ಮತ್ತು ರಾಷ್ಟ್ರೀಯ ವಾದಗಳ ಬಗ್ಗೆ ಭಾರೀ ಬರೆದಿರುವ ಖ್ಯಾತ ಇತಿಹಾಸಕಾರ ಬಿಪಿನ್ ಚಂದ್ರ ಹೇಳಿರುವುದೇ ಬೇರೆ. ಯಾವ ಪ್ರದೇಶ ಶೈಕ್ಷಣಿಕವಾಗಿ ಮುಂದುವರಿದಿದೆಯೋ ಅಲ್ಲೆಲ್ಲಾ ಕೋಮುಗಲಭೆಗಳು ಕಂಡುಬಂದಿವೆ. ಅಂದರೆ ಓದಿರುವ ಜನರು ಹೆಚ್ಚು ಕೋಮುವಾದಿಗಳಾಗಿರುವುದಕ್ಕೆ ನಮ್ಮ ಶಿಕ್ಷಕರು, ಮಾಧ್ಯಮಗಳ ಪ್ರಭಾವಕ್ಕೆ ಒಳಗಾದವರು ಹೆಚ್ಚು ಮತಿಭ್ರಮಣೆಗೆ ಒಳಗಾಗುತ್ತಾರೆ ಎಂದಾಯಿತು. ಇದು ಕರ್ನಾಟಕ ಕರಾವಳಿಯ ಮಟ್ಟಿಗೂ ಸರಿ ಎನಿಸುತ್ತದೆ. ಏಕೆಂದರೆ ದ.ಕ.ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುಳ್ಯದಿಂದ ಭಟ್ಕಳದವರೆಗೆ ತಾಳ್ಮೆ, ಪ್ರೀತಿ, ಶಾಂತಿ, ಸಹಬಾಳ್ವೆ ಹುಡುಕಿದರೂ ಸಿಗುವುದಿಲ್ಲ, ಈ ಪ್ರದೇಶದ ಯಾವುದೇ 'ಓದಿದ' ವ್ಯಕ್ತಿಯ ಪ್ರತಿಕ್ರಿಯೆ ಕಂಡರೆ 'ಮುಸಲ್ಮಾನ' ಎಂಬುದು ಮನುಷ್ಯರಿಗೆ ಸಂಬಂಧಿಸಿದ್ದು ಅನ್ನುವುದನ್ನೇ ಒಪ್ಪುವುದಿಲ್ಲ, ಇಲ್ಲಿಯ ಶಿಕ್ಷಕರು, ಸಾಧಾರಣ ಆಟೋ ಡ್ರೈವರ್, ಫಿಟ್ಟರ್, ಪೊಲೀಸ್ ಪೇದೆಗಳ ಮಾತಿನ ಧಾಟಿಯೇ ಹಾಗಾಗಿ ಹೋಗಿದೆ. ಕರಾವಳಿಯ ಮುಸಲ್ಮಾನರು ಇಂದು ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಪತನಭಯದಲ್ಲಿ ಬದುಕುವಂತಾಗಿದೆ. ಕಾನೂನು ಮತ್ತು ಧರ್ಮ ನಿರಪೇಕ್ಷತೆ ಅಪಾಯದಲ್ಲಿದೆ. ಇಂತಹ ಆತಂಕಕಾರಿ ಪರಿಸ್ಥಿತಿಗೆ ಕಾಂಗ್ರೆಸನ್ನೋ ಬಿಜೆಪಿಯನ್ನೋ ಗುರಿ ಇಟ್ಟು ಟೀಕಿಸುವುದು ಸುಲಭ. ಆದರೆ, ಇದರ ಒಳಸುರುಳಿಗಳೇ ಬೇರೆ. ನಾವಿಲ್ಲಿ ಬದುಕನ್ನು ಎದುರಿಸುತ್ತಿರುವುದು ಸಾಂಸ್ಕೃತಿಕ ಮತ್ತು ಸಾಮಾಜಿಕ ಆತಂಕದಲ್ಲಿ.

ನಮ್ಮ ಹಿಂದಿನ ತಲೆಮಾರಿನ ಅನುಭವಗಳೇ ಬೇರೆ. ಚಾರಿತ್ರಿಕವಾಗಿ ತುಳುನಾಡಿನ ದೇವಸ್ಥಾನ, ದೈವಸ್ಥಾನಗಳಲ್ಲಿ ಮುಸಲ್ಮಾನರೇ ತೇರುಕಟ್ಟುವವರು, ವಾದ್ಯದವರು, ಬೆಡಿ-ಬ್ಯಾಂಡಿನವರು. ವಾರ್ಷಿಕ ನೇಮ ಉತ್ಸವಗಳಲ್ಲಿ ದೈವಗಳೇ ಅವರನ್ನು ವಿಶೇಷವಾಗಿ ಕರೆದು ಬೂಳ್ಯ (ಪ್ರಸಾದ) ನೀಡುತ್ತವೆ. ಕೆಲವು ದೇವಸ್ಥಾನಗಳಲ್ಲಿ ಮುಸಲ್ಮಾನರೇ ಧರ್ಮಾಧಿಕಾರಿಗಳಾಗಿದ್ದರು. ಊರ ಜಾತ್ರೆಗಳಲ್ಲಿ ಅವರದ್ದೇ ಮಣಿಸರಕಿನ ಅಂಗಡಿ, ತಿರುಗುವ ತೊಟ್ಟಿಲು. ಆದರೆ ಇಂದು ಊರ ಜಾತ್ರೆಯಲ್ಲಿ ಮುಸಲ್ಮಾನನೊಬ್ಬ ಕಾಣಿಸಿಕೊಂಡರೆ ಅಲ್ಲೇ ಕೋಮುಗಲಭೆ ಶುರು!

ಮೊಗವೀರರು ಮೀನು ಹಿಡಿದರೆ, ಬ್ಯಾರಿಗಳು ಅವುಗಳನ್ನು ಮಾರಾಟ ಮಾಡಿಕೊಡುತ್ತಾರೆ. ಇದು ನಮ್ಮ ಕಡಲತೀರದ ಆರ್ಥಿಕತೆಯ ನಿದರ್ಶನ. ವಾಹನ ಸೌಕರ್ಯಗಳಿಲ್ಲದ, ಮಳೆಗಾಲದ ಆ ದಿನಗಳಲ್ಲಿ ಪೇಟೆಗೆ ಬಂದ ಹಳ್ಳಿಗರು ಲಾಡ್ಜುಗಳಿಲ್ಲದ ಕಾರಣ ಮುಸಲ್ಮಾನರ ಮನೆಗಳಲ್ಲೇ ರಾತ್ರಿ ಉಳಿದುಕೊಂಡು ಬೆಳಕು ಹರಿದ ಮೇಲೆ ಮನೆಕಡೆ ಪ್ರಯಾಣ ಬೆಳೆಸುತ್ತಿದ್ದರು. ಮುಸಲ್ಮಾನರು ಸಣ್ಣಪುಟ್ಟ ವ್ಯಾಪಾರ ಮಾಡುತ್ತಾ ರಸ್ತೆ ಬದಿಯಲ್ಲಿ ಬದುಕು ಬೆಳೆಸಿಕೊಂಡು ಬಂದವರು. ಅವರು ಯಾವತ್ತೂ ಹಳ್ಳಿಕಡೆಯ ಹಿಂದುಳಿದವರ ಆಸ್ತಿಮೇಲೆ ಕಣ್ಣು ಹಾಕಿರಲಿಲ್ಲ (ಆದರೆ ಜನಾಭಿಪ್ರಾಯ ಬೇರೆ ಇದೆ).

ವಾಸ್ತವದಲ್ಲಿ ನಮ್ಮ ಹಿಂದೂ ಹೆಣ್ಣು ಮಕ್ಕಳಿಗೆ ಮುಸಲ್ಮಾನರ ಮನೆಗಳಲ್ಲಿ ರಾತ್ರಿ ಕಳೆಯುವುದು ಸಮಸ್ಯೆಯಾಗಿರಲೇ ಇಲ್ಲ, ಆದರೆ ಇಂದು ಯಾವುದೇ ಸನ್ನಿವೇಶದಲ್ಲಿ ಒಬ್ಬ ಹಿಂದೂ ಹೆಣ್ಣು ಮಗಳು ಮುಸಲ್ಮಾನನೊಬ್ಬನ ಜೊತೆಯಲ್ಲಿ ಸಾರ್ವಜನಿಕವಾಗಿ ವ್ಯವಹರಿಸುವುದೂ ಗಲಭೆಗೆ ಕಾರಣವಾಗುತ್ತಿದೆ. ಮೊನ್ನೆ ತಾನೆ ಸಿ.ಪಿ.ಎಂ. ಮುಖಂಡ ರಾಬರ್ಟ್ ಡಿಸೋಜಾರ ಮನೆಗೆ ಅವರ ಕಚೇರಿಯ ಕೆಲಸಗಾರ್ತಿ ಹುಡುಗಿ ಊಟಕ್ಕೆ ಹೋಗಿದ್ದು ಭಾರೀ ಗಲಾಟೆಗೆ ಕಾರಣವಾಯ್ತು. ಕಲ್ಲಡ್ಕದಲ್ಲಿ ಸುಳ್ಯದ ಮಹಿಳೆ ಮುಸಲ್ಮಾನರೊಬ್ಬರೊಂದಿಗೆ ಮುಖ್ಯರಸ್ತೆಯಲ್ಲಿ ಚಾ ಕುಡಿದಿದ್ದೂ ಗಲಾಟೆಗೆ ಎಡೆಮಾಡಿಕೊಟ್ಟಿತು. ಎರಡೂ ಪ್ರಕರಣಗಳಲ್ಲಿ ಪೊಲೀಸರು ಮಧ್ಯ ಪ್ರವೇಶಿಸಿದ್ದರಿಂದ ಮತ್ತು ತಪ್ಪುಗಳೆಂದು ಸಾಬೀತುಪಡಿಸಲಾಗದಿದ್ದುದರಿಂದ ಸದ್ಯ ಅಲ್ಲಿಗೆ ಮುಗಿದಿದೆ. ಇಂತಹ ಸಾವಿರಾರು ನಿದರ್ಶನಗಳನ್ನು ನೀಡಬಹುದು.


ಕರಾವಳಿಯ ಮುಸಲ್ಮಾನರು, ಕ್ರೈಸ್ತರು, ಹಿಂದೂಗಳಿಗೆ ಪಾರಂಪರಿಕವಾಗಿ ಶತ್ರುಗಳಾಗಿರಲಿಲ್ಲ. ಯಾವ ಮುಸಲ್ಮಾನನೂ ಹಿಂದೂಗಳ ದೇವಾಲಯಗಳಿಗಾಗಲಿ, ದೈವಸ್ಥಾನಗಳಿಗಾಗಲಿ ತೊಂದರೆ ಮಾಡಿದ ನಿದರ್ಶನಗಳಿಲ್ಲ, ಬದಲಿಗೆ ಪಂಜದ ಪಂಚಲಿಂಗೇಶ್ವರ ದೇವಾಲಯದ ಪಂಚ ಲೋಹದ ವಿಗ್ರಹ, ನಗ ನಾಣ್ಯಗಳನ್ನು ಎಣ್ಮೂರು ಬಲ್ಲಾಳನೇ ಕದ್ದೊಯ್ದಾಗ ಪಿಲಿಕುಂಇಬ್ಯಾರಿ ಆತನನ್ನು ಅಡ್ಡಕಟ್ಟಿ, ಕಾದಾಡಿ ವಿಗ್ರಹವನ್ನು ಮರುಸ್ಥಾಪನೆ ಮಾಡಿದಂತಹ



ನೂರು ಚಾರಿತ್ರಿಕ ಉದಾಹರಣೆಗಳನ್ನು ಕೊಡಬಹುದು. ಇಂದೂ ಕೂಡಾ ಪೊಲೀಸ್ ವರದಿಗಳನ್ನು ಗಮನಿಸಿದರೆ. ದೇವಾಲಯದ ಹರಕೆ ಹುಂಡಿ ಕದಿಯುವವರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಹಿಂದೂಗಳೇ! ಕೊಲ್ಲೂರು, ಕಟೀಲು ಸುಬ್ರಹ್ಮಣ್ಯದ ದೇವಾಲಯದ ಆಡಳಿತ ಮಂಡಳಿಗಳಿಗೆ ಜಿದ್ದಾಜಿದ್ದಿ ಹೋರಾಡುವವರು ಹಿಂದೂಗಳೇ, ಧಾರ್ಮಿಕ ದತ್ತಿ ಸಚಿವ ನಾಗರಾಜ ಶೆಟ್ಟರ ಶನಿಸಂತಾನದವರೇ ಆಗಿದ್ದಾರೆ. ಯಾಕೆಂದರೆ ಭಾರೀ ಹರಕೆ ಹಣ ಸಂಗ್ರಹವಾಗುವ ಇಲ್ಲಿ ಕಾನೂನುಬದ್ಧವಾಗಿ ಲೂಟಿ ಮಾಡುವ ಅವಕಾಶ ದೊರೆಯುತ್ತದೆ.

ಕರಾವಳಿಯ ಇಂದಿನ ಸಮಸ್ಯೆ ಇರುವುದು ಹೊಸತಲೆಮಾರಿನ ಹಿಂದುಳಿದ ಜಾತಿ, ಪಂಗಡಗಳಿಗೆ ಸೇರಿದ ವಿದ್ಯಾವಂತ ಯುವಜನರಲ್ಲಿ, ಜಾಗತೀಕರಣದ ಹಿನ್ನೆಲೆಯಲ್ಲಿ ಉದ್ಭವಿಸಿರುವ ನಿರುದ್ಯೋಗಿಗಳಿಗೆ ಸಂಘಪರಿವಾರದವರು ತಮ್ಮದೇ ರೀತಿಯ 'ಕಸುಬು' ಕಲಿಸಿಕೊಟ್ಟಿದ್ದಾರೆ. ಕ್ರೈಸ್ತ ಮಿಶನರಿಗಳಿಂದ ಆರಂಭವಾದ ಶೈಕ್ಷಣಿಕ ಕ್ರಾಂತಿ ಕರಾವಳಿಯಲ್ಲಿ ಬ್ರಾಹ್ಮಣವರ್ಗದ ಕೈಗೊಂಬೆಯಂತಿದ್ದ ಬೌದ್ಧಿಕ ಕ್ಷೇತ್ರದಲ್ಲಿ ಗೌಡ, ಬಂಟ, ಬಿಲ್ಲವ, ದೇವಾಡಿಗ, ಗಾಣಿಗ ಮೊದಲಾದ ಹಿಂದುಳಿದವರಿಗೆ ಇತಿಹಾಸದಲ್ಲೇ ಮೊದಲ ಬಾರಿ ಎಂಬಂತೆ ಅವಕಾಶ ಮಾಡಿಕೊಟ್ಟಿತು. ಈ ಸಮುದಾಯಗಳು ಸಿಕ್ಕ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡು ಮುಂದೆ ಬಂದಿರುವುದು ಈಗ ಇತಿಹಾಸ. ಈ ಕಾರಣದಿಂದಾಗಿಯೇ ಕರಾವಳಿಯ ಈ ಭಾಗ ಕನ್ನಡದ ಪ್ರಥಮ ಪತ್ರಿಕೆ, ಮೊದಲ ಕಾದಂಬರಿ ಹೀಗೆ ಸಾಹಿತ್ಯದ ಹತ್ತಾರು ಹೆಗ್ಗಳಿಕೆಗೆ ಕಾರಣವಾಗಿದೆ. ಕ್ರೈಸ್ತರ ಅಗಾಧವಾದ ಸಂಘಟನಾ ಸಾಮರ್ಥ್ಯ ಮತ್ತು ಸಂಸ್ಥೆಗಳು ಶಿಕ್ಷಣ, ಆರೋಗ್ಯ ವೃತ್ತಿ ತರಬೇತುಗಳು ಇಲ್ಲಿಯ ಹಿಂದುಳಿದ ಸಮುದಾಯಗಳ ಪಾಲಿಗೆ ವರದಾನವಾಯಿತು. ಆದರೆ ಇವರ ಆಧುನಿಕ ತಳಿ ಮಾತ್ರ ಹಿಂದೂವೇತರ ಜನರನ್ನು ಒಟ್ಟಿಗೆ ಬದುಕಲು ಬಿಡುತ್ತಿಲ್ಲ, ಇಂದು ಹಳ್ಳಿಹಳ್ಳಿಗಳಲ್ಲಿ ಶಾಲೆ ಕಾಲೇಜುಗಳಿವೆ. ಎಲ್ಲಾ ಮನೆಗಳಲ್ಲೂ ಪದವೀಧರರಿದ್ದಾರೆ. ಆದರೆ ತಲೆ ತುಂಬಾ ವಿಷ ಮತ್ತು ಅಸಹನೆ.

ಇಲ್ಲಿಯ ಹಿಂದುಳಿದ ಮತ್ತು ದಲಿತರನ್ನು ಹದ್ದುಬಸ್ತಿನಲ್ಲಿಡಲು ಹಿಂದೂ ಮೂಲಭೂತವಾದಿಗಳು ಕಂಡುಕೊಂಡ ಮಾಧ್ಯಮವೇ ಸಂಘ ಪರಿವಾರದ ವಿಸ್ತರಣೆ. ತುರ್ತು ಪರಿಸ್ಥಿತಿಯ ಕಾಲದಲ್ಲೂ ಕರಾವಳಿಯ ಕಲ್ಲಡ್ಕ ಕೋಮುವಾದಿಗಳ ಕೇಂದ್ರವಾಗಿತ್ತು, ನಂತರದ ದಿನಗಳಲ್ಲಿ ಹಳ್ಳಿ-ಹಳ್ಳಿಗಳಲ್ಲೂ ಆರೆಸ್ಸೆಸ್ ತನ್ನ ಶಾಖೆಗಳನ್ನು ವಿಸ್ತರಿಸಿಕೊಂಡಿದೆ. ಆ ಮೊದಲು ಹೊಸ ತಲೆಮಾರಿನ ಮಕ್ಕಳನ್ನು ಶಾಲಾ ಮಟ್ಟದಲ್ಲೇ ಎ.ಬಿ.ವಿ.ಪಿ.ಯ ತೆಕ್ಕೆಯೊಳಗೆ ತಂದುಕೊಳ್ಳುತ್ತಾ ಬಂದಿದೆ. ಬಾಬ್ರಿ ಮಸೀದಿ ವಿವಾದದ ನಂತರ ಭಜರಂಗದಳ, ಹೈಸ್ಕೂಲು, ಕಾಲೇಜು ಮುಗಿಸಿದ ನಿರುದ್ಯೋಗಿಗಳಿಗೆ ಆಶ್ರಯತಾಣವಾದರೆ, ಶಿಕ್ಷಕರಿಗೆ, ಸರಕಾರಿ, ಖಾಸಗಿ ನೌಕರರಾಗಿ ಸಮಾಜದಲ್ಲಿ ಮಾದರಿ ಎನಿಸಿದವರಿಗೆ ವಿಶ್ವ ಹಿಂದೂ ಪರಿಷತ್ತು ಸೂಕ್ತ ನೆಲೆ ಒದಗಿಸಿತು. ದಲಿತರನ್ನು ಸಂಘಟಿಸುವುದಕ್ಕೆ ದೇವಾಲಯಗಳನ್ನು ಆಯ್ಕೆ ಮಾಡಿಕೊಳ್ಳಲಿಲ್ಲ, ಬದಲಿಗೆ ಕೇರಿಗೊಂದರಂತೆ ಭಜನಾ ಸಂಘ ಹುಟ್ಟು ಹಾಕಲಾಯಿತು. ಇಂದು ಶ್ರೀ



ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಪ್ರಮುಖ ಕಾರ್ಯಕ್ರಮ ಭಜನೆ ಮಾಡುವುದು ಮತ್ತು ಭಜನೆ ಮೂಲಕ ಜನ ಸಂಘಟನೆ. ಈ ಯೋಜನೆಗಳು ಕಲ್ಲಡ್ಕದ ಪ್ರಭಾಕರ ಭಟ್ಟರ ಕಾರಸ್ಥಾನ. ಕಲ್ಲಡ್ಕದ ರಾಮಭಜನಾ ಮಂದಿರವೇ ಪಾರ್ಲಿಮೆಂಟು ಮತ್ತು ಸುಪ್ರೀಂಕೋರ್ಟು! ನಿರಂತರವಾಗಿ ಹಿಂದೂ ಸಮಾಜೋತ್ಸವಗಳನ್ನು ಏರ್ಪಡಿಸುತ್ತಾ, ಭಜನೆ ಸಂಕೀರ್ತನೆಗಳನ್ನು ಆಯೋಜಿಸುತ್ತಾ, ಪ್ರತಿಯೊಂದು ಅವೈದಿಕ ಸಂಸ್ಕೃತಿಗಳನ್ನೂ ಮಟ್ಟ ಹಾಕುತ್ತಾ ಬಂದು, ಊರ ಜಾತ್ರೆ, ಹಬ್ಬ ಹರಿದಿನಗಳನ್ನೂ ಬೃಹತ್ ಹಿಂದುವೀಕರಣಕ್ಕೆ ಬಳ[...] ಬಂದಿದ್ದಾರೆ. ಕರಾವಳಿಯ ಗೌಡರು ಮೂಲತಃ ಬ್ರಾ[...] ವಿರೋಧಿಗಳು. ಹೊಸ ಮಡಿಕೆ, ನಾಗರಹಾವು, [...] ಮತ್ತು ಬ್ರಾಹ್ಮಣನನ್ನು ಅಪಶಕುನವೆಂದೇ ಸಾಂಸ್ಕೃತಿ[...] ವಿರೋಧಿಸುತ್ತಾ ಬಂದವರು. ಮದುವೆ ಪೌರೋಹಿ[...] ಕೂಡಾ ಬ್ರಾಹ್ಮಣನಿಗೆ ನಿಷೇಧವಿತ್ತು, ಆದರೆ ಇದೇ [...] ಸಮುದಾಯ ಸಂಪೂರ್ಣವಾಗಿ ಬ್ರಾಹ್ಮಣೀಕರಣಗೊ[...] "ನಾನು ಯಾಕಾಗಿ ಬ್ರಾಹ್ಮಣನಾಗಿ ಹುಟ್ಟಲಿಲ್ಲ" ಎಂ[...] ಪರಿತಪಿಸುವ ಪಾಡಿಗೆ ತಳ್ಳಲ್ಪಟ್ಟಿದೆ. ಇದೇ ಸಮುದಾ[...] ಸೇರಿದ ರಾಜ್ಯ ಬಿ.ಜೆ.ಪಿ. ಅಧ್ಯಕ್ಷ ಡಿ.ವಿ.ಸದಾನಂದ[...] ನಾಯಕತ್ವ ಪಡೆದಿರುವುದೇ ಪಾರಂಪರಿಕವಾಗಿ ಹಿಂ[...] ಮುಸಲ್ಮಾನರ ಸಾಮಾಜಿಕ ಸಾಮರಸ್ಯಕ್ಕೆ ಪ್ರಸಿದ್ಧವಾ[...] ಸುಳ್ಯಕ್ಕೆ ಬೆಂಕಿ ಹಾಕಿದ್ದಕ್ಕೆ. ಸುಳ್ಯದ ರಸ್ತೆಯಲ್ಲಿ [...] ಪ್ರಯಾಣಿಸುತ್ತಿದ್ದ ಪೇಜಾವರ ಸ್ವಾಮಿಗಳ [...] ಮುಸಲ್ಮಾನರು ಕಲ್ಲುಹೊಡೆದಿದ್ದಾರೆಂಬ ನೆಪ ಒಡ್ಡಿ [...] ಸಾಧಾರಣ ಲಾಯರಾಗಿದ್ದ ಸದಾನಂದ ಗೌಡ ಸ[...] ಬಹುಸಂಖ್ಯಾತ ಗೌಡರ ಹುಡುಗರನ್ನು ಛೂಬಿಟ್ಟು ನಿ[...] ಒಂದು ವಾರ ನೂರಾರು ಅಮಾಯಕ ಮುಸಲ[...] ಅಂಗಡಿಗಳಿಗೆ ಬೆಂಕಿ ಇರಿಸಿದ್ದು ಮಾತ್ರವಲ್ಲದೇ ತಾಲ[...] ಮುಸಲ್ಮಾನರ ಮನೆಗಳನ್ನು ಪುಡಿಗೈದು ದೋಚ[...] ಆಯಿತು. ಈ ಪ್ರಕರಣದಲ್ಲಿ ನೂರಾರು ಯುವ[...] ಮೇಲೆ ಕೇಸು ಹಾಕಲ್ಪಟ್ಟು ನ್ಯಾಯಾಲಯಕ್ಕೆ ಅಲೆದ[...] ಪುರುಷೋತ್ತಮ ಗೌಡನೊಬ್ಬನ ಮೇಲೆ ಒಂದೇ ಪ್ರಕ[...] 32 ಕೇಸುಗಳಿದ್ದು, ತಿಂಗಳ ಎಲ್ಲಾ ದಿನ[...] ಕೋರ್ಟಿನಲ್ಲಿರಬೇಕಾಯಿತು. (ಕೇಸು ಹಾಕಿಸಿಕೊಳ್ಳುವವ[...] ಬ್ರಾಹ್ಮಣರ ಮಕ್ಕಳು ಮಾತ್ರ ಇರುವುದಿಲ್ಲ!)

ಬೆಂಕಿ ಹಾಕುವುದರ ಮೂಲಕವೇ ಕರಾವಳಿ[...] ಬಿ.ಜೆ.ಪಿ. ಬೆಳೆಯುತ್ತಾ ಬಂದಿದೆ. ಕೋಮುಗಲಭೆ [...] ನಡೆದಿದೆಯೋ ಅಲ್ಲೆಲ್ಲಾ ಬಿ.ಜೆ.ಪಿ.ಗೆ ಒಳ್ಳೆಯ [...] ಬರುತ್ತದೆ. ಅದು ಪಂಚಾಯತ್ ಚುನಾವಣೆ [...] ಲೋಕಸಭೆ ಇರಲಿ, ಇದನ್ನು ಚೆನ್ನಾಗಿ ಕಲಿಸಿಕೊ[...] ರಾಷ್ಟ್ರ ನಾಯಕ ಅಡ್ವಾಣಿ. ಅಡ್ವಾಣಿಯವರು ಬಿ.ಜೆ.ಪಿ[...] ಒಂದು ಲೋಕಸಭಾ ಚುನಾವಣಾ ಪ್ರಚಾರವನ್ನು [...] ಚನ್ನಕೇಶವ ದೇವಾಲಯದ ಅಂಗಳದಿಂ[...] ಆರಂಭಿಸಿದರು. ಬಾಬ್ರಿ ಮಸೀದಿ ಧ್ವಂಸ ಖ್ಯಾತಿ[...] ಕಲ್ಯಾಣಸಿಂಗ್ ಕೂಡಾ ಇಲ್ಲಿಂದಲೇ ಪ್ರಚಾರ ಆರಂಭಿಸಿ[...] ಆ ದಿನಗಳಲ್ಲೇ ಕರ್ನಾಟಕದ ಗದ್ದುಗೆ ಪಡೆಯ[...] ಕರಾವಳಿಯ ಈ ಪುಟ್ಟ ತಾಲೂಕನ್ನೇ ಹೆಬ್ಬಾಗಿಲೆ[...] ಪರಿಗಣಿಸಲಾಗಿತ್ತು, ನಂತರದಲ್ಲಿ ಗೇಣಿದಾರರ ಚಾಂಪಿಯ[...] ಕಾಂಗ್ರೆಸ್ ನಾಯಕ ಜನಾರ್ದನ ಪೂಜಾರಿಯ[...] ಲೋಕಸಭಾ ಚುನಾವಣೆಯ ಸೋಲು, ಬಿಜೆಪಿ[...] ಧನಂಜಯಕುಮಾರ್, ಮೂರು ಬಾರಿ ಗೆದ್ದ [...] ಬಿ.ಜೆ.ಪಿ. ಗೆಲುವಿನಿಂದ ಹಿಂದೆ ಸರಿಯಲೇ ಇಲ್ಲ. [...] ಕರಾವಳಿಯಲ್ಲಿ ಕಾಂಗ್ರೆಸ್ ಇಲ್ಲ ಎನ್ನುವಂತಾ[...] ರಾಜಕೀಯವಾಗಿ ಇದ್ದರೂ ಸಾಂಸ್ಕೃತಿಕವಾಗಿ ಕಾಂ[...] ಬಿ.ಜೆ.ಪಿ.ಗಿಂತ ಭಿನ್ನವಾಗಿ ಉಳಿದಿಲ್ಲ, ಯಾವತ್ತು [...] ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆಯ[...] ಬಿಜೆಪಿಯೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂ[...] ಅಂದಿನಿಂದ ಕರಾವಳಿಯಲ್ಲಿ ಬಿಜೆಪಿ ಸಾರ್ವತ್ರಿಕ[...] ಸ್ವೀಕಾರಾರ್ಹವೆನಿಸಿತು. ಹಿಂದೊಮ್ಮೆ ಸ್ವತಂತ್ರ ಪಕ್ಷ, ನ[...] ಜನತಾ, ಜನತಾ ದಳ ಎನಿಸಿಕೊಳ್ಳುತ್ತಾ ಬಂ[...] ಕಾಂಗ್ರೆಸೇತರ ಶಕ್ತಿಗಳೇ ಇಂದು ಬಿಜೆಪಿಗೆ ರಾಜಕೀಯ[...] ಮತಾಂತರ ಹೊಂದಿವೆ. ಜೊತೆಗೆ ಸಾಂಸ್ಕೃತಿಕ[...] ಸಾಮಾಜಿಕವಾಗಿ ಕೋಮುವಾದಿಗಳಾಗಿದ್ದಾರೆ.

ಕೇವಲ ಬಿಜೆಪಿಯನ್ನು ನಿಯಂತ್ರಿಸುವುದ[...] ನಮಗಿಂದು ಒಬ್ಬ ಲಾಲು, ಒಬ್ಬ ಮುಲಾಯಂ [...] ಯಾಕೆಂದರೆ ಬಾಬ್ರಿ ಮಸೀದಿ - ರಥಯಾ[...] ದಿನಗಳಲ್ಲಿ ಉತ್ತರ ಪ್ರದೇಶ, ಬಿಹಾರದ ಕೋಮುದ[...] ಯನ್ನು ಸಮರ್ಥವಾಗಿ ನಿಭಾಯಿಸಿ ತೋರಿಸಿ[...] ನಮ್ಮ ಗ್ರಹಚಾರಕ್ಕೆ ಕನಿಷ್ಠ ಅಷ್ಟು ಸೊಯ [...] ನಾಯಕರು ಕರ್ನಾಟಕದಲ್ಲಿ ಹುಟ್ಟಲ್ಲ, ಆದರೆ, [...] ಪರಿಸ್ಥಿತಿ ಅದನ್ನೂ ಮೀರಿಸಿದೆ. ನಮ್ಮ [...] ಮಕ್ಕಳಲ್ಲೂ ಮುಸಲ್ಮಾನ ದ್ವೇಷದ ವಿಷ [...] ಬಿತ್ತಿಯಾಗಿದೆ. ಕರಾವಳಿಯ ಗೌಡರು, ಬಂ[...] ಬಿಲ್ಲವ, ದೇವಾಡಿಗರಿಗೆ ಬುದ್ಧಿ ಹೇಳುವವ[...] ಈ ಬಾರಿ, ಮೊಗವೀರರು ಗಲಭೆಯಲ್ಲಿ [...] ಯಾಗದ್ದು ಒಂದು ಆಶಾಕಿರಣ ಮೂಡಿದಂತಾ[...] ಸುಳ್ಯ, ಪುತ್ತೂರು, ಬೆಳ್ತಂಗಡಿಯ ಬಹುಸ[...] ಗೌಡರಿಗೆ ಡಿ.ವಿ.ಯವರು ಬೆಂಕಿಪೆಟ್ಟಿಗೆ ಕಳು[...] ವೆಂಬುದು ನಂತರ ತಿಳಿಯಿತು. ಈ ಬಾರಿ ಈ ಪ್ರದೇ[...] ಗಲಭೆಯಾಗಿಲ್ಲ, ಆದರೆ, ಪೊಲೀಸ್ ಸ್ಟೇಷನ್[...] ಭಜರಂಗದಳದ ಕೇಂದ್ರಗಳಾಗಿ ಪರಿವರ್ತನೆ ಹೊಂ[...] ಸುಳ್ಯದ ಸ್ಟೇಶನ್‌ನಲ್ಲಿ ಜಾನುವಾರು ಕಟ್ಟಹಾಕಲು [...] ನಿರ್ಮಾಣವಾಗಿದೆ (ದಳದ ನಾಯಕರೊಬ್ಬರ ಕೊ[...] ಭಜರಂಗದಳ ಕ್ರಿಮಿನಲ್‌ಗಳು ಬಲಾತ್ಕಾರವಾಗಿ [...] ದನಗಳಿಗೆ ಹುಲ್ಲು ಹಾಕಿ ಸೆಗಣಿ ಎತ್ತುವ ಪೊಲೀಸಿನವರಿಗೆ ವಹಿಸಿಕೊಡಲಾಗಿದೆ.

-ಎ.ಕೆ. ಹಿಂಮಕರ,

ಒಂದು ಪತ್ರ

ಪ್ರಿಯ ಗೌರಿ,

ನನ್ನ ಸರ್ವಸ್ವವಾಗಿದ್ದ ನನ್ನ ಅಮ್ಮನನ್ನು ನವೆಂಬರ್ 15 ರಂದು ಕಳೆದುಕೊಂಡೆ. ಆದರ್ಶ ಶಿಕ್ಷಕಿಯಾಗಿದ್ದ ಅಮ್ಮ, ವತ್ಸಲೆಗೆ ತಮ್ಮ ಕಣ್ಣುಗಳನ್ನು ದಾನ ಮಾಡಬೇಕೆಂದಿತ್ತು, ತನ್ನ ದೇಹವನ್ನು ಮೆಡಿಕಲ್ ಕಾಲೇಜಿಗೆ ಕೊಡಬೇಕೆಂದಿತ್ತು, ನನ್ನ ಸುತ್ತಲ ಜನ ಯಾವುದಕ್ಕೂ ಆಸ್ಪದವೀಯಲಿಲ್ಲ. ನನ್ನ ಅಮ್ಮನ ಅಂತ್ಯ ಸಂಸ್ಕಾರ, ವೈಕುಂಠ ಸಮಾರಾಧನೆ ಹೆಸರಿನಲ್ಲಿ ಈ ಬ್ರಾಹ್ಮಣ ಸಮುದಾಯದ ಜನ ಒಬ್ಬಂಟಿಗಳಾದ ನನ್ನನ್ನು ಮಾನಸಿಕವಾಗಿ ಯಾವ ಪರಿ ಹಿಂಸಿಸಿದರು ಎಂದರೆ ನಾನು ಅಳುತ್ತಿರುವುದು ಅಮ್ಮ ಅಗಲಿದ್ದಕ್ಕೋ ಅಥವಾ ಕರ್ಮಕಾಂಡಗಳನ್ನು ತಡೆಯಲಾಗದಕ್ಕೋ, ನನಗೆ ತಿಳಿಯದಾಗಿತ್ತು.

ಆ ದರ್ಭೆ, ಪಿಂಡ, ಅಪಸವ್ಯ ಸ್ವಾಹಾ, ಕಾಗೆ-ಹಸು ಛೆಃ! ಬೇಡಮ್ಮ ಬೇಡ. ಅಮ್ಮ ದೇವರನ್ನು ದುಡಿಮೆ ಎಂದು ನಂಬಿದ್ದಳು. ಈ ಧಾರ್ಮಿಕ ವಿಧಿ-ವಿಧಾನಗಳೆಂದರೆ ಅವಳಿಗಾಗದು. ಸಾಮಾಜಿಕ ಚೌಕಟ್ಟಿನಿಂದ ಹೊರಬಂದು ಬದುಕಿದ್ದ ಗಟ್ಟಿಗಿತ್ತಿ ಅದೃಷ್ಟವಂತೆ ಆಕೆ!

83 ವರ್ಷ ಆರೋಗ್ಯವಾಗಿದ್ದ ಅಮ್ಮ ಕೊನೆ ದಿನಗಳಲ್ಲಿ ನನಗೆ ಮಗುವಾಗಿ ಬಿಟ್ಟಳು ಗೌರಿ. ಪಿಳಿಪಿಳಿ ಕಣ್ಣುಬಿಡುತ್ತ ಮಲಗಿದ್ದಳು. ಮುದ್ದುಮುದ್ದಾಗಿ ಮಾತು ಆಡಿದಳು. ಉಬ್ಬಿದ ಕೆನ್ನೆಗಳಿಗೆ ಪೌಡರ್ ಹಚ್ಚಿ ಬಾಯಿಗೆ ತುತ್ತು-ನೀರು ತುಂಬಿಸಿ, ಮೆತ್ತನ್ನ ಕಾಲುಗಳ ನಡುವೆ ಹೊರಬಿದ್ದ ಜಲಮಲ ತೆಗೆದು, ರಮಿಸಿ, ಕೊನೆ ರಾತ್ರಿಯ ತನಕ ಜೋಗುಳ ಹಾಡಿದೆ! ಇದು ನನಗೆ ಪುತ್ರಿ ಶೋಕ, ನಿರಂತರ! ಸಾವಿನ ನೆರಳಲ್ಲಿದ್ದ ಆ ಮುದ್ದುಮಗುವನ್ನು ನೋಡುತ್ತ ಬರೆದ ಕವಿತೆಯನ್ನು 'ಲಂಕೇಶ್'ಗೆ ಕಳುಹಿಸಿರುವೆ. ಜುಟ್ಟುಂಭಟ್ಟರ ವ್ಯಾವಹಾರಿಕ ವೈರಾಗ್ಯದ ನುಡಿಗಳು ನನಗೆ ಬೇಡ! ನಿಮ್ಮ ಮತ್ತು ಓದುಗ ಬಂಧುಗಳ ಭಾವನಾತ್ಮಕ ಆಸರೆ ಬೇಕು, ಕೊಡುವಿರಲ್ಲವೆ?

ಮಗು

ತೊಟ್ಟಿಲಲ್ಲೊಂದು ಪುಟ್ಟಜೀವ
ಏನದರ ಸ್ನಿಗ್ಧಭಾವ!
ತುಸು ಕಪ್ಪದರ ಮೈಬಣ್ಣ
ರಂಗುರಂಗಿನ ಕುಲಾವಿ ಚೊಣ್ಣ
ಹಾಲೊಸರುವ ಗಲ್ಲದಲಿ
ಕೆನೆಯೊಡೆದಂತೆ ನಗು
ಹೊಸಬರ ತೋಳ್ಸೆರೆಗೆ
ಹೋಗಲೊಲ್ಲದ ಬಿಗು
ತರಲಿರುವುದೇನೊ ನಾಳೆ
ಚೆಲುವನ್ನೆ ಬಿಂಬಿಸಲಿ
ಈ ಸ್ವಚ್ಛ ಬಿಳಿಹಾಳೆ
ಬಣ್ಣ ಅಪ್ಪನದಂತೆ
ಚಹರೆ ಅಮ್ಮನದಂತೆ
ಯಾರು ಕೊಟ್ಟರು ಹೇಳಿ ಮುಗ್ಧತೆ!



ಉಸಿರ ಪಣವಾಗಿಟ್ಟು
ಉಸಿರಿತ್ತು ಪಡೆದ ಒಡವೆ
ಎದೆಪದಕವಾಗಿರಲು ಬೇಕೆ
ಚಿನ್ನ-ರನ್ನದ ಗೊಡವೆ
ಸತಿ-ಪತಿಗಳ ಶೃಂಗಾರಕೆ
ಪಾವಿತ್ರ್ಯದ ಮೆರುಗು
ತಂದಿತ್ತು ಅರಳಿಸಿದೆ
ಜೀವಸೃಷ್ಟಿಯ ಬೆರಗು


-ಕೆ.ವಿ. ಚಂದ್ರಜ್ಯೋತಿ,
ತುಮಕೂರು

ಡಿಸೆಂಬರ್ 6 ರ ಕರಾಳ ನೆನಪು:

ಮತ್ತೆ ಅದೇ ಪ್ರಶ್ನೆ: ಯಾರು ಭಾರತೀಯರು



ಭಾರತದ ಸಂವಿಧಾನ ಈ ದೇಶದ ಪ್ರಜೆಯಾಗಲು ಯಾವ ಅರ್ಹತೆಯನ್ನೂ ಕಡ್ಡಾಯಗೊಳಿಸಿಲ್ಲ. ಭಾರತದ ನೆಲದಲ್ಲಿ ಹುಟ್ಟಿದವರೆಲ್ಲರೂ (ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ವಲಸೆ ಬಂದಿರುವವರೂ) ಭಾರತದ ಪ್ರಜೆಗಳೇ. ಯಾವ ಧರ್ಮಕ್ಕೂ ಅದು ಸ್ವಕೀಯ ಎಂದು ಮಣೆ ಹಾಕುವುದೂ ಇಲ್ಲ; ಪರಕೀಯ ಎಂದು ಹೊರಗಿಡುವುದೂ ಇಲ್ಲ.



ಮೊನ್ನೆ 27ರಂದು ಸೋಮವಾರ ಮಂಗಳೂರಿನಲ್ಲಿ ನಡೆದ ಸಭೆಯೊಂದರಲ್ಲಿ ಶ್ರೀ ಪೇಜಾವರ ಮಠಾಧೀಶರು ಹೀಗೆ ಹೇಳಿದರು: "ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ವಿರೋಧಿಗಳು ಭಾರತೀಯರಲ್ಲ; ರಾಮನನ್ನು ಪರಕೀಯ ಎಂದು ಭಾವಿಸುವವರು ಈ ದೇಶದ ಪ್ರಜೆಗಳಾಗಲು ಅರ್ಹರಲ್ಲ. ರಾಮಮಂದಿರ ನಿರ್ಮಾಣ ಹಿಂದುತ್ವದ ಪ್ರಶ್ನೆಯಲ್ಲ; ಅದು ಭಾರತೀಯತೆಯ ಪ್ರಶ್ನೆ. ಹಾಗಾಗಿ ಮುಸ್ಲಿಮ್ ಮತ್ತು ಕ್ರೈಸ್ತ ಬಾಂಧವರು ಸಹ ಶ್ರೀರಾಮಚಂದ್ರ ತಮಗೂ ಸಂಬಂಧಿಸಿದವ ಎಂದು ಹೇಳಬೇಕು." ತಮ್ಮ ಭಾಷಣದಲ್ಲಿ ಅವರು ಬುದ್ಧಿಜೀವಿಗಳನ್ನೂ ಟೀಕಿಸುತ್ತ "ಅಲ್ಪಸಂಖ್ಯಾತರಿಗೆ ಏನಾದರೂ ಆದರೆ ಬೊಬ್ಬೆ ಹೊಡೆಯುತ್ತಾರೆ. ಆದರೆ ಬಹುಸಂಖ್ಯಾತ ಹಿಂದೂಗಳ ಮೇಲೆ ಯಾವ ರೀತಿ ದೌರ್ಜನ್ಯ ನಡೆದರೂ ಮಾತಾಡುವುದಿಲ್ಲ" ಎಂದೂ ಹೇಳಿದರು.


1992 ಡಿಸೆಂಬರ್ 6 ರಂದು, ಪೇಜಾವರ ಶ್ರೀಗಳ ಸಮ್ಮುಖದಲ್ಲೇ ಬಾಬರಿ ಮಸೀದಿ ಧ್ವಂಸವಾಯಿತು. ಆ ಬಗ್ಗೆ ಪತ್ರಕರ್ತರು ಅವರನ್ನು ಪ್ರಶ್ನಿಸಿದಾಗ "ನನಗೆ ಈ ಘಟನೆಯಿಂದ ವಿಷಾದವಾಗಿದೆ. ನಾನು ಅದನ್ನು ತಡೆಯಲು ಯತ್ನಿಸಿದೆ. ಆದರೆ ಯಾರೂ ನನ್ನ ಮಾತು ಕೇಳಲಿಲ್ಲ" ಎಂದಿದ್ದರು. "ಮಂದಿರವನ್ನು ಅಲ್ಲೇ ನಿರ್ಮಿಸುತ್ತೇವೆ" ಎಂಬುದು ರಾಮಜನ್ಮಭೂಮಿ ಚಳವಳಿಯ ಉದ್ದಕ್ಕೂ ಮೊಳಗಿದ ಘೋಷಣೆಯಾಗಿತ್ತು. ಬಾಬರಿ ಮಸೀದಿ ಧ್ವಂಸವಾಗುವ ಮೊದಲು ನಡೆದ ಎರಡು ಕರಸೇವೆಗಳ ಸಂದರ್ಭದಲ್ಲೂ ಮಸೀದಿಗೆ ಹಾನಿ



ಮಂಗಳೂರಿನಲ್ಲಿ ನಡೆದ ಸಮಾವೇಶದಲ್ಲಿ ತೀಸ್ತಾ ಸೆಟಲ್‌ವಾಡ್ ಮತ್ತು ಇತರರು

ಮಾಡಲಾಗಿತ್ತು, ಹಾಗಾಗಿ ಈ ಘಟನೆ ಅನಿರೀಕ್ಷಿತವೇನೂ ಆಗಿರಲಿಲ್ಲ. ಅದು ಹೇಗೂ ಇರಲಿ ಪೇಜಾವರ ಶ್ರೀಗಳ ವಿಷಾದ ಪ್ರಾಮಾಣಿಕವೇ ಆಗಿದ್ದಲ್ಲಿ "ಮಂದಿರವನ್ನು ಅಲ್ಲೇ ನಿರ್ಮಿಸುತ್ತೇವೆ" ಎಂದು ಈಗಲೂ ಯಾಕೆ ಅವರು ಹಠ ಹಿಡಿದಿದ್ದಾರೆ? ತಮ್ಮ ನಿಲುವುಗಳ ವಿರೋಧಾಭಾಸವನ್ನು ಸ್ವತಃ ಪೇಜಾವರ ಶ್ರೀಗಳೇ ಬಗೆಹರಿಸಿಕೊಳ್ಳಬೇಕು; ಅದು ನಮ್ಮ ಸಮಸ್ಯೆ ಅಲ್ಲ. ಆದರೆ "ರಾಮಮಂದಿರ ನಿರ್ಮಾಣವನ್ನು ವಿರೋಧಿಸುವವರು ಭಾರತೀಯರಲ್ಲ" ಎಂಬ ಅವರ ಮಾತಿನಲ್ಲಿ ಗುಪ್ತವಾಗಿರುವ ಬೆದರಿಕೆಯ ದನಿಯನ್ನು ನಾವು ಪ್ರತಿಭಟಿಸಲೇಬೇಕು.

ಭಾರತೀಯತೆ ಕುರಿತ ಪೇಜಾವರ ಶ್ರೀಗಳ ವ್ಯಾಖ್ಯೆ 'ಹಿಂದೂಗಳು ಮಾತ್ರ ಭಾರತದ ನಿಜವಾದ ಪ್ರಜೆಗಳು; ಹಿಂದೂಯೇತರರು ಒಂದೋ ಹಿಂದೂ ಧರ್ಮವನ್ನು ಒಪ್ಪಿಕೊಳ್ಳಬೇಕು; ಇಲ್ಲ ಎರಡನೆಯ ದರ್ಜೆಯ ಪ್ರಜೆಗಳಾಗಿ ಇರಬೇಕು. ಅದೂ ಸಾಧ್ಯವಿಲ್ಲದಿದ್ದರೆ ಅವರು ದೇಶ ಬಿಟ್ಟು ಹೋಗಬೇಕು' ಎಂಬ ಸಾವರ್ಕರ್, ಹೆಡಗೇವಾರ್ ಮತ್ತು ಗೋಲ್ವಲ್ಕರ್ ಪ್ರಣೀತ ಆರ್.ಎಸ್.ಎಸ್. ಸಿದ್ಧಾಂತವನ್ನೇ ಪುನರುಚ್ಚರಿಸುತ್ತದೆ. ಆದರೆ ಇದು ಭಾರತದ ಪ್ರಜಾಪ್ರಭುತ್ವ ಒಪ್ಪಿಕೊಂಡಿರುವ ಭಾರತೀಯತೆಯ ವ್ಯಾಖ್ಯೆ ಖಂಡಿತ ಅಲ್ಲ. ಭಾರತದ ಸಂವಿಧಾನ ಈ ದೇಶದ ಪ್ರಜೆಯಾಗಲು ಯಾವ ಅರ್ಹತೆಯನ್ನೂ ಕಡ್ಡಾಯಗೊಳಿಸಿಲ್ಲ. ಭಾರತದ ನೆಲದಲ್ಲಿ ಹುಟ್ಟಿದವರೆಲ್ಲರೂ (ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ವಲಸೆ ಬಂದಿರುವವರೂ) ಭಾರತದ ಪ್ರಜೆಗಳೇ. ಯಾವ ಧರ್ಮಕ್ಕೂ ಅದು ಸ್ವಕೀಯ ಎಂದು ಮಣೆ ಹಾಕುವುದೂ ಇಲ್ಲ; ಪರಕೀಯ ಎಂದು ಹೊರಗಿಡುವುದೂ ಇಲ್ಲ. ಕನ್ನಡದ ಹೆಚ್ಚಿನ ಪತ್ರಿಕೆಗಳು ಈಗ ಮುಸ್ಲಿಮ್ ಮತ್ತು ಕ್ರೈಸ್ತ ಪ್ರಜೆಗಳನ್ನು 'ಅನ್ಯಮತೀಯ' ಎಂದೇ ಸಂಬೋಧಿಸುತ್ತಿವೆ. ಆದರೆ ಭಾರತದ ಸಂವಿಧಾನ, ಆಡಳಿತ ಹಾಗೂ ಕಾನೂನು ವ್ಯವಸ್ಥೆ ಯಾರನ್ನೂ ಅನ್ಯಮತೀಯ ಎಂದು 'ಪ್ರತ್ಯೇಕವಾಗಿ ಗುರುತಿಸುವುದಿಲ್ಲ. ಭಾರತದ ಸಂವಿಧಾನದ ಮೊದಲ ಸಾಲು ಶುರುವಾಗುವುದೇ ``We, the people of India...'' ಎಂಬ ಒಕ್ಕಣೆಯೊಂದಿಗೆ. ಅಲ್ಲಿ ಹಿಂದೂ ಧರ್ಮದವರನ್ನು ಮಾತ್ರ ಭಾರತೀಯರು ಅಥವಾ ಹೆಚ್ಚು ಭಾರತೀಯರು ಎಂದೇನೂ ಹೇಳಿಲ್ಲ.



ಈಗ ಇದ್ದಕ್ಕಿದ್ದಂತೆ, ಹಲವು ವರ್ಷಗಳ ನಂತರ ರಾಮಮಂದಿರ ವಿವಾದವನ್ನು ಕೈಗೆತ್ತಿಕೊಂಡು ಪೇಜಾವರ ಶ್ರೀಗಳು ಭಾರತೀಯತೆ ಕುರಿತು ಆರ್‌ಎಸ್‌ಎಸ್ ಸಿದ್ಧಾಂತವನ್ನು ಪ್ರತಿಪಾದಿಸುತ್ತಿರುವುದರ ಉದ್ದೇಶವೇನು? ಅದ್ವಾಣಿಯವರ ರಥಯಾತ್ರೆಯಿಂದ ಹಿಡಿದು ಗುಜರಾತ್ ನರಮೇಧದವರೆಗೆ, ರಾಮಮಂದಿರ ನಿರ್ಮಾಣ ಚಳವಳಿ ಸೃಷ್ಟಿಸಿದ ಅಗಾಧ ಜೀವಹಿಂಸೆಯ ವಿವರಗಳೆಲ್ಲ ಪೇಜಾವರ ಶ್ರೀಗಳಿಗೆ ಗೊತ್ತಿದೆ. ಅವರು ಆ ಬಗ್ಗೆ ತಮ್ಮ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಈಗ ಮತ್ತೆ ಅವರು "ಮಂದಿರವನ್ನು ಅಲ್ಲೇ ನಿರ್ಮಿಸುತ್ತೇವೆ" ಎಂದು ಹಠ ಹಿಡಿದಿರುವುದನ್ನು ನೋಡಿದರೆ ರಾಮಮಂದಿರ ನಿರ್ಮಾಣಕ್ಕೋಸ್ಕರ ಯಾವ ಪ್ರಮಾಣದ ಹಿಂಸೆಗಾದರೂ ಸೈ ಎಂದು ಅವರು ಗಟ್ಟಿ ಮನಸ್ಸು ಮಾಡಿದ್ದಾರೆ ಎನ್ನಿಸುತ್ತದೆ. ಈ ಹಿಂಸೆಯ ಸಂಕಲ್ಪ ಆರ್‌ಎಸ್‌ಎಸ್ (ಮತ್ತು ಇಸ್ಲಾಮಿಕ್ ಮೂಲಭೂತವಾದಿಗಳು) ಪ್ರತಿಪಾದಿಸುವ ರಾಷ್ಟ್ರೀಯತೆಯ ಮೂಲ ಧಾತುವೇ ಆಗಿದೆ. ಇದರ ಆತ್ಯಂತಿಕ ಅಭಿವ್ಯಕ್ತಿ ಅಣುಅಸ್ತ್ರ. ಭಾರತದಲ್ಲಿ ಆರ್‌ಎಸ್‌ಎಸ್ (ಪೇಜಾವರ ಶ್ರೀಗಳು ಕೂಡ) ಮತ್ತು ಪಾಕಿಸ್ತಾನದಲ್ಲಿ ಇಸ್ಲಾಮಿಕ್ ಮತಾಂಧ ಗುಂಪುಗಳು ತಂತಮ್ಮ ದೇಶದ ಅಣುಅಸ್ತ್ರ ಪ್ರಯೋಗಗಳ ಬಗ್ಗೆ ಸಂಭ್ರಮ ಪಟ್ಟದ್ದಲ್ಲಿ ಏನೂ ಆಶ್ಚರ್ಯವಿಲ್ಲ. ಪರಸ್ಪರ ವೈರಿಗಳೇನೋ ಹೌದು; ಆದರೆ ಒಬ್ಬರು ಇನ್ನೊಬ್ಬರ ಪ್ರತಿಬಿಂಬ! ಈ ವಿಪರ್ಯಾಸವನ್ನು ಮನಗಂಡೇ ನೆಹರೂ, 'ಆರ್‌ಎಸ್‌ಎಸ್ ಭಾರತವನ್ನು ಹಿಂದೂ ಪಾಕಿಸ್ತಾನವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆ' ಎಂದು ಹೇಳಿದ್ದರು. ಈಗ ಪೇಜಾವರ ಶ್ರೀಗಳು ಮಾಡುತ್ತಿರುವುದೂ ಅದನ್ನೇ.

ಪೇಜಾವರ ಶ್ರೀಗಳ ನಿಲುವುಗಳ ಜೊತೆ, ಅವರು ಪಾಲುಗೊಂಡಿದ್ದ ಮಂಗಳೂರಿನ ಆ ಸಭೆಯ ಔಚಿತ್ಯವನ್ನೂ ಪ್ರಶ್ನಿಸಬೇಕಾಗಿದೆ. ಇದೇ ಅಕ್ಟೋಬರ್ ತಿಂಗಳ ಮೊದಲ ವಾರ ಅಲ್ಲಿ ನಡೆದ ಹಿಂಸಾಚಾರದ ನೆನಪು ಇನ್ನೂ ಹಸಿಯಾಗಿರುವಾಗಲೇ ಮಂಗಳೂರಿನ ಜಿಲ್ಲಾಧಿಕಾರಿಗಳ ಕಚೇರಿ ಎದುರು ಈ, "ಶ್ರೀರಾಮ ಮಂದಿರ ನಿರ್ಮಾಣ ಸಮರ್ಥನಾ ಸಭೆ"ಯನ್ನು ಏರ್ಪಡಿಸಲಾಗಿತ್ತು. ಜಿಲ್ಲಾಧಿಕಾರಿಗಳ ಕಚೇರಿ ಇರುವುದು ಮಂಗಳೂರಿನ ಅತ್ಯಂತ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲ್ಪಟ್ಟಿರುವ ಬಂದರ್‌ನಲ್ಲಿ. ಈ ಸಭೆಯಲ್ಲಿ ಪೇಜಾವರ ಶ್ರೀಗಳು ಮಾತ್ರವಲ್ಲ, ಭಾಷಣ ಮಾಡಿದ ಎಲ್ಲರೂ, ಹಿಂದೂಯೇತರ ಪ್ರಜೆಗಳು ರಾಮಭಕ್ತಿ ಮುಖಾಂತರ ತಮ್ಮ ದೇಶನಿಷ್ಠೆ ಸಾಬೀತು ಮಾಡಬೇಕು ಎಂದೇ ಮತ್ತೆಮತ್ತೆ ಪ್ರತಿಪಾದಿಸಿದರು. ಈ ಭಾಷಣಗಳ ವೈಖರಿಯಿಂದ ಬೆಚ್ಚಿಬಿದ್ದ ಬೆಂಗಳೂರಿನ ಪತ್ರಕರ್ತರೊಬ್ಬರು, ಸಂಬಂಧಪಟ್ಟ ಸರ್ಕಾರಿ ಅಧಿಕಾರಿಯ ಬಳಿ "ಇಂತಹ ಸಭೆಗೆ ಈ ವೇಳೆಯಲ್ಲಿ, ಅದೂ ಈ ಜಾಗದಲ್ಲಿ ನೀವು ಹೇಗೆ ಅನುಮತಿ ಕೊಟ್ಟಿರಿ?" ಎಂದು ಪ್ರಶ್ನಿಸಿದರು. ಆ ಅಧಿಕಾರಿ, "ನನ್ನ ಬಳಿ ಆ ಅಧಿಕಾರವಿದ್ದಿದ್ದರೆ ನಾನು ಖಂಡಿತ ಅನುಮತಿ ನಿರಾಕರಿಸುತ್ತಿದ್ದೆ. ಆದರೆ ಇಂತಹದಕ್ಕೆಲ್ಲ ಅವರು ನಮ್ಮ ಹತ್ತಿರ ಬರುವುದೇ ಇಲ್ಲ. ಮೇಲಿನಿಂದಲೇ ನಮಗೆ ಹುಕುಂ ಬರುತ್ತದೆ" ಎಂದು ಬಿತ್ತರಿಸಿದರಂತೆ.

ಆ ಸಭೆ ಕುರಿತು ಮಂಗಳೂರಿನ ಪ್ರತಿಷ್ಠಿತ ಪತ್ರಿಕೆಗಳ ವರದಿಗಾರರು ಎನ್ನಿಸಿಕೊಂಡ ಪ್ಯಾದೆಗಳು ಏನು ಮಾಡಿದರು? ಅವರು ಭಾಷಣಗಳನ್ನು ಬರೆದುಕೊಂಡು ಭಕ್ತಿ ಪುರಸ್ಸರವಾಗಿ 'ರಿಪೋರ್ಟು' ಮಾಡಿದರು; ಥೇಟು ಪ್ಯಾದೆಗಳ ಹಾಗೆ! ತೀಸ್ತಾ ಸೆಟಲ್‌ವಾಡ್ ಮುಂಬಯಿಯಿಂದ ಬಂದು ಮಂಗಳೂರಿನ ಹಿಂಸಾಚಾರ ಮತ್ತು ಪೊಲೀಸರ ದುಂಡಾವರ್ತಿಯ ವಿವರಗಳನ್ನು ಸಂಗ್ರಹಿಸಿ ಪತ್ರಕರ್ತರ ಎದುರು ಇಟ್ಟು, "ನೀವು ಇದನ್ನೆಲ್ಲ ವರದಿ ಮಾಡಿಲ್ಲ; ದಯವಿಟ್ಟು ಈಗಲಾದರೂ ಈ ವಿವರಗಳನ್ನು ನಿಮ್ಮ ಓದುಗರಿಗೆ ತಿಳಿಸಿ" ಎಂದು ಗೋಗರೆದರೆ ಮಂಗಳೂರಿನ ಪತ್ರಕರ್ತರು, "ಅದೆಲ್ಲಾ ಆಗಿ ಹೋಯಿತು. ಈಗ ಯಾಕೆ ಹಳೆಯದನ್ನೆಲ್ಲ ಕೆದಕುವುದು?" ಎಂದು ಆಕೆಯನ್ನೇ ಕೇಳಿದ್ದರು. ಆದರೆ ಅವರಲ್ಲಿ ಯಾರಿಗೂ ಸಂಘಪರಿವಾರದವರಿಗೆ, ``600 ವರ್ಷಗಳ ಹಿಂದೆ ಆಗಿಹೋದದ್ದನ್ನು ಈಗ ಯಾಕೆ ಪುನಃ ಕೆದಕುತ್ತಿದ್ದೀರಿ? ನಿಮ್ಮ ಉದ್ದೇಶವೇನು" ಎಂದು ಕೇಳುವ ಧೈರ್ಯವಿಲ್ಲ!


-ಜಿ. ರಾಜಶೇಖರ

ಬಿಹಾರದ ದಾರಿಯಲ್ಲಿದೆ ಅನ್ನಿ, ಬಿಹಾರ ಆಗಿದೆ ಅನ್ನಬೇಡಿ

ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯು ದಿನೇ ದಿನೇ ರಂಗು ತಾಳುತ್ತಿದ್ದು, ಕುರುಕ್ಷೇತ್ರವಾಗಿ, ಪ್ರಜೆಗಳಿಗೆ ನವರಸಗಳಿಂದಲೂ ಕೂಡಿದ ಕುತೂಹಲಭರಿತ ನಾಟಕದಂತೆ ರಂಜನೆ ನೀಡುತ್ತಿದೆ. ಏಟು-ಪ್ರತಿ ಏಟುಗಳನ್ನು ಪ್ರತಿಷ್ಠಿತ ನಾಟಕಕಾರರೂ ದಂಗಾಗುವಂತೆ ಹವ್ಯಾಸಿ ನಾಟಕಕಾರರಾದ ರಾಜಕಾರಣಿಗಳು ನೀಡುತ್ತಿರುವುದು ಕುತೂಹಲಕರವಾಗಿರುತ್ತದೆ. ಯಾರು ಯಾರ ಮಾತಿಗೆ ಏನು ಪ್ರತ್ಯುತ್ತರ ನೀಡುತ್ತಾರೆ ಎಂಬುದನ್ನು ತಿಳಿಯಲು ಜನರು ತುದಿಗಾಲ ಮೇಲೆ ನಿಲ್ಲುವಂತೆ ಮಾಡಿದೆ.

ಜಾತ್ಯತೀತ ಜನತಾದಳದ ಪೊಲೀಸರು ಸಂಯಮದಿಂದ ವರ್ತಿಸುತ್ತಿದ್ದು ಕಾಂಗ್ರೆಸ್ಸಿನವರ ಪ್ರಚಾರಕ್ಕೆ ಜಾತಿವಾದಿ ಜಾತ್ಯತೀತ ಜನತಾದಳದ ಯುವ ಕಾರ್ಯಕರ್ತರು ಅಡ್ಡಿಪಡಿಸಿದರೂ ಸಿನಿಮಾಗಳಲ್ಲಿನ ಪೊಲೀಸರಂತೆಯೇ ನಡೆದುಕೊಳ್ಳುತ್ತಿರುವುದು ಸಂಬಂಧಿಸಿದ ಎಲ್ಲರಿಗೂ ತೃಪ್ತಿ ತಂದಿದೆ ಎನ್ನಲಾಗಿದೆ! ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಯುವ ಪಡೆಯ ಕಾರ್ಯವೈಖರಿಗೆ ಬೆನ್ನಹಿಂದೆ ಬೆಂಬಲಿಸಿದರೂ ಮಾಧ್ಯಮಗಳ ಎದುರು 'ಯಾವುದೇ ಊರಿನವರು ನಮ್ಮ ಊರಿನಲ್ಲಿ ಪ್ರಚಾರ ಮಾಡಬೇಡಿ ಎಂದರೆ ನಾವೇನೂ ಮಾಡಲಾಗುವುದಿಲ್ಲ' ಎಂಬ ಅರ್ಥ ಬರುವಂತೆ ಮಾತನಾಡಿದರೂ, ಒಬ್ಬ ಜವಾಬ್ದಾರಿ ಸ್ಥಾನದಲ್ಲಿರುವ ಮನುಷ್ಯ ಇಂತಹ ಬೇಜವಾಬ್ದಾರಿ ಹೇಳಿಕೆ ನೀಡಬಹುದೆ ಎಂದು ಕೆಲವು ಪ್ರಜ್ಞಾವಂತರು ಪ್ರಶ್ನಿಸಲು ಪ್ರಾರಂಭಿಸಿದ ನಂತರ ಮಾಮೂಲಿ ರಾಜಕಾರಣಿಯ ವರಸೆಯಲ್ಲಿ 'ನಾನು ಹಾಗೆ ಹೇಳಿಯೇ ಇಲ್ಲ, ಮಾಧ್ಯಮಗಳು ತಪ್ಪಾಗಿ ಅರ್ಥೈಸಿವೆ' ಎಂದು ಸಮಜಾಯಿಷಿ ನೀಡಿದ್ದಾರೆ. ಇದರಲ್ಲಿ ಯಾರು ತಪ್ಪೆಸಗಿದ್ದಾರೆ ಎಂಬುದು ಶ್ರೀಸಾಮಾನ್ಯನಿಗೂ ಗೊಂದಲ ಉಂಟಾಗುತ್ತಿದೆ. ಆದುದರಿಂದ ಮಾಧ್ಯಮ ವರದಿಗಾರರಲ್ಲಿ ಒಂದು ಮನವಿ ಏನೆಂದರೆ ದಯಮಾಡಿ ತಾವು ವರದಿ ತಯಾರಿಸಿದ ನಂತರ ಅದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರು ಒಪ್ಪಿಗೆ ನೀಡಿದ ನಂತರ ಪ್ರಕಟಣೆಗೆ ಕಳುಹಿಸಬೇಕಾಗಿ ವಿನಂತಿ! 'ನನಗೆ ವರದಿಯನ್ನು ತೋರಿಸಿಯೇ ಇಲ್ಲ. ನಾನು ಒಪ್ಪಿಗೆ ನೀಡೇ ಇಲ್ಲ' ಎಂದು ಹೇಳಿದರೆ ಏನು ಮಾಡುವುದು? ಎಂದರೆ ಸಿದ್ಧಪಡಿಸಿದ ವರದಿಯ ಮೇಲೆ ಅವರ ಸಹಿಯನ್ನು ತೆಗೆದುಕೊಂಡರೆ ಆಗಬಹುದೋ.... ವಿಡಿಯೋ ಚಿತ್ರೀಕರಣದಲ್ಲಿ ತಾನು ತಾನೇ ಅಲ್ಲ.... ಬೇರೆ ಯಾರದ್ದೋ ದೇಹಕ್ಕೆ ನನ್ನ ಮುಖ ಜೋಡಿಸಿದ್ದಾರೆ.... ನನ್ನ ದನಿ ನನ್ನ ದನಿಯೇ ಅಲ್ಲ, ಯಾರಿಂದಲೋ ನನ್ನ ದನಿ ಹೊರಡಿಸಿದ್ದಾರೆ ಎಂದೆಲ್ಲಾ ನುಣುಚಿಕೊಳ್ಳುವ ರಾಜಕಾರಣಿಗಳಿರುವಾಗ ನನ್ನ ಸಹಿ ಸಹಿಯೇ ಅಲ್ಲ ಫೋರ್ಜರಿ ಅನ್ನುವುದಿಲ್ಲ ಎನ್ನುವುದಕ್ಕೆ ಏನು ಖಾತರಿ ಎಂದು ಸಂಶಯಿಸುವವರೂ ಇದ್ದಾರೆ. ಇದಕ್ಕೆಲ್ಲ ಪರಿಹಾರ ಎಂದರೆ ಮುಖ್ಯಮಂತ್ರಿಯವರು ಏನಾದರೂ ಹೇಳಿಕೊಂಡು ಹಾಳಾಗಲಿ. ಅದನ್ನು ಮರೆತು ಚುನಾವಣೆಯಲ್ಲಿ ಅವರಿಗೆ ಯಾವುದು ಅನುಕೂಲ ಆಗಬಹುದೋ ಅಂತಹ ಮಾತುಗಳನ್ನು ಮಾನ್ಯರು ತಮ್ಮ ಅಮೃತವಾಣಿಯ ಮೂಲಕ ತಿಳಿಸಿದರು ಎಂದು ವರದಿ ಮಾಡಬಹುದಾಗಿದೆ!

ಮಾನ್ಯ ಯುವ ಮುಖ್ಯಮಂತ್ರಿಗಳದ್ದು ಈ ಪರಿಯಾದರೆ ನಮ್ಮ ಉಪ ಮುಖ್ಯಮಂತ್ರಿಗಳು ಬೇರೆಯೇ ಸಲಹೆ ನೀಡಿದ್ದಾರೆ. ಊರಿಗೆ ಬಂದು ಪ್ರಚಾರ ಮಾಡಬೇಡಿ ಎಂದು ತಡೆ ಒಡ್ಡುವುದು ಅಪರಾಧ. ಅದರ ಬದಲಿಗೆ ಏನು ಮಾಡಬಹುದಪ್ಪ ಅಂದರೆ ಕುಡಿಯಲು ನೀರು ಕೊಡುವುದಿಲ್ಲ ಎಂಬುದಾಗಿದೆ! ಅಂದರೇನಾಯಿತು, 'ತಾಯಿ ಕುಡಿಯಾಕ್ ವಸಿ ನೀರು ಕೊಡವ್ವ' ಅಂದರೆ ಮನೆಯಾಕೆ ಏನು ಮಾಡಬೇಕು? ದಢಾರನೆ ಬಾಗಿಲು ಹಾಕಿ ಮರೆಯಾಗಬೇಕು! ಸಮಸ್ಯೆ ಅದಲ್ಲ ಯಡಿಯೂರಪ್ಪನವರೇ, 'ಇದು ಜಾತ್ಯತೀತ ಜನತಾದಳದ ಊರು, ನಮ್ಮ ಓಟೆಲ್ಲಾ ಆ ಪಕ್ಷಕ್ಕೇಯ' ಅಂತ ಕೆಲವು ಪುಂಡು ಹುಡುಗರು ಕೂಗು ಹಾಕಿದರೂ, ವಾಸ್ತವ ಸಂಗತಿ ಹಂಗಿರೋಲ್ಲ, ಕೆಲವರು ಇತರೇ ಪಕ್ಷಗಳಿಗೂ ಒಲವು ತೋರುವವರು ಇದ್ದೇ ಇರ್ತಾರೆ. ಅಂತ ಪಕ್ಷದವರು ಬಂದು ಮತ ಯಾಚಿಸಿದರೆ ಅವರು ಇನ್ನೂ ಗಟ್ಟಿಯಾಗಬಹುದು ಅನ್ನೋದು!



ಇನ್ನು ನಮ್ಮ ಹೊರಟ್ಟಿ ಸಾಹೇಬರ ಕತೆ ನೋಡಿ. ಬಂದಿರುವುದು ಚುನಾವಣೆ ಪ್ರಚಾರಕ್ಕೆ. ಆದರೆ ಇಲ್ಲಿ ಅವರ ಮಾತನ್ನು ಯಾರು ಕೇಳುತ್ತಾರೆ ಎಂದೋ ಏನೋ ಪ್ರಚಾರಕ್ಕೆ ಹೋಗದೇ ಬೇಸರ ಕಳೆಯಬೇಕಲ್ಲ ಅಂತ ನಿರ್ಮಲಾ ಕಾನ್ವೆಂಟಿನಲ್ಲಿ ಕೆಲವು ಗೆಳೆಯರೊಡನೆ ಹರಟೆ ಕೊಚ್ಚುತ್ತಿದ್ದರಂತೆ. ಸ್ನೇಹಿತರು ಯಾರು ಅಂತೀರಿ, ಅಧ್ಯಾಪಕರುಗಳು! ಕಷ್ಟ ಸುಖ ಮಾತನಾಡುತ್ತಿದ್ದಾಗ ನಮ್ಮ ಪಕ್ಷದವರಿಗೆ ಸಹಾಯ ಮಾಡಿ ಎಂದಿರಬಹುದು. ಖರ್ಚಿಗಿರಲಿ ಅಂತ ಸ್ವಲ್ಪ ಹಣಾನೂ ನೀಡಿರಬಹುದು, ಪಾಪ ಮೊದಲೇ ಮೇಷ್ಟ್ರುಗಳು ಅವರ ಹತ್ತಿರ ಹಣ ಎಲ್ಲಿ ಬರಬೇಕು ಅಂತಾನ! ಇಷ್ಟಕ್ಕೇ ಕಾಂಗ್ರೆಸ್ ಗೂಂಡಾಗಳು ಬಾಗಿಲಿಗೆ ಬೀಗ ಜಡಿದು ಗಲಭೆ ಎಬ್ಬಿಸಿದರೆ ಹೇಗೆ? ಜಾತ್ಯತೀತ ಜನತಾದಳದ ಮುಖಂಡರು ಬಂದು ಸಿನಿಮೀಯ ರೀತಿಯಲ್ಲಿ ಬಿಡುಗಡೆಮಾಡಿಸಿದ್ದಕ್ಕೆ, ಸರಿಹೋಯಿತು. ಈಗ ಮಾನ್ಯ ಮಂತ್ರಿಗಳು ಇಂತಹ ಗೂಂಡಾಗಳ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರಂತೆ! ಚುನಾವಣೆ ನೀತಿಸಂಹಿತೆ ಮೀರಿದ್ದು ಸಾಬೀತಾದರೆ ನಾನು ರಾಜೀನಾಮೆ ಬಿಸಾಕ್ತೀನಿ ಅಂತಾನೂ ಹೇಳಿದ್ದಾರೆ! ಛೇ ಇಷ್ಟಕ್ಕೆಲ್ಲಾ ಬೇಸರ ಮಾಡಿಕೊಂಡರೆ ಹೇಗೆ ಹೊರಟ್ಟಿಯವರೇ. ಚುನಾವಣೆಗಳಲ್ಲಿ ಹಣ ಚೆಲ್ಲೋದು, ಅಧಿಕಾರ ಬಳಸಿ ಸಂಬಂಧಿಸಿದವರ ಪ್ರಚೋದನೆ ಮಾಡೋದು ಇಷ್ಟೇ ಅಲ್ವಾ ನೀವು ಮಾಡಿರೋದು, ಇದನ್ನ ನೀತಿಸಂಹಿತೆ ಉಲ್ಲಂಘನೆ ಎಂದರೆ ಅವರ ಬಾಯಿಗೆ ಹುಳ ಬಿದ್ದೀತು!

ಏನೇ ಆಗಲೀ ಇಂತಹದ್ದಕ್ಕೆಲ್ಲ ನಮ್ಮ ಚೆನ್ನಿಗಪ್ಪನೇ ಸರಿ. ಚುನಾವಣೆ ಅಧಿಕಾರಿಗಳ ಪರವಾನಗಿ ಪಡೆಯದೇ ಕಾರಿನಲ್ಲಿ ಓಡಾಡುತ್ತಿದ್ದಾಗ ಚುನಾವಣಾಧಿಕಾರಿಗಳು ಅದನ್ನು ನಿಲ್ಲಿಸಿ ಚಿತ್ರೀಕರಿಸಿದರಂತೆ. ಇದು ಮಾಮೂಲಿನ ಸಂಗತಿ ಅಂತ ಸುಮ್ಮನಿರಲಾರದೆ ಯಾವುದೋ ವರದಿಗಾರ ಇದರ ವಿಡಿಯೋ ರೆಕಾರ್ಡ್ ಮಾಡ್ತಿದ್ದನಂತೆ. ಬೇರೆ ಯಾರಾದರೂ ಆಗಿದ್ದರೆ ಹಂಗೇ ನಡುಗಿಹೋಗುತ್ತಿದ್ದರೇನೋ? ಆದರೆ ನಮ್ಮ ಚೆನ್ನಿಗಪ್ಪ ಅಲ್ಲವಾ. 'ಹಿಡ್ಕಳುರ‍್ಲಾ ಅವ್ನನ್ನ' ಅಂತ ಆರ್ಡರ್ ಕೊಟ್ಟರಂತೆ. ಫೋಟೋ ತೆಗೆಯುತ್ತಿದ್ದ ವರದಿಗಾರನ್ನ ಹಿಗ್ಗಾಮುಗ್ಗಾ ಚೆಚ್ಚಿ ಹಣ್ಣುಗಾಯಿ-ನೀರುಗಾಯಿ ಮಾಡಿದರಂತೆ! ಕ್ಯಾಮೆರಾ ಕಿತ್ತುಕೊಂಡರಂತೆ ಧೀರರು! 'ಏನ್ಸಾ ಇಂತ ಯಡವಟ್ಟು ಕೆಲ್ಸ ಮಾಡಿಕೊಂಡು ಬಟ್ರೀ' ಅಂತ ಯಾರೋ ಕೇಳಿದ್ದಕ್ಕೆ, 'ಏನ್ ತರ‍್ಕಳ್ತಾನ್ಲ ನನ್ತಾವ? ಪ್ರತಿಭಟಿಸ್ತಾವೆ. ತಪ್ಪಾಯ್ತು ಅಂತೀನಿ. ಹಾರಾಡ್ತಿರೋ ಪತ್ರಕರ್ತರು ಮುದುರಿ ಮೂಲೆಗೆ ಕೂರ‍್ತಾರೆ' ಅಂತ ಹೇಳಿರುವುದಕ್ಕೆ ದಾಖಲೆ ಇಲ್ಲ.

ಆರೆಸೇನಾಪಡೆ ಮೈಸೂರಿಗೆ ಬಂದು ಇಳಿದಿರೋದು, ಯದ್ವಾತದ್ವಾ ಓಡಾಡ್ತಿರೋ ಚುನಾವಣಾ ಪ್ರಚಾರ ಕಾರುಗಳ ನಿಯಂತ್ರಿಸುತ್ತಿರೋದು ರಾಜಕಾರಣಿಗಳನ್ನು ಕೆರಳಿಸಿದೆಯಂತೆ. ದೇವೇಗೌಡರಂತಹ ದೇವೇಗೌಡರೇ ಗಾಂಧೀ ಪ್ರತಿಮೆಯ ಹತ್ತಿರ ಧರಣಿ ಕೂತರು, ಇದರ ವಿರುದ್ಧವಾಗಿ ಪ್ರತಿಪಕ್ಷದವರು ಸುಮ್ಮನಿರಲಾದೀತೆ? ವೇದಾಂತ ಹೆಮ್ಮಿಗೆ 'ಗಾಂಧಿ ಸತ್ಯ, ಅಹಿಂಸೆ, ಶಾಂತಿಗಾಗಿ ಪ್ರಾಣ ನೀಡಿದರು. ಈ ದೇವೇಗೌಡರು ಹಿಂಸೆ ದ್ವೇಷ ನಂಬಿರುವ ಭಾರತೀಯ ಜನತಾ ಪಕ್ಷದೊಂದಿಗೆ ಸೇರಿದ್ದಾರೆ. ಅವರಿಗೆ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸುವ ನೈತಿಕತೆ ಇಲ್ಲ, ಆದುದರಿಂದ ಅವರು ಕುಳಿತ ಸ್ಥಳವನ್ನು ಕಾವೇರಿ ನೀರಿನಿಂದ ಪ್ರೋಕ್ಷಣೆ ಮಾಡಿ ಪವಿತ್ರಗೊಳಿಸುತ್ತೇನೆ' ಎಂದಿದ್ದಾರೆ! ಯುವ ಮುಖ್ಯಮಂತ್ರಿಗಳಿಗೆ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮ ಕಾಂಗ್ರೆಸ್ ಪಿತೂರಿಯಾಗಿ ಗೋಚರಿಸುತ್ತಿದೆ. ತಮ್ಮ ಪಕ್ಷದವರು ನೀತಿಸಂಹಿತೆ ಮೀರಿದಾಗ ಕ್ರಮ ಕೈಗೊ... ವೀಕ್ಷಕರು ಅದೇ ಕಾಂಗ್ರೆಸ್ಸಿನವರು ಮಾಡಿದಾಗ ... ಕಾಯುತ್ತಿರುತ್ತಾರಾ' ಎಂದು ಸಿಡಿದಿದ್ದಾರೆ. ಮುಖ್ಯಮ... ಗಳೇ, ನಿಮ್ಮ ಕೋಪ ಅರ್ಥವಾಗುತ್ತೆ, ಕಾಂಗ್ರೆಸ್‌ನ... ಮಾಡಿದರೂ ತಪ್ಪು, ನೀವು ಮಾಡಿದರೂ ತಪ್ಪು, ... ತಪ್ಪಿಗೆ ಶಿಕ್ಷೇನೇ ಬೇಡ. ಅಂದರೆ ಸರೀನಾ....

ಈ ನಡುವೆ ರಾಜ್ಯಪಾಲರು ಇಡೀ ಮಂತ್ರಿಮಂಡಲವೇ ಮೈಸೂರಿನಲ್ಲಿ ಬೀಡು ಬಿಟ್ಟಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿರುವುದಕ್ಕೆ ಸಮಜಾಯಿ... ನೀಡಲು ಎಂ.ಪಿ. ಪ್ರಕಾಶ್ ಮುಂದಾಗಿದ್ದಾರೆ. ಅವರು ಆಕ್ಷೇಪ... ಮಾಡಿಲ್ಲ- ಸಲಹೆ ನೀಡಿದ್ದಾರೆ ಎಂದು... ಹೇಳಿ 'ಥೂ ಅಂದರೂ ಛಾ ಅಂದರು' ಎನ್ನುವ ರಾಜಕಾರಣಿಗಳ ವರಸೆಯನ್ನು ತೋರಿದ... ಅವರಿಗೆ ಏನು ಸಮಾಧಾನ ಎಂದರೆ ... ಚಾಮುಂಡೇಶ್ವರಿ ಬಿಹಾರ ಆಗಿಲ್ಲ ಅನ್ನೋದು! ಒಂದು... ತಲೆ ಉರುಳಿದರೆ, ಹೊಡೆದಾಡಿ ತಲೆ ಒಡೆದುಕೊಂ... ಕೈಕಾಲು ಮುರಿದುಕೊಂಡು ಆಸ್ಪತ್ರೆಗೆ ದಾಖ... ಪೊಲೀಸರಿಗೆ ದೂರು ನೀಡಿದರೆ ಆಗ ಬಿಹಾರ ಆಯಿ... ಅಂತ! ಇದುವರೆವಿಗೆ ಯಾರಿಗೂ ಸಣ್ಣಪುಟ್ಟ ಗಾಯಗ... ಆಗಿಲ್ಲ, ಆಗಲೇ ಬಿಹಾರ ಆಯಿತು, ಬಿಹಾರ ಆಯಿ... ಅಂತ ಬಡಬಡಿಸಿದರೆ ಹೇಗೆ ಎಂಬುದು ... ಪ್ರಶ್ನೆಯಾಗಿರಬಹುದು. ಬೇಕಾದರೆ ಬಿಹಾರದ ದಾರಿಯ... ಎಂದು ಹೇಳಲಿ, ಬಿಹಾರ ಆಗಿದೆ ಎಂದು ವ... ಈಗಲೇ ಹೇಳಬೇಡಿ!

ಇದುವರೆವಿಗೂ ಜಾತಿ-ಒಳಜಾತಿಗಳು ... ಕೇಳಿದ್ದೊ. ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ಒ... ಜಾತಿಗಳನ್ನು ಬಹಿರಂಗಕ್ಕೆ ತರುತ್ತಿದೆ! ಮೈಸೂರಿನಲ್ಲಿ ... ಎಲ್ಲಿ ನೋಡಿದರೂ ಈ ಜಾತಿಗಳ ಸಮಾವೇಶ. ಅ... ಎಂತಹ ಜಾತಿಯವು ಅಂತೀರಿ. ಕಾಂಗ್ರೆಸ್ ಒಕ್ಕಲಿ... ಸಮಾವೇಶ, ಜಾತ್ಯತೀತ ದಳ ಒಕ್ಕಲಿಗರ ಸಮಾ... ಕಾಂಗ್ರೆಸ್ ಲಿಂಗಾಯತರ ಸಮಾವೇಶ, ಜಾತ್ಯತೀತ ... ಲಿಂಗಾಯತರ ಸಮಾವೇಶ. ಹೀಗೆ ಹೆಚ್ಚು ಪರಿ... ಇಲ್ಲದ ಇಪ್ಪತ್ನಾಲ್ಕು ವೈಶ್ಯ ಸಮಾಜಕ್ಕೂ ಇದೇ ... ಕಾಂಗ್ರೆಸ್ 24 ವೈಶ್ಯ ಸಮಾಜ, ಜಾತ್ಯತೀತ ಜನತಾ... ವೈಶ್ಯ ಸಮಾಜ! ಇತರೆ ಪಕ್ಷದವರೂ ಇನ್ನೂ ... ಒಡೆಯುವ ಕೆಲಸಕ್ಕೆ ಕೈ ಹಾಕಿಲ್ಲ, ಯಾಕೆಂದರೆ ... ಅಭ್ಯರ್ಥಿ ನಾಮ್ ಕೆ ವಾಸ್ತೆ! ಇಲ್ಲದಿದ್ದರೆ ಅವರೂ...

ಅಲ್ಲ, ಜಾತಿವಿನಾಶ ಮಾಡಬೇಕು ಅಂತ... ಅಂಬೇಡ್ಕರ್ ಹೆಸರಲ್ಲಿ ಕಣ್ಣೀರು ಸುರುಸ್ತೀವಿ. ಜಾತಿ... ಮಾತ್ರ ಗಟ್ಟಿಗೊಳಿಸಿಕೊಳ್ಳುತ್ತಲೇ ಹೋಗ್ತಿದ್ದ... ಒಂದೊಂದು ಸಲ ಅನ್ನಿಸುತ್ತೆ... ಈ ಚುನಾವಣೆ... ಇರುವವರೆಗೂ ಈ ಜಾತಿ ಅನ್ನೋ ಶನಿ ತೊಲ... ಅಂತ....


-ಎಚ್.ಎಲ್. ಕೇಶವಮೂ...

ಪ್ರಗತಿಪರರಿಗೆ ಏನಾಗಿದೆ?

ಸಮಾನ ಮನಸ್ಕರು, ಪ್ರಗತಿಪರರು ಎನ್ನುವುದು ಭ್ರಮೆಯೇ! ಇತ್ತೀಚೆಗೆ ಪದೇ ಪದೇ ನನ್ನ ಮನಸ್ಸಿಗೆ ಕೇಳಿಕೊಂಡ ಪ್ರಶ್ನೆಯಿದು. ಒಂದೇ ವೇದಿಕೆ ಮೇಲೆ ವಿಷಯಾಧಾರಿತ ಚಿಂತನೆ, ಒಳಗೊಳ್ಳುವಿಕೆ ಅಸಾಧ್ಯವೆ? ಇಂದು ಕೋಮುವಾದಿಗಳ ಬೆಳವಣಿಗೆಗೆ ಪೂರಕ ಗೊಬ್ಬರ. ಪ್ರಗತಿಪರರು ಬಂಡಾಯಗಾರರಾಗಿಬಿಟ್ಟರೆ? ಇವೆಲ್ಲಾ ಏಕೆಂದರೆ, ಸಿಪಿಐ(ಎಂ)ನ ಜಿ.ಎನ್. ನಾಗರಾಜ್ ಈಚೆಗೆ ಅವರ ಬಾಬಾಬುಡನ್‌ಗಿರಿಯ ಕುರಿತಾದ ಹೇಳಿಕೆ ನಾಸ್ತಿಕತೆ ಬಗ್ಗೆ ಎತ್ತಿರುವ ಪ್ರಶ್ನೆ ನನ್ನ ದೃಷ್ಟಿಯಲ್ಲಿ ಸರಿ ಎನಿಸಿದೆ. ಆದರೆ ಅದನ್ನು ಹೇಳುವ ಮುನ್ನ ಜಿ.ಎನ್.ಎನ್. ಒಮ್ಮೆ ಕೇರಳ ಕಮ್ಯುನಿಷ್ಟರು ಅಯ್ಯಪ್ಪ ಸ್ವಾಮಿ ಮಹಾಭಕ್ತರಂತೆ ವರ್ತಿಸುತ್ತಿಲ್ಲವೆ? ನಾಸ್ತಿಕರಾದ ಕಮ್ಯುನಿಷ್ಟರು ಏಕೆ ಕೇರಳ ಸರಕಾರ ಆಡಳಿತ ನಡೆಸುವಾಗ ಅಯ್ಯಪ್ಪನ ಜ್ಯೋತಿ ಬಗ್ಗೆ ಕ್ರಮ ಕೈಗೊಂಡರೆ? ಆದರಂತೆ ಇಂದು ಅನೇಕರು ಮನಸ್ಸಿಗೆ ಬಂದಂತೆ ಸಮರ್ಥವಾದ ನಾಲಿಗೆಯಷ್ಟೇ ಕುಲಗೆಡಿಸಿಕೊಳ್ಳುವುದರಿಂದ ಕೋಮುವಾದ ನಿರ್ಮೂಲನೆ ಸಾಧ್ಯವೆ? ಸ್ವಾರ್ಥ, ಪ್ರಚಾರಪ್ರಿಯತೆ ಬಿಟ್ಟು ಒಳಗೊಳ್ಳುವಿಕೆ ರೂಢಿಸಿಕೊಳ್ಳಲಿ.

-ವಿಜಯ ಅಮೃತರಾಜ್, ಕೊಪ್ಪಳ

'ತನನಂ ತನನಂ' ಚಿತ್ರದ ಕುರಿತು 'ಲಂಕೇಶ್'ನಲ್ಲಿ ಪ್ರಕಟವಾದ ಪುಕ್ಕಟೆ ಜಾಹೀರಾತು ನನ್ನಂಥ ಕವಿತಾ ಲಂಕೇಶರ ಅಭಿಮಾನಿ ವರ್ಗದ ಮೇಲೆ ಅತಿ ನಿರೀಕ್ಷೆಯ ಭಾರ ಹೇರಿ, ಕೊನೆಗೆ ಹುಸಿಯಾಗುತ್ತದೇನೋ ಎನ್ನುವ ಆತಂಕವನ್ನು ಕವಿತಾ ಮೇಡಂ ಸುಳ್ಳು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳು.



ವೃತ್ತಿನಿರತ ರಂಗಭೂಮಿ ಕಲಾವಿದರ ಸಾಮಾಜಿಕ ಸಮಸ್ಯೆಯೊಂದನ್ನು ನವಿರಾದ ತ್ರಿಕೋನ ಪ್ರೇಮಕಥೆಯ ಹಿನ್ನೆಲೆಯಲ್ಲಿ ತೆಳುವಾಗಿಯಾದರೂ ಸಮರ್ಥವಾಗಿ ನಿರೂಪಿಸಿದೆ 'ತನನಂ...' ಉತ್ತರ ಕರ್ನಾಟಕ ಸಂಚಾರಿ ನಾಟಕ ಕಂಪನಿಗಳ ಬಗ್ಗೆ ಒಂದಿಷ್ಟು ಓದಿ ತಿಳಿದುಕೊಂಡಿರುವ ನಾನು ಭವಾನಿಯಂಥ ಪಾತ್ರವೊಂದನ್ನು ಚೈತನ್ಯ ನಿರ್ದೇಶಿಸಿರುವ 'ಕಿಚ್ಚು' ಎಂಬ ಕಿರುತೆರೆ ಧಾರಾವಾಹಿಯಲ್ಲಿ ಇತ್ತೀಚೆಗೆ ನೋಡಿದ್ದೆ. ಬಹುತೇಕ ಕಿರುತೆರೆ ಧಾರಾವಾಹಿಗಳು ಹಾದರ, ಅನೈತಿಕ ಸಂಬಂಧಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವುದರಿಂದ ಅದಕ್ಕೆ ಅಂತಹ ಮಹತ್ವ ನೀಡಿರಲಿಲ್ಲ, ಆದರೆ ರಾಜಾನುರಾಜರ ಕಾಲದಿಂದಲೂ ಚಾಲ್ತಿಯಲ್ಲಿರುವ ವೇಶ್ಯಾವಾಟಿಕೆ ಹೇಗೆ ಉದರ ನಿಮಿತ್ತ ಹಾಡಿ ಕುಣಿಯುವ ನಾಟಕ ಕಲಾವಿದರ ಉಪ ಕಸುಬಾಗಿದೆ, ಹಾಗೇಯೇ ಈ ನಾಟಕ ಕಂಪನಿಗಳಿಗೆ ಆಸರೆಯಾಗುವ ಊರ ಗೌಡರು, ಪಟೇಲರು ಅಲ್ಲಿನ ನಟಿಯರನ್ನು ಹೇಗೆ ದುರ್ಬಳಕೆಮಾಡಿಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಸೂಕ್ಷ್ಮ ಬೆಳಕು ಚೆಲ್ಲುತ್ತದೆ 'ತನನಂ...' ಸ್ವಲ್ಪ ಆಯ ತಪ್ಪಿದರೂ ಗಂಭೀರ, ಬೋರಿಂಗ್ ಸಾಕ್ಷ್ಯಚಿತ್ರವಾಗಬಹುದಿದ್ದ 'ತನನಂ..'ನನ್ನು ಕಮರ್ಷಿಯಲ್ ಪೇಸ್‌ನಲ್ಲಿ ಅತ್ಯಂತ ಜಾಣ್ಮೆಯಿಂದ ನಿರ್ದೇಶಿಸಿದ್ದಾರೆ ಕವಿತಾ ಲಂಕೇಶ್.

-ಸದಾನಂದ ಸಿ. ಗಂಗನಬೀಡು, ಬೆಂಗಳೂರು

ಈ ಸರಕಾರದ ಗೂಂಡಾಗಿರಿಯನ್ನು ಬಯಲು ಮಾಡಿದ್ದೀರ. ಕರ್ನಾಟಕ ರಾಜಕೀಯ ಮುಖಂಡರು ಹೇಗೆ ಆಡಳಿತ ನಡೆಸುತ್ತಿದ್ದಾರೆ, ಇವರಿಂದ ನಾಡಿನ ಏಳಿಗೆ ಎಷ್ಟು, ಹಾನಿ ಎಷ್ಟು ಎಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದೀರ. ಆದರೆ ನಮ್ಮ ಜನ ಇಂಥವರನ್ನೇ ಪೋಷಿಸುತ್ತಾ ನಡೆದು ಇವರ ಗುಲಾಮಗಿರಿ ಇಲ್ಲವೇ ದುರಾಡಳಿತದಲ್ಲಿ ಸಿಲುಕುತ್ತಿರುವುದು ವಿಪರ್ಯಾಸವೇ ಸರಿ.

ಈಗ ಶ್ರೀಸಾಮಾನ್ಯನೂ ತಿಳಿವಳಿಕೆ ಹೊಂದಿದ್ದಾನೆ. ಟಿ.ವಿ.ಯಲ್ಲಿ ಇವರ ವರ್ತನೆ ನೋಡುತ್ತಾನೆ. ಪತ್ರಿಕೆಗಳು ಇವರ ಭ್ರಷ್ಟತೆಯನ್ನು ಬಯಲು ಮಾಡುತ್ತಿವೆ. ಜನತೆ ಎಚ್ಚೆತ್ತುಕೊಂಡು ಸರ್ಕಾರ ಬದಲಿಸಬೇಕು. ಸರ್ವಾಧಿಕಾ... ಅಪ್ಪನ ದುರಹಂಕಾರದ ಕೂಸೇ ಮುಖ್ಯಮಂ... ಇಲ್ಲಿ ಪ್ರಜಾಪ್ರಭುತ್ವ ಆಳ್ವಿಕೆ ಇದೆಯೋ ಮಹಾರಾ... ಯುವರಾಜ, ಮಹಾಮಂತ್ರಿಗಳ ಆಡಳಿತ ಇದೆಯೋ ಎಂಬಂತಾಗಿದೆ. ಈ ಬಿಜೆಪಿಗೆ ಸಿಗಬಾರದ ಅಧಿಕಾ... ಸಿಕ್ಕುಬಿಟ್ಟಿದೆ. ಅರ್ಧರಾತ್ರಿಯಲ್ಲಿ ಕೊಡೆ ಹಿಡಿಯು... ದೌಲತ್ತು ಇವರದ್ದು.

ಇದನ್ನೆಲ್ಲಾ ಮೂಕ ಪ್ರೇಕ್ಷಕನಾಗಿ ನೋಡು... ಮತದಾರ ಖಂಡಿತ ಇವರಿಗೊಂದು ಗತಿ ಕಾಣಿಸುತ್ತಾ...

-ಚಿತ್ರಾ ಬಿ.ಎಸ್., ಶಿಕಾರಿಪು...

ನವೆಂಬರ್ 29ರ ಸಂಚಿಕೆ ನೋಡಿದೆ. "ಕೋಮು... ಸೌಹಾರ್ದ ರ‍್ಯಾಲಿ" ಯಶಸ್ವಿಯಾಗಿದ್ದು ಸಂತೋಷದ ವಿಷಯ. ಲಂಕೇಶ... ಇದ್ದಾಗ ಹಿಂದೆ ಪ್ರಗತಿರಂ... ಪರ್ಯಾಯ ಸಮ್ಮೇಳನ, ಅಕ್ಟೋಬ... 2ರ ಉಪವಾಸ ಕಾರ್ಯಕ್ರಮದ... ಪಾಲ್ಗೊಂಡಿದ್ದೆ. ಈಗ ನಿಮ್ಮೆಲ್ಲರ ಪ್ರಗತಿಪರ ಹೋರಾ... ಜಯವಾಗಲಿ. ಸಾರಾ ಅಬೂಬಕ್ಕರ್ ಅವರ ಲೇಖ... ಮುಸ್ಲಿಂ ಜನಾಂಗದ ಕಣ್ಣು ತೆರೆಸಲಿ. 'ಅಹಿಂದ'ದಂತ... ದಲಿತ ಸಂಘಟನೆಗಳು ಶಕ್ತಿಯುತವಾಗಿ ಬೆಳೆದಾಗಲ್ಲ... ಪ್ರಗತಿ. ಇಡೀ ನಾಡಿನ ಶಕ್ತಿ ಒಂದಾದಾಗ, ಪ್ರಗತಿಪ... ಚಿಂತಕರು ಹೆಚ್ಚಾದಾಗ ನನಸಾದೀತು.

- ಅಕ್ಬರ್ ಸಿ. ಕಾಲಿಮಿರ್ಚಿ, ಕೊಪ್ಪ...

ಹ್ಯಾಟ್ರಿಕ್ ಹೀರೋ ಆದ ಗಳಿಗೆ....

ನನ್ನ ಮಗು ಹೇಗಿರುತ್ತದೆ? ಗಂಡು ಮಗ ಹುಟ್ತಾನಾ? ಅಥವಾ ಹೆಣ್ಣು ಮಗಳು ಬರ್ತಾಳಾ? ಮುಂತಾದ ಹಲವಾರು ವಿಷಯಗಳ ಬಗ್ಗೆ ನಮ್ಮ ಕುಟುಂಬದಲ್ಲಿ ಅನೇಕರಿಗೆ ಅನೇಕ ತರಹ ಕ್ಯೂರಿಯಾಸಿಟಿ ಇತ್ತು. ಆದರೆ ನನಗೆ ಇಂತಹ ಯಾವುದೇ ಕುತೂಹಲವಂತೂ ಇರಲಿಲ್ಲ. ಆದರೆ ನನ್ನಲ್ಲಿ ಟೆನ್ಷನ್ ಇತ್ತು. ಹುಟ್ಟಿದ ಮಗು ಗಂಡಾಗಲಿ, ಹೆಣ್ಣಾಗಲಿ ಅದು ಆರೋಗ್ಯಕರವಾಗಿರಬೇಕು ಎಂದಷ್ಟೇ ನಾನು ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ.

ಆದರೆ ಪತಿಯಾದವನಿಗೆ ಕೆಲವು ಜವಾಬ್ದಾರಿಗಳಿರಬೇಕು; ಹೆರಿಗೆಯ ಸಮಯದಲ್ಲಿ ಪತ್ನಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗಿರುವುದು ಅಂತಹ ಜವಾಬ್ದಾರಿಗಳಲ್ಲಿ ಒಂದು. ವಿದೇಶಗಳಲ್ಲಿ ಹೆರಿಗೆ ಸಂದರ್ಭದಲ್ಲಿ ಗಂಡನಿಗೆ ಆಸ್ಪತ್ರೆಯ ಒಳಗೆ ಬಿಡುತ್ತಾರೆ. ಅಷ್ಟೇ ಅಲ್ಲ, ಗಂಡನ ಸಮಕ್ಷಮದಲ್ಲಿ ವೈದ್ಯರು ಹೆರಿಗೆ ಮಾಡಿಸುತ್ತಾರೆ. ಹೀಗೆ ಮಾಡಿಸುವುದರಿಂದ ಹೆಣ್ಣಿಗೆ ಹೆರಿಗೆ ನೋವು ಕಡಿಮೆಯಾಗುತ್ತದೆ ಎಂಬ ಮಾತಿದೆ. ಆದರೆ ನಮ್ಮ ದೇಶದಲ್ಲಿ ಅದಕ್ಕೆ ಅವಕಾಶವಿಲ್ಲವಲ್ಲ.

ನನ್ನ ಪತ್ನಿ ಗೀತಾಳಿಗೆ ಹೆರಿಗೆ ನೋವು ಆರಂಭವಾದ ಕೂಡಲೇ ರಿಚ್‌ಮಂಡ್ ಸರ್ಕಲ್ ಬಳಿ ಇರುವ ರಿಪಬ್ಲಿಕ್ ನರ್ಸಿಂಗ್‌ಹೋಂನಲ್ಲಿ ದಾಖಲು ಮಾಡಲಾಯಿತು. ನನ್ನ ಅಮ್ಮ, ಗೀತಾಳ ಅಮ್ಮನ ಸಮೇತ ಅನೇಕ ಜನರು ಆಕೆಯ ಆರೈಕೆಗೆ ತಯಾರಾಗಿದ್ದರು. ಆದರೆ ನಾನು ಮಾತ್ರ ಕುಳಿತು ಸುಮ್ಮನೆ ಆಲೋಚನೆ ಮಾಡಿದೆ; ನನ್ನ ಕುಟುಂಬದ ಕುಡಿಯೊಂದು ಈ ಜಗತ್ತಿಗೆ ಕಾಲಿಡುವ ಈ ಪರ್ವಕಾಲದಲ್ಲಿ ನಾನೇನು ಮಾಡಬೇಕು? ಎಂದು ಚಿಂತಿಸುತ್ತಾ ಕುಳಿತೆ. ನನ್ನ ಮಗುವನ್ನು ನಾನು ಹೇಗೆ ಸ್ವಾಗತಿಸಬೇಕು, ಹೇಗೆ ಮುದ್ದಾಡಬೇಕು? ಎಂದು ಕನಸು ಕಾಣಲು ಶುರು ಮಾಡಿದೆ.

ಆಸ್ಪತ್ರೆಯ ಪಕ್ಕದ ವುಡ್‌ಲ್ಯಾಂಡ್ಸ್‌ನಲ್ಲೇ ರೂಂ ಮಾಡಿ ಗಂಟೆಗೊಮ್ಮೆ ಆಸ್ಪತ್ರೆಗೆ ಹೋಗಿ ಗೀತಾಳನ್ನು ವಿಚಾರಿಸಿಕೊಂಡು ಬರುತ್ತಿದ್ದೆ. ಹುಟ್ಟಲಿರುವ ನನ್ನ ಮಗುವಿನ ತಂದೆಯಾಗಿ, ನನ್ನ ಧರ್ಮಪತ್ನಿಯ ಪತಿಯಾಗಿ ಆ ಕ್ಷಣ, ಆ ಸಂದರ್ಭದಲ್ಲಿ ನಾನು ಎಲ್ಲವನ್ನೂ ಮರೆತು ಕನಿಷ್ಠ ಅಲ್ಲಿ ಹಾಜರಿರದಿದ್ದರೆ ದೊಡ್ಡ ತಪ್ಪು ಮಾಡಿದಂತಾಗುತ್ತದೆ ಎಂಬುದು ನನ್ನ ನಂಬಿಕೆಯಾಗಿತ್ತು.

ಕೊನೆಗೂ ನನ್ನ ಮನಮೆಚ್ಚಿದ ಹುಡುಗಿ ನಮ್ಮ ಕುಟುಂಬಕ್ಕೆ ಬಂದಳು. ನಮ್ಮ ಕುಟುಂಬದಲ್ಲಿ ಎಲ್ಲಿಲ್ಲದ ಸಂಭ್ರಮ! ಎಲ್ಲರೂ ಆಸ್ಪತ್ರೆಗೆ ದೌಡಾಯಿಸಿದರು. ಈ ಸಂದರ್ಭದಲ್ಲಿ ನನಗೆ ಮತ್ತೊಂದು ಪೇಚಿನ ಪ್ರಸಂಗ ಎದುರಾಯಿತು. ಗೀತ ಮಗುವಿಗೆ ಜನ್ಮ ನೀಡಿದ ಮರುದಿನವೇ ನಾನು ಮದ್ರಾಸಿಗೆ ಹೋಗಬೇಕಾಗಿತ್ತು. 'ಮನಮೆಚ್ಚಿದ ಹುಡುಗಿ' ಚಿತ್ರದ ಒಂದು ಚಿಕ್ಕ ಪ್ಯಾಚ್‌ವರ್ಕ್ ಕೆಲಸವಿತ್ತು.

'ಗೌರಮ್ಮಾ..... ನಿನ್ನ ಗಂಡಾ ಯಾರಮ್ಮ..?' ಈ ಹಾಡಿನ ಮಧ್ಯೆ ಒಂದು ಮ್ಯೂಸಿಕ್ ತುಣುಕಿನಲ್ಲಿ ನಾನು ನಟಿಸಿದ್ದು ಅಷ್ಟೊಂದು ಚೆನ್ನಾಗಿ ಬಂದಿಲ್ಲ ಎಂದು ಅಪ್ಪಾಜಿ ಹೇಳಿದ ನಂತರ ಮದ್ರಾಸಿನಲ್ಲಿ ಅದಕ್ಕಾಗಿ ವಿಶೇಷ ಸೆಟ್‌ಅನ್ನು ಹಾಕಿದ್ದರು. ನಾನು ಶಿವನ ಪಾತ್ರಧಾರಿಯಾಗಿ ಅಲ್ಲಿ ನಟಿಸಬೇಕಿತ್ತು, ನನ್ನ ಜೊತೆಗೆ ಸುಧಾರಾಣಿಯೂ ನಟಿಸಬೇಕಿತ್ತು. ಆದರೆ ಈ ಶೂಟಿಂಗ್ ನನ್ನ ಮಗಳು ಹುಟ್ಟಿದ ಮರುದಿನವೇ ಇರುತ್ತದೆಂದು ನಾನು ಭಾವಿಸಿರಲಿಲ್ಲ.


ಒಂದು ಕಡೆ ಮನೆಯಲ್ಲಿ ಸಂಭ್ರಮ, ಮತ್ತೊಂದೆಡೆ ಕರ್ತವ್ಯದ ಕರೆ... ಈ ಎರಡರ ನಡುವೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ನನಗೆ ಸಮಸ್ಯೆಯಾಗಲೀ ಇಲ್ಲ, ಕಲಾವಿದನಾದವನು ಯಾವಾಗಲೂ ಕಲೆಗೆ ಮೊದಲ ಪ್ರಾಮುಖ್ಯತೆ ನೀಡಬೇಕು. ಕಲಾವಿದನ ಸುಖ ದುಃಖ ನೋವುಗಳು ಎಷ್ಟೇ ಇದ್ದರೂ ಅದನ್ನೆಲ್ಲ ಮರೆತು ಕೆಲಸ ಮಾಡಬೇಕು ಎಂದು ನನ್ನ ಅಪ್ಪಾಜಿ ಬಹಳ ಹಿಂದೆ ಹೇಳಿಕೊಟ್ಟ ಮಾತು ನೆನಪಿಗೆ ಬಂತು. ಅಪ್ಪಾಜಿಯೇ ಇಂತಹ ಹಲವಾರು ಸಂದರ್ಭಗಳಲ್ಲಿ ನಿರ್ಮಾಪಕರಿಗೆ ತೊಂದರೆಯಾಗಬಾರದು ಎಂಬ ಕಾರಣದಿಂದ ನಮ್ಮ ಮನೆಯ ಅನೇಕ ಹಬ್ಬ-ಸಂಭ್ರಮಗಳಿಗೆ ಚಕ್ಕರ್ ಹೊಡೆದದ್ದು ನನಗೆ ನೆನಪಾಯಿತು. ನಾನೂ ನನ್ನ ಅಪ್ಪಾಜಿಯ ದಾರಿಯನ್ನೇ ಅನುಸರಿಸಿದೆ.

ಈ ಚಿತ್ರದ ನಿರ್ಮಾಪಕರಾಗಿದ್ದ ನನ್ನ ಅಂಕಲ್ ಒಂದು ವಾರ ಶೂಟಿಂಗ್ ಬೇಕಾದರೆ ಮುಂದೂಡೋಣ ಎಂದು ಹೇಳಿದರು. ಆದರೆ ನಾನು ಮಾತ್ರ ಅದನ್ನು ಒಪ್ಪಲು ತಯಾರಿರಲಿಲ್ಲ, ಯಾಕೆಂದರೆ ವರಮಹಾಲಕ್ಷ್ಮಿ ಪೂಜೆಯ ದಿನದಂದು ಚಿತ್ರವನ್ನು ಬಿಡುಗಡೆ ಮಾಡುವುದೆಂದು ಆದಾಗಲೇ ಘೋಷಣೆ ಮಾಡಿದ್ದರು. ಹೀಗಾಗಿ ನನ್ನಿಂದಾಗಿ ಅವರಿಗೆ ತೊಂದರೆ ಆಗಬಾರದು ಎಂಬ ನಿರ್ಧಾರಕ್ಕೆ ಬಂದೆ. ಮಗಳು ಹುಟ್ಟಿದ ಮರುದಿನ ವುಡ್‌ಲ್ಯಾಂಡ್ಸ್ ಹೋಟೆಲಿನಿಂದಲೇ ನೇರವಾಗಿ ವಿಮಾನ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ಮದ್ರಾಸಿಗೆ ಪ್ರಯಾಣಿಸಿದೆ.

ಈ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ನಾನು ಮೇಲಿನಿಂದ ಜಂಪ್ ಮಾಡುವಾಗ ಕೈಮುರಿದುಕೊಂಡಿದ್ದೆ. ಇದರಿಂದಾಗಿ ಮೂರ್ನಾಲ್ಕು ದಿನ ಶೂಟಿಂಗ್ ಅನಿವಾರ್ಯವಾಗಿ ಸ್ಥಗಿತಗೊಂಡಿತ್ತು. ಆ ನೋವಿನ ಅನುಭವ ನಾನೊಬ್ಬನೇ ಅನುಭವಿಸಿದ್ದೇನೆ. ಅದನ್ನು ನಿಮ್ಮ ಜೊತೆ ಹಂಚಿಕೊಳ್ಳಲು ನನಗಿಷ್ಟವಿಲ್ಲ. ನಿಮಗೇನಿದ್ದರೂ ಬರೀ ಸಿಹಿ ಹಂಚಿಕೆ ಅಷ್ಟೇ. ಅದೇರೀತಿ ಈ ಚಿತ್ರದಲ್ಲಿ ಚಿರತೆ ಜೊತೆ ನಾನು ಫೈಟಿಂಗ್ ಮಾಡಬೇಕಾಯಿತು. ಅನೇಕರು ನನ್ನ ಬದಲಿಗೆ ಡ್ಯೂಪ್‌ನ್ನು ಬಳಸಿಕೊಳ್ಳಿ ಎಂದು ಸಲಹೆ ನೀಡಿದ್ದರು. ಆದರೆ ನಾನು ಉಹೂಂ ಅಂದೆ. ಹೀರೋ ಆದವನು ಇಂತಹ ಕ್ಲಿಷ್ಟಕರ ಸನ್ನಿವೇಶವನ್ನು ಎದುರಿಸಬೇಕು. ಆಗ ಮಾತ್ರ ಥಿಯೇಟರಿನಲ್ಲಿ ಪ್ರೇಕ್ಷಕರು ಹೊಡೆಯುವ ಚಪ್ಪಾಳೆಗೆ ಅರ್ಥ ಬರುತ್ತೆ ಎಂಬುದು ನನ್ನ ನಂಬಿಕೆ. ಈ ಚಿರತೆಗೆ ಟ್ರೈನಿಂಗ್ ನೀಡಿದ್ದರಿಂದ ನನಗೆ ಫೈಟಿಂಗ್ ಮಾಡಲು ಏನೂ ಹೆದರಿಕೆಯಾಗಲಿಲ್ಲ. ಆದರೂ ಕೆಲವೊಮ್ಮೆ ಈ ರೀತಿ ತರಬೇತಿ ನೀಡಿದ ಚಿರತೆಗಳು ಸಡನ್ನಾಗಿ ವೈಲ್ಡ್ ಆಗುತ್ತವೆಯಂತೆ. ಅಂತಹ ಸಂದರ್ಭದಲ್ಲಿ ಆ ದೇವರು ಮಾತ್ರ ನಮ್ಮನ್ನು ಕಾಪಾಡಲು ಸಾಧ್ಯ. ನನಗೆ ಇಂತಹ ದೃಶ್ಯಗಳನ್ನು ಎದುರಿಸುವುದೆಂದರೆ ಮೊದಲಿನಿಂದಲೂ ಒಂಥರಾ ಆಸಕ್ತಿ. ಇದಕ್ಕೆಲ್ಲಾ ಬೇಕಾಗಿರುವುದು ಕೇವಲ ವಿಲ್ ಪವರ್ ಮಾತ್ರ. ಆ ದೇವರು ನನಗೆ ವಿಲ್ ಪವರ್ ನೀಡಿದ್ದರಿಂದ ಚಿರತೆ ಜೊತೆ ಹೋರಾಡುವುದು ನನಗೇನೂ ಕಷ್ಟವಾಗಲಿಲ್ಲ. ಆದರೆ ಆ ಎರಡು ದಿನಗಳ ಕಾಲ ನಮ್ಮ ಯೂನಿಟ್‌ನಲ್ಲಿ ಮಾತ್ರ ಎಲ್ಲರೂ ಟೆನ್ಷನ್ ನಲ್ಲೇ ಕಾಲ ಕಳೆದರು.

ನಿರೂಪಣೆ: ಸದಾಶಿವ ಶೆಣೈ

31



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಕೊನೆಗೂ ಅಂದು ಕೊಂಡಂತೆ ವರಮಹಾಲಕ್ಷ್ಮಿ ಹಬ್ಬದ ದಿನ 'ಮನಮೆಚ್ಚಿದ ಹುಡುಗಿ' ಚಿತ್ರ ಬಿಡುಗಡೆಯಾಯಿತು. ಮೊದಲ ದಿನದಿಂದಲೇ ಥಿಯೇಟರ್‌ನಲ್ಲಿ ಜಾತ್ರೆಯಂತೆ ಜನಸಂದಣಿ ಸೇರಿಕೊಂಡಿತು. ಬೆಂಗಳೂರು ಮಾತ್ರವಲ್ಲ, ಎಲ್ಲ ಕಡೆ ಪ್ರೇಕ್ಷಕರು ಚಿತ್ರವನ್ನು ಮೆಚ್ಚಿಕೊಂಡರು. ಆನಂದ್ ಮತ್ತು ರಥಸಪ್ತಮಿ ಚಿತ್ರಕ್ಕಿಂತಲೂ ಈ ಚಿತ್ರದ ಓಪನಿಂಗ್ ಅದ್ಭುತವಾಗಿತ್ತು. ಶಿವರಾಜ್‌ಕುಮಾರ್-ಸುಧಾರಾಣಿ ಜೋಡಿ ಸೂಪರ್ ಎಂದು ಜನ ಮಾತಾಡಿಕೊಳ್ಳಲು ಶುರು ಮಾಡಿದರು...

ಎಂದಿನಂತೆ ಮತ್ತೆ ನನ್ನ ಕಣ್ಣು ಭಾನುವಾರದ ಪತ್ರಿಕೆಗಾಗಿ ಹಾತೊರೆಯುತ್ತಿತ್ತು. 'ಮಾಡ್ರನ್ ಡ್ರೆಸ್ ಹಾಕಿ ಡಿಸ್ಕೋ ಡ್ಯಾನ್ಸ್ ಮಾಡುತ್ತಾ ಚಿತ್ರರಂಗಕ್ಕೆ ಎಂಟ್ರಿಯಾದ ಶಿವರಾಜ್‌ಕುಮಾರ್, ಕಿತ್ತುಹೋದ ಈ ಪಂಚೆ ಮತ್ತು ಪೈಜಾಮದಲ್ಲಿ ಕೂಡ ಚೆನ್ನಾಗಿ ನೃತ್ಯ ಮಾಡಿ ಜನರ ಮನಸ್ಸನ್ನು ಗೆದ್ದಿದ್ದಾರೆ. ಈತ ಜನಪದ ನೃತ್ಯಕೂಡ ಮಾಡಬಲ್ಲ' ಎಂಬಿತ್ಯಾದಿ ವಿಮರ್ಶೆಗಳನ್ನು ಪತ್ರಕರ್ತರು ಬರೆದು ನನ್ನನ್ನು ಹುರಿದುಂಬಿಸಿದರು.

ಹಾಗೆ ನೋಡುತ್ತಾ ಹೋದಂತೆ ನನ್ನನ್ನು ಪ್ರೇಕ್ಷಕರು ಮತ್ತು ಗಾಂಧಿನಗರದವರು 'ಹ್ಯಾಟ್ರಿಕ್ ಹೀರೋ' ಎಂದು ಕರೆದು ಸನ್ಮಾನಿಸಿದರು. ನಾಯಕನಟನೊಬ್ಬನ ಮೊದಲ ಮೂರು ಚಿತ್ರಗಳು ಸಿಲ್ವರ್ ಜ್ಯೂಬಿಲಿ ಆಚರಿಸಿರುವುದು ಇದೇ ಮೊದಲು ಎಂದು ನನ್ನನ್ನು ಎಲ್ಲರೂ ಕೊಂಡಾಡಿದರು. ಆದರೆ ನನಗೆ ಈ ಬಿರುದುಗಳು ಏನೂ ಅನ್ನಿಸಲೇ ಇಲ್ಲ, ನಾನು ಇನ್ನೂ ಚೆನ್ನಾಗಿ ನಟಿಸಬೇಕು ಎಂಬ ಹಸಿವು ನನ್ನಲ್ಲಿತ್ತೇ ವಿನಃ ನಾನು ಯಾರೂ ಸಾಧಿಸದ ಸಾಧನೆಯನ್ನು ಮಾಡಿದ್ದೇನೆ ಎಂದು ಅನ್ನಿಸಲೇ ಇಲ್ಲ. ಹೀಗಾಗಿ ಇವತ್ತಿಗೂ ಪ್ರತಿ ಬಾರಿಯೂ ಹೊಸ ಚಿತ್ರಕ್ಕೆ ಕ್ಯಾಮೆರಾ ಎದುರಿಸುವಾಗ ಇದು ನನ್ನ ಮೊದಲ ಚಿತ್ರ ಎಂಬ ಭಾವನೆ ನನ್ನಲ್ಲಿ ಸೃಷ್ಟಿಯಾಗುತ್ತದೆ.

ಹ್ಯಾಟ್ರಿಕ್ ಹೀರೋ ಎಂದು ಎಲ್ಲರೂ ಕರೆದಾಗ ನನಗನ್ನಿಸಿದ್ದು ಇಷ್ಟು: ನನಗೆ ಜನ್ಮ ನೀಡಿದ ನನ್ನ ಹೆತ್ತವರಿಂದ ನನಗೆ ಈ ಸೌಭಾಗ್ಯ ಸಿಕ್ಕಿದೆ. ನಾನು ಯಾವ ಕ್ಷಣದಲ್ಲಿ ಈ ಭೂಮಿಗೆ ಕಾಲಿಟ್ಟಿದ್ದೇನೋ ಆ ಘಳಿಗೆ ಬಹುಶಃ ಚೆನ್ನಾಗಿರಬೇಕು ಎಂದೆನ್ನಿಸಿತು. ಇದೆಲ್ಲದಕ್ಕಿಂತಲೂ ಮುಖ್ಯವಾಗಿ ನಾನು ಗಮನಿಸಿದ್ದು ನನಗೆ ಆರಂಭದಿಂದಲೂ ಎಲ್ಲವೂ ಸಕಾರಾತ್ಮಕವಾಗಿ ಕೂಡಿಬಂದದ್ದು. ನಿರ್ಮಾಪಕರು ಮೆಚ್ಚಿದರು. ಒಳ್ಳೆಯ ನಿರ್ದೇಶಕರಾದ ಸಿಂಗೀತಂ ಅವರಿಂದ ಚಿತ್ರರಂಗಕ್ಕೆ ಕಾಲಿಟ್ಟೆ. ಗೌರಿಶಂಕರ್ ನನ್ನನ್ನು ಕ್ಯಾಮೆರಾ ಕಣ್ಣಲ್ಲಿ ಸುಂದರವಾಗಿ ಕಾಣಿಸಿದರು. ಕೈಲಾಸಂ ಮಾಸ್ತರು ನನ್ನನ್ನು ಚೆನ್ನಾಗಿ ಕುಣಿಸಿದರು. ಶಿವಯ್ಯ ಮಾಸ್ಟರ್ ಮತ್ತು ಸ್ವಾಮಿ ಮಾಸ್ಟರ್ ನನ್ನಲ್ಲಿರುವ ಸಾಹಸಮಯ ಪ್ರವೃತ್ತಿಯನ್ನು ಚೆನ್ನಾಗಿ ಬಿಂಬಿಸಿದರು. ಇದೆಲ್ಲಕ್ಕಿಂತ ಮುಖ್ಯವಾಗಿ ಅಭಿಮಾನಿಗಳು ನನ್ನನ್ನು ಇಷ್ಟಪಟ್ಟರು. ಇನ್ನೂ ವಿಶೇಷ ಎಂದರೆ ಈ ಮೂರೂ ಚಿತ್ರಗಳಿಗೆ ಪತ್ರಕರ್ತರು ಮೆಚ್ಚಿ ಲೇಖನಗಳನ್ನು ಬರೆದರು. ಆಗ ಈಗಿನ ತರಹ ಟೀವಿ ಮಾಧ್ಯಮ ಇರಲಿಲ್ಲ, ಈ ಪತ್ರಕರ್ತರು ಬರೆದದ್ದೇ ವೇದವಾಕ್ಯವಾಗಿತ್ತು. ಈ ಮೂರೂ ಚಿತ್ರದ ಸಂದರ್ಭದಲ್ಲಿ ನಾನು ಅವರಿಗಾಗಿ ಪಾರ್ಟಿ ಇಟ್ಟಿಲ್ಲ; ಅವರನ್ನು ಭೇಟಿಯಾಗಿಲ್ಲ ಎಂಬುದು ವಿಶೇಷ. ಹೀಗೆ ಒಬ್ಬ ಕಲಾವಿದನಿಗೆ ಚಿತ್ರೋದ್ಯಮದ ಎಲ್ಲಾ ವಲಯಗಳಿಂದ ಅಭೂತಪೂರ್ವ ಸ್ವಾಗತ ಮತ್ತು ಪ್ರೋತ್ಸಾಹ ಸಿಕ್ಕಿದರೆ ಎಲ್ಲರೂ ವಿಜೃಂಭಿಸುತ್ತಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಎಲ್ಲರಿಗೂ ನನ್ನ ಮನತುಂಬಿದ ಕೃತಜ್ಞತೆಯನ್ನು ಹೇಳುತ್ತಿದ್ದೇನೆ.

'ಮನಮೆಚ್ಚಿದ ಹುಡುಗಿ' ಚಿತ್ರ ಯಶಸ್ವಿಯಾಯಿತು. ವಾಟ್ ನೆಕ್ಸ್ಟ್? ಎಂದು ನಮ್ಮ ಮನೆಯಲ್ಲಿ ಚರ್ಚೆ ಆರಂಭವಾಯಿತು. ನಾನು ಸುಮ್ಮನೇ ಕುಳಿತುಕೊಂಡೆ. ಆಗ ನನ್ನ ಅಮ್ಮ 'ಶಿವ ಮೆಚ್ಚಿದ ಕಣ್ಣಪ್ಪ' ಮಾಡೋಣ ಎಂದು ಸಲಹೆ ನೀಡಿದರು. ಅಮ್ಮನ ಮಾತು ಕೇಳಿದ ನಾನು ಒಮ್ಮೆಲೇ ದಿಗ್ಭ್ರಾಂತನಾದೆ. ನಿಜ ಹೇಳಬೇಕೆಂದರೆ ಒಮ್ಮೆ ಬೆವೆತುಬಿಟ್ಟೆ. ಅಮ್ಮ ಹೇಳಿದ್ದಕ್ಕೆ ನಾನು ಎಂದೂ ನೋ.. ಅಂದವನೇ ಅಲ್ಲ, ಆದರೆ ಮೊದಲ ಬಾರಿಗೆ ನಾನು ಈ ಸಿನಿಮಾ ಬೇಡಮ್ಮಾ ಎಂದು ಅಮ್ಮನ ಬಳಿ ಕೇಳಿಕೊಂಡೆ.



ಅಮ್ಮ 'ಯಾಕೆ ಕಂದಾ?' ಎಂದು ಕೇಳಿದರು. ಅಲ್ಲಮ್ಮಾ ಇದು ಅಪ್ಪಾಜಿ ಮಾಡಿದ ಮೊದಲ ಸಿನಿಮಾ; ನಾನು ಇಷ್ಟು ಬೇಗ ಇದನ್ನು ಮಾಡಿದರೆ ಚೆನ್ನಾಗಿರೋದಿಲ್ಲ. ದಯವಿಟ್ಟು ಈ ಸಿನಿಮಾ ಬಿಟ್ಟು ಬೇರೆ ಯಾವುದಾದರೂ ಹೇಳು ಮಾಡುತ್ತೇನೆ ಎಂದೆ.

ಅಪ್ಪಾಜಿ ಎಂದರೆ ನನಗೆ ಗೌರವ ಮಾತ್ರವಲ್ಲ ಭಯವೂ ಇತ್ತು. ಅಷ್ಟೇ ಅಲ್ಲ, ಪೌರಾಣಿಕ ಸಿನಿಮಾದಲ್ಲಿ ಪಾತ್ರ ಮಾಡುವುದೆಂದರೆ ತಮಾಷೆಯಲ್ಲ, ಭಕ್ತಿಯ ಪಾತ್ರವನ್ನು ಮಾಡುವಾಗ ಕಣ್ಣಲ್ಲಿ ಭಕ್ತಿ ಕಾಣಿಸಬೇಕು. ಇಲ್ಲದಿದ್ದರೆ ನಾವು ಹಾಸ್ಯಾಸ್ಪದವಾಗಿ ಕಾಣಿಸುತ್ತೇವೆ. ಇದನ್ನೆಲ್ಲಾ ನಾನು ತುಂಬಾ ಗಂಭೀರವಾಗಿ ಆಲೋಚನೆ ಮಾಡಿ ಈ ಪಾತ್ರ ಬೇಡವೆಂದು ಹೇಳಿದ್ದೆ.

'ಇಲ್ಲ ಕಂದಾ.... ನೀನು ಈ ಪಾತ್ರದಲ್ಲಿ ನಟಿಸಬೇಕೆಂಬುದು ನನ್ನ ಆಸೆ' ಎಂದು ಅಮ್ಮ ಹೇಳಿದಾಗ ನಾನು ನನ್ನೆಲ್ಲಾ ಹಿಂಜರಿಕೆಯನ್ನು ಬದಿಗೊತ್ತಿ ಸುಮ್ಮನಿರಬೇಕಾಯಿತು. ಗಂಡ ಮಾಡಿದ ಪಾತ್ರದಲ್ಲೇ ಮಗನನ್ನೂ ನೋಡಬೇಕೆಂಬ ಅವರಿಗೆ ನೋವು ನೀಡಲು ನನ್ನ ಮನಸ್ಸು ಒಪ್ಪಲಿಲ್ಲ. ಯಾವುದೇ ಮಗನಿಗಾದರೂ ಅಮ್ಮನೇ ತಾನೆ ಸರ್ವಸ್ವ. ಹೀಗಾಗಿ ಶಿವ ಮೆಚ್ಚಿದ ಕಣ್ಣಪ್ಪ ಮಾಡಲು ಒಪ್ಪಿಕೊಂಡೆ. ಆ ಚಿತ್ರದಲ್ಲಿ ಅಪ್ಪಾಜಿ ಕೂಡ ನಟಿಸುತ್ತಾರೆ ಎಂದಾಕ್ಷಣ ನಾನು ತಬ್ಬಿಬ್ಬಾದೆ. ನನಗೆ ಏನು ಮಾಡಬೇಕೆಂದೇ ಗೊತ್ತಾಗಲಿಲ್ಲ, ಅಪ್ಪಾಜಿ ಚಿತ್ರದಲ್ಲಿ ನಾನು ನಟಿಸುವುದೇ ನನಗೆ ಕಷ್ಟವೆಂದುಕೊಂಡಿದ್ದಾಗ, ಅದೇ ಚಿತ್ರದಲ್ಲಿ ನನ್ನ ಎದುರು ಅಪ್ಪಾಜಿ ನಟಿಸುತ್ತಾರೆ ಎಂದಾಗ ನನ್ನ ಜಂಗಾಬಲವೇ ಹುದುಗಿಹೋಯಿತು. ಆಗ ನಾನು ಏನು ಮಾಡಿದೆ ಗೊತ್ತೇ?

(ಮುಂದುವರೆಯುತ್ತದೆ)



'ಹುಬ್ಬಳ್ಳಿ' ಮಂದಿಯ ಕೆಂಪೇಗೌಡ!

ಓಂ ಪ್ರಕಾಶ್ ರಾವ್ 'ಹುಬ್ಬಳ್ಳಿ'ಯ ತಂಡವನ್ನು ಇಟ್ಟುಕೊಂಡು 'ಕೆಂಪೇಗೌಡ' ಎಂಬ ಹೊಸ ಚಿತ್ರವನ್ನು ಅನೌನ್ಸ್ ಮಾಡಿದ್ದಾರೆ. ಸುದೀಪ್ ನಾಯಕ. ರಕ್ಷಿತಾ ಒಪ್ಪಿಕೊಂಡರೆ ಈ ಚಿತ್ರಕ್ಕೂ ಅವಳನ್ನೇ ನಾಯಕಿಯನ್ನಾಗಿ ಮಾಡುವ ಉದ್ದೇಶ ಇದೆ ಎಂದರು ಓಂಪ್ರಕಾಶ್. ಅದೇನೇ ಇರಲಿ ನಾಡಪ್ರಭು ಕೆಂಪೇಗೌಡ ಓಂಪ್ರಕಾಶ್ ಕೈಯಲ್ಲಿ ಹೇಗೆ ಮೂಡಿಬರುತ್ತಾರೋ ಎಂಬ ಟೆನ್ಷನ್ ಕೆಂಪೇಗೌಡರ ಅಭಿಮಾನಿಗಳಿಗೆ ಇದ್ದೇ ಇದೆ.



ಭಕ್ತ ಕನಕದಾಸನಾದ ಶಿವಣ್ಣ!

'ಗಂಡುಗಲಿ ಕುಮಾರರಾಮ' ಬಾಕ್ಸಾಫೀಸಿನಲ್ಲಿ ಅಮೋಘವಾಗಿ ನೆಲಕಚ್ಚಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಚಿತ್ರ ಬಿದ್ದುಹೋಗಿದ್ದರಿಂದ ದರ್ಶನ್ ನಟಿಸಬೇಕಾಗಿದ್ದ 'ಮದಕರಿ ನಾಯಕ' ಚಿತ್ರವನ್ನು ನಿರ್ಮಾಪಕ ಕೆ.ಸಿ.ಎನ್. ಚಂದ್ರು ರದ್ದುಪಡಿಸಿದ್ದರು. ಇನ್ನುಮುಂದೆ ಕನ್ನಡದಲ್ಲಿ ಪೌರಾಣಿಕ ಚಿತ್ರಗಳು ಖಂಡಿತವಾಗಿಯೂ ಬರುವುದಿಲ್ಲ ಎಂದು ಗಾಂಧಿನಗರದವರು ಗಿಣಿಶಾಸ್ತ್ರವನ್ನು ಕೂಡಾ ಹೇಳಿದ್ದರು.

ಆದರೆ ಈ ಗಿಣಿಶಾಸ್ತ್ರವನ್ನು ಮತ್ತೊಮ್ಮೆ ಸುಳ್ಳುಮಾಡಲು ಹೊರಟಿದ್ದಾರೆ ಶಿವರಾಜ್‌ಕುಮಾರ್. ಇವರು ಸದ್ಯದಲ್ಲೇ 'ಭಕ್ತ ಕನಕದಾಸ' ಎಂಬ ಪೌರಾಣಿಕ ಚಿತ್ರದಲ್ಲಿ ನಟಿಸುವುದು ಖಾತ್ರಿಯಾಗಿದೆ. ಇದನ್ನು ನಿರ್ದೇಶಿಸಲು ಪೌರಾಣಿಕ ಚಿತ್ರಗಳಲ್ಲಿ ದೊಡ್ಡ ಹೆಸರು ಮಾಡಿರುವ ತೆಲುಗಿನ ಖ್ಯಾತ ನಿರ್ದೇಶಕ ಕೆ. ರಾಘವೇಂದ್ರ ರಾವ್ ಒಪ್ಪಿಕೊಂಡಿದ್ದಾರೆ. ಅಂದಹಾಗೆ ಇಂತಹ ಸಂಕಷ್ಟದ ಸಂದರ್ಭದಲ್ಲೂ ಪೌರಾಣಿಕ ಚಿತ್ರವನ್ನು ನಿರ್ಮಿಸಲು ಹೊರಟಿರುವ ಗಟ್ಟಿ ಹೃದಯದ ನಿರ್ಮಾಪಕ ಯಾರು ಗೊತ್ತೇ? ನಟ ಶ್ರೀನಿವಾಸಮೂರ್ತಿ. ಶ್ರೀನಿವಾಸಮೂರ್ತಿಯ ಅಭಿರುಚಿ ಮತ್ತು ಸಾಹಸ ಮನೋಭಾವಕ್ಕೆ ನಮ್ಮದೊಂದು ಪುಟ್ಟ ನಮಸ್ಕಾರ.


ಹೌಸು... ಫುಲ್ಲು....



ನಾಯಕನಾಗಿ ಅಲ್ಲಸನಟನಾಗಿಯೂ ಸೋತ ಮದನ್ ಪಟೇಲ್ ತನ್ನ ಮಗ ಮಯೂರ್‌ನನ್ನು ಗೆಲ್ಲಿಸಲು ನೂರಾ ಎಂಟನೇ ಸಲ ಟ್ರೈ ಮಾಡಿ ಮತ್ತೆ ವಿಫಲನಾಗುತ್ತಿದ್ದಾನೆ.

ಪೇಪರ್‌ನಲ್ಲಿ 'ಸ್ಟೂಡೆಂಟ್' ಹೌಸ್‌ಫುಲ್ ಎಂದು ಓದಿದ ಜನ "ಹೌಸ್‌ಫುಲ್ ಇದ್ರೆ ನಾವ್ಯಾಕೆ ಹೋಗೋದು.... ಬ್ಲ್ಯಾಕ್‌ನಲ್ಲಿ ನೋಡೋ ಸಿನಿಮಾ ಅಂತೂ ಅಲ್ಲ ಸ್ಟೂಡೆಂಟ್" ಎಂದರಂತೆ. ಖುಷಿಗೊಂಡ ಮಯೂರ್ ಥಿಯೇಟರ್‌ಗೆ ಹೋದರೆ ಅಲ್ಲಿ ಖಾಲಿ ಹೊಡೆಯುತ್ತಿತ್ತು. ಸೀದಾ ಅಪ್ಪನಲ್ಲಿಗೆ ಬಂದ ಮಯೂರ್ "ಯಾಕ್ ಹೌಸ್‌ಫುಲ್ ಅಂತಾ ಜಾಹೀರಾತು ಹಾಕಿಸಿದ್ದೀರಾ? ಬರೋ ನಾಲ್ಕು ಜನಾನೂ ಬರ್‍ತಾ ಇಲ್ಲ" ಎಂದನಂತೆ. ಅದಕ್ಕೆ ಮದನ್ ಪಟೇಲ್ "ಆ ಬರೋ ನಾಲ್ಕು ಜನಾನೂ ನೋಡಿಯಾಯ್ತು... ಮುಂದಿನ ಸಿನಿಮಾಕ್ಕೆ ರೆಡಿ ಆಗು.... ನಮ್ಮ ಹಣೆಬರಹಾನೇ ಇಷ್ಟು ಬಿಡು" ಎಂದು ತಲೆ ಚಚ್ಚಿಕೊಂಡನಂತೆ!

ಮಗನಿಗಾಗಿ, 'ಮದನ'ನಿಗಾಗಿ



ಮಗನಿಗಾಗಿ, 'ಮದನ'ನಿಗಾಗಿ ಸಿನಿಮಾ ಬಿಡುಗಡೆಯ ರೂಲ್ಸ್‌ನ್ನೇ ಚೇಂಜ್ ಮಾ ರಾಜೇಂದ್ರಸಿಂಗ್ ಬಾಬು!


ಕಳೆದ ವಾರವೇ ಬರಬೇಕಾಗಿದ್ದ 'ಮದನ', ಬಿಡುಗಡೆಯಾದ ನಾಲ್ಕು ಚಿತ್ರಗಳ ಭರಾಟೆ ಹಿಂದೆ ಸರಿದಿದ್ದ. ಹೀಗೆ ಬೆಚ್ಚಿಬಿದ್ದ 'ಮದನ'ನನ್ನು ಈ ವಾರ ಥಿಯೇಟರಿಗೆ ತಂದಿದ್ದಾರೆ ಬಾಬ ಸೆಕ್ಯುರಿಟಿಯೊಂದಿಗೆ. ಹೇಗೆಂದರೆ ಮೊದಲು ವಾರಕ್ಕೆರಡೇ ಕನ್ನಡ ಚಿತ್ರಗಳ ರಿಲೀಸ್ ಎಂಬ ನಿಯ ಅದು ಪಾಲನೆಯಾಗಲೇ ಇಲ್ಲ. ಈಗ 'ಮದನ'ನನ್ನು ಗೆಲ್ಲಿಸುವ ಏಕೈಕ ಉದ್ದೇಶದಿಂದ ವಾರಕ ಫಿಲ್ಮ್ ರಿಲೀಸ್ ಎಂಬ ನಿಯಮ ಮಾಡಿಸಿದ್ದಾರೆ ರಾಜೇಂದ್ರಸಿಂಗ್ ಬಾಬು. ಇದರಿಂದ 'ತೆನಾ ಚಿತ್ರದ ಬಿಡುಗಡೆ ಮುಂದಕ್ಕೆ ಹೋಗಿದೆ. ಕಳೆದ ವಾರ ನಾಲ್ಕು ಚಿತ್ರಗಳು ಬಿಡುಗಡೆಯಾ ಆಗ ಎಲ್ಲಿದ್ದರು ಸಿಂಗ್‌ಬಾಬು? ಎರಡೇ ಸಿನಿಮಾ ರಿಲೀಸ್ ಸೂತ್ರ ಆಗ ಎಲ್ಲಿ ಹೋಗಿತ್ತು

'ಮದನ' ಮೊದಲೇ ಕದ್ದ ಮಾಲು. ಯಾವುದನ್ನೇ ಮುಂದಕ್ಕೆ ತಂದಿದ್ದರೂ, ಹಿಂದಕ್ಕೆ ದೂಡಿದ್ದರೂ 'ಮದನ' ಹೊಡೆಯುವ ಸೂಚನೆ ತೋರಿಸುತ್ತಿದೆ. ವಾರಕ್ಕೆ ಒಂದೇ ಸಿನಿಮಾ ರಿಲೀಸ್ ಎಂಬ ನಿಯಮ ಎಷ್ಟು ದಿನದ್ದು? ಹತ್ತು-ಹ ದಿನದಲ್ಲಿ 'ಮದನ' ಥಿಯೇಟರಿನಿಂದ ಕಿತ್ತುಕೊಂಡು ಬರುತ್ತಿದ್ದಂತೆ ಈ ನಿಯಮವೂ ಕಿತ್ತುಕೊಂಡು ಹೋಗಲಿದೆ. ಸಿಂಗ ಏನು ಸರ್ಕಸ್ ಮಾಡಿದರೂ ಕೆಟ್ಟ ಚಿತ್ರವನ್ನು ಗೆಲ್ಲಿಸಲಾಗುವುದಿಲ್ಲ ಎಂಬುದನ್ನು ನೆನಪಿಡಲಿ.



'ಅರಸು' ಚಿತ್ರದಲ್ಲಿ ಮೀರಾ ಜಾಸ್ಮಿನ್

ತ್ಯಾಗಮಯಿ ಅರಸು!



'ಅರಸು' ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ. ಈ ಚಿತ್ರದಲ್ಲಿ ಅತಿಥಿ ನಟರಾಗಿ ದರ್ಶನ್ ಮತ್ತು ಆದಿತ್ಯ ನಟಿಸಿದ್ದಾರೆ ಎಂಬ ಸುದ್ದಿ ಗಾಂಧಿನಗರದ ಉದ್ದಗಲಕ್ಕೂ ಕೇಳಿಬರುತ್ತಿದೆ. ಆದರೆ ರಾಜ್ ಸಂಸ್ಥೆಯವರು ಈ ಬಗ್ಗೆ ಇನ್ನೂ ಏನೂ ಹೇಳುತ್ತಿಲ್ಲ. ಬಹುಶಃ ಪ್ರೇಕ್ಷಕರು ಥಿಯೇಟರಿಗೆ ಬರುವಾಗ ಅಲ್ಲೇ ಅವರಿಗೆ ಸಸ್ಪೆನ್ಸ್ ನೀಡುವ ಉದ್ದೇಶ ಅವರದ್ದಿರಬಹುದು.


ಒಂದು ಮೂಲದ ಪ್ರಕಾರ ಚಿತ್ರದ ಇಬ್ಬರು ನಾಯಕಿಯರನ್ನು ಕ್ಲೈಮ್ಯಾಕ್ಸ್‌ನಲ್ಲಿ ನಾಯಕ ತನ್ನ ಸ್ನೇಹಿತರಿಗೆ ಧಾರೆಯೆರೆದು ಕೊಡುತ್ತಾನಂತೆ. ಹೀಗಾಗಿ ಆದಿತ್ಯ ದರ್ಶನ್ ಅರಸು ಚಿತ್ರದಲ್ಲಿ ಮದುಮಕ್ಕಳಾಗಿ ಕಾಣಿಸಿರುವ ಸಾಧ್ಯತೆಯಿದೆ.

ಈ ಸುದ್ದಿ ನಿಜವೇ ಆದಲ್ಲಿ ನಾಯಕ ಪುನೀತ್ ರಾಜ್‌ಕುಮಾರ್ ಒಂದು ರೀತಿಯಲ್ಲಿ ರ ಅವರನ್ನು ಓವರ್‌ಟೇಕ್ ಮಾಡಿದಂತಾಗುತ್ತದೆ. ಯಾಕೆಂದರೆ ಪ್ರೀತಿಸಿದ ಹೆಣ್ಣನ್ನು ಗೆಳೆ ಬಿಟ್ಟುಕೊಡುವ ತ್ಯಾಗರಾಜನ ಪಾತ್ರದಲ್ಲಿ ರಮೇಶ್ ಬೇಕಾದಷ್ಟು ಬಾರಿ ಮಿಂಚಿದ್ದಾರೆ. ಆದರೆ ಪುನೀತ್ ಇಬ್ಬಿಬ್ಬರು ಪ್ರೇಮಿಗಳನ್ನು ಧಾರೆಯೆರೆದಿದ್ದಾರೆಂದರೆ ರಮೇಶ್‌ಗಿಂತ ಮುಂದೆ ಸಾಗಿದ್ದಾ ಅರ್ಥವಲ್ಲವೇ?

ಐದನೇ ಕಂದನ್ಯಾರು?

30 ವರ್ಷದ ಹಿಂದಿನ ಸ್ಟೈಲಿನಲ್ಲಿ ಬ್ಯಾಕ್‌ಗ್ರೌಂಡಿನಲ್ಲಿ 'ಕಂದ ಕಂದ ಕಂದ ಕನ್ನಡದ ಕಂದ' ಎಂದು ಕಿರುಚಿಕೊಂಡಿದ್ದೇ ತಡ ಐವರು ಕನ್ನಡದ ಕಂದಗಳು ಸ್ಲೋ ಮೋಷನ್ನಿನಲ್ಲಿ ತೆರೆ ಮೇಲೆ ಹಾಜರ್! ಈ ಐವರೂ ವಿನೋದ್‌ರಾಜ್‌ಗಳೇ! ಇವರೆಲ್ಲ ಒಬ್ಬರೊಳಗೊಬ್ಬರು ಸೇರಿ ಒಂದು ಸ್ಟ್ರಾಂಗ್ 'ಕನ್ನಡದ ಕಂದ' ರೆಡಿಯಾಗುತ್ತದೆ. ಎರ್‍ರಾಬಿರ್‍ರಿ ಫೈಟು ಮಾಡುತ್ತದೆ.

ಅದೆಲ್ಲ ಬಿಡಿ; ಈ ಐದು ಕಂದಗಳ್ಯಾರು? ವಿನೋದ್‌ರಾಜ್ ಒಂದಾಯ್ತು.... ಮತ್ತೆ ಇನ್ನು ಮೂವರು ಕಂದಗಳು ನಿಮ್ಗೆ ಗೊತ್ತು. ಎಲ್ಲ ಸೇರಿ ನಾಲ್ಕಾಯಿತು. ಯಾವುದಿದು ಐದನೇ ಕಂದ? ಮೊನ್ನೆ ದೇವೇಗೌಡರು ಅಳುತ್ತಾ 'ಕುಮಾರ ನಿಮ್ಮೆಲ್ಲರ ಕಂದ.... ಅವನ ಪ್ರಾಣಕ್ಕೆ ಅಪಾಯವಿದೆ. ಅವನನ್ನು ಕಾಪಾಡಿ' ಎಂದಿದ್ದು ನೋಡಿದರೆ ಮತ್ತು ಹಿಂದೊಮ್ಮೆ ಕುಮಾರಸ್ವಾಮಿ ಹೇಳಿದ್ದನ್ನು ನೆನಪು ಮಾಡಿಕೊಂಡರೆ ಐದನೇ ಕಂದ ಕುಮಾರಸ್ವಾಮಿಯೇ ಇರಬೇಕು ಎನಿಸುತ್ತಿದೆ. ಆದರೆ ಇದೇ ದೇವೇಗೌಡರು "ಕುಮಾರಸ್ವಾಮಿಯೇ ನನ್ನ ನಿಜವಾದ ಮಗ" ಅಂದಿದ್ದರಲ್ಲಾ? ಇದೇನಿದು ಕಂದಮ್ಮಗಳ ಒಗಟು?!



'ತನನಂ' ಡ್ರೆಸ್: 25 ಸಾವಿರಕ್ಕೆ!


'ರೇಡಿಯೊ-ಒನ್' ಎಫ್.ಎಮ್. ಚಾನೆಲ್ ನಡೆಸುತ್ತಿರುವ 'ತನನಂ ತನನಂ' ವಿಶೇಷ ಕಾರ್ಯಕ್ರಮ ತುಂಬ ಜನಪ್ರಿಯವಾಗುತ್ತಿದೆ ಎಂಬುದಕ್ಕೆ 'ತನನಂ ತನನಂ'ನಲ್ಲಿ ನಾಯಕಿಯರು ಧರಿಸಿದ ಡ್ರೆಸ್‌ಗಳಿಗೆ ಬೇಡಿಕೆ ಬಂದಿರುವುದೇ ಸಾಕ್ಷಿ.

'ಕೂಗಳತೆ ದೂರದಲ್ಲಿ' ಹಾಡಿನಲ್ಲಿ ರಕ್ಷಿತಾ ಧರಿಸಿರುವ ಹಸಿರು ವರ್ಣದ ಡ್ರೆಸ್‌ಗಾಗಿ ಮೂವರು ಯುವಕರು 40 ಸಾವಿರ ರೂ.ಗಳಿಗೆ ಬಿಡ್ ಮಾಡಿದ್ದಾರೆ. ಇದು ಇನ್ನೂ ಏರಲಿದೆ. ಹಾಗೆಯೇ ಇನ್ನೊಂದು ಡ್ರೆಸ್‌ಗೆ 15 ಸಾವಿರ ರೂ. ಬಿಡ್ಡಿಂಗ್ ಆಗಿದೆ.

ಹುಟ್ಟುತ್ತಲೇ ಏಡ್ಸ್ ಪೀಡಿತರಾಗಿರುವ ನತದೃಷ್ಟ ಮಕ್ಕಳ ಆರೈಕೆ ಮಾಡುತ್ತಿರುವ ದೀನ್‌ಸೇವಾ ಚಾರಿಟೆಬಲ್ ಟ್ರಸ್ಟ್‌ಗೆ ಈ ಎಲ್ಲ ಬಿಡ್ಡಿಂಗ್ ಹಣವನ್ನು ಕೊಡುತ್ತಿರುವ ರೇಡಿಯೊ ಒನ್‌ಗೆ ಧನ್ಯವಾದಗಳು.



`SMS'- ಎಷ್ಟು ಜನಕ್ಕೆ ತಲುಪುತ್ತೊ?



ಕಳೆದ ಒಂದು ವರ್ಷದಿಂದ ಕುಂಟುತ್ತಾ ಸಾಗಿತ್ತು `SMS' ಚಿತ್ರೀಕರಣ. ಏಕೆಂದರೆ ಹೀರೋ ಕಮ್ ನಿರ್ಮಾಪಕಿ ಜಾನು ಕಾಲ ಮುರಿದುಕೊಂಡು ಕುಂಟುತ್ತಾ ನಡೆದಿದ್ದಳು. ಈಗ ಸದ್ದಿಲ್ಲದೇ ಅಂತಾ ರೀಲು ಸುತ್ತಿ ಕುಳಿತಿದ್ದಾ ನಿರ್ದೇಶಕ ಸಂದೀಪ್ ಮಲಾನಿ. ಸದ್ದಿಲ್ಲದ ಶೂಟಿಂಗ್‌ನಂತೆ ಸದ್ದಿಲ್ಲ ಥಿಯೇಟರ್‌ನಿಂದಾನೂ ಹೋಗು ಎಂಬುದು ಕೇಡಿಗಳ SMS.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Ma